ಧಾರವಾಡ ವಿಜಯ ನಿತ್ಯ ಪತ್ರಿಕೆ 1931 ಅಕ್ಟೋಬರ್

ಶುಕ್ರವಾರ	2.10.1931
ರವಿವಾರ	4.10.1931
ಸೋಮವಾರ	5.10.1931
ಬುಧವಾರ	8.10.1931
ಗುರುವಾರ	9.10.1931
ಶುಕ್ರವಾರ	10.10.1931
ಶನಿವಾರ	11.10.1931
ರವಿವಾರ	12.10.1931
ಸೋಮವಾರ	13.10.1931
ಬುಧವಾರ	15.10.1931
ಗುರುವಾರ	16.10.1931
ಶುಕ್ರವಾರ	17.10.1931
ಶನಿವಾರ	18.10.1931
ರವಿವಾರ	19.10.1931
ಸೋಮವಾರ	20.10.1931
ಬುಧವಾರ	22.10.1931
ಗುರುವಾರ	23.10.1931
ಶುಕ್ರವಾರ	24.10.1931
ಶನಿವಾರ	25.10.1931
ಸೋಮವಾರ	27.10.1931
ಬುಧವಾರ	29.10.1931
ಗುರುವಾರ	30.10.1931
ಶುಕ್ರವಾರ	31.10.1931

ನೋಟೀಸು

....(೦)....

ನಿಂಗಿ ಕೋಂ ಫಕೀರಪ್ಪ ಕುರುಬರ ಸಾಕೀನ ಹುಬ್ಬಳ್ಳಿ ಓಣಿ ಮಠದ ಹತ್ತರ ಇವಳಿಗೆ—

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಫಕೀರಪ್ಪಾ ತಂದಿ ಯಲ್ಲಪ್ಪಾ ಕುರುಬರ ಸಾಕೀನ ಉಗ್ನಿನಕೇರಿ ತಾಲೂಕ ಕಲಘಟಗಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ—

ನೀನು ನ ಮದಿವೆಯ ಹೆಂಡತಿಯಾಗಬೇಕು. ಎರಡುನ ರೂಪಾಯಿ ತೆರವು ಕೊಟ್ಟಿರುತ್ತದೆ. ನೀನು ನೆರೆ ಳಿಕ ಮದಿವೆಯಾಯಿತು. ನೀನು ನನ್ನ ಕೂಡ ಸ ಒಂದು ವರ್ಷ ಬಾಳಿವೆ ಮಾಡಿದಿ. ಆದರೆ ನಿ ತಿಯು ನೆಟ್ಟಗೆ ಇರಲಿಲ್ಲ ನಾನು ಮನೆಯಲ್ಲಿ ದಾಗ ನನ್ನ ಮಾಲಕಿಯ ದಾಗೀನೆಗಳು ಅಂದರೆ

೧ ಓಂಗಂದ ಬಳೀ ಜೋಡು ಒಂದು ತೊಲಿ ಐದು

೨ ತೋಳಬಂದಿ ಜೋಡು ಒಂದು ಕಿಮ್ಮತ ೨೦ ರೂಪಾಯಿ

೩ ಕರ್ಣಫೂಲು

೪ ಮದಿವೆಯ ಸೀರಿ ಕಿ|| ೩೦ ರೂಪಾಯಿ

೫ ನಡದೋಗಿನ ಬೆಳ್ಳೀ ಪಟ್ಟಿ ಒಂದು

೬ ಕಿರುಕಳ ದಾಗೀನೆಗಳು.

ಇಷ್ಟು ವೈದಿಂತೀದಿ. ಹೋಗಿ ಆಜಮಾಸು ನಾಲ್ಕೈದು ತಿಂಗಳಾಯಿತು. ನಿನ್ನ ತಂದಿಯು ಮನೆಯಲ್ಲಿ ಅಡಗಿಸಿಕೊಂಡು ಕೂತನು ಅಗ್ಗೀ ಫೌಜದಾರಿ ಮಾಡಬೇಕೆಂದೆನು. ದೈವದವರು ಹೇಳಿದ್ದರಿಂದ ಬಿಟ್ಟು ಬಿಟ್ಟೆನು. ದೈವದವರು ಎಷ್ಟು ಹೇಳಿದರೂ ನೀನು ಬರಲಿಲ್ಲ. ನಿನ್ನ ತಂದೆ ಕಳಿಸಿಕೊಡಲಿಲ್ಲ. ಆದ್ದರಿಂದ ಈ ನೋಟೀಸು ಕೊಡಬೇಕಾಯಿತು. ನೀನು ಈ ನೋಟೀಸು ಮುಟ್ಟಿದ ಕೂಡಲೆ ನನ್ನ ತೆರವಿನ ರೂಪಾಯಿ ೨೦೦ ಮತ್ತು ನನ್ನ ದಾಗೀನೆ ಮತ್ತು ಸೀರಿ ನನಗೆ ಕೊಟ್ಟು, ನನ್ನಿಂದ ಸೋಡಪತ್ರ ಪಡೆಯಬೇಕು. ಮತ್ತು ಇದೇ ನೋಟೀಸು ಸೋಡಪತ್ರವೆಂದು ತಿಳಿಯಬೇಕು. ನೀನು ನನ್ನ ಮನೀಬಿಟ್ಟು ಹೋಗುವಾಗ ಗರ್ಭಿಣಿ ಇ ಈ ನಂತರ ನೀನು ಬಸರಾಗಿ ಹಡೆದರೆ ಆ ಯುದು ಮತ್ತು ನಿನ್ನದು ನನ್ನ ಮೇಲೆ ಮತ್ತು ಸ್ವಾರ್ಜಿತ ಜಂಗಮ ಆಸ್ತಿಯ ಮೇಲೆ ಮುಂದ ಕಾಲ ಹಕ್ಕು ನಡೆಯಲಾರದು. ಆ ಸಂತತಿಗೆ ಜನಕ ತಂದಿ ಎಂದು ನನ್ನ ಹೆಸರು ಹಚ್ಚಸಬಾರದು. ಅಂತಾ ಕೊಟ್ಟ ಸೋಡಪತ್ರದ ನೋಟೀಸು- ತಿಳಿಯುವದು. ತಾ|| ೩೦ ಸಪ್ಟಂಬರ ೧೯೩೧ ನೇ ಇಸವಿ-

ಈ ಎಡಗೈ ಹೆಬ್ಬಟ್ಟಿನ ಗುರ್ತಾ ಫಕೀರಪ್ಪಾ ತಂದಿ ಯಲ್ಲಪ್ಪಾ ಕುರುಬರ ಈತನ ಕೈದು ಇರುತ್ತದೆ.

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿದ್ಧವರದೊಶರ ಆಸ್ವಾರ್ಜಿ, ಶ್ರೀ ಆರೂಢಸ್ವಾಮಿಗಳ ಕೃಪೆಯುತ್ತ, ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕುಸುವೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡ ದು. ವ್ಹಿ ಪಿ ಖರ್ಚು ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡ ಬೇಕು ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾ ಕಡಬೇಕು

ಮ್ಯಾ ವಿಜಯ ಧಾರವಾಡ

ನೋಟೀಸು

—(೦)—

ಹಣಮಂತಾ ಕುರುಬರ ಸಾಕೀನ ನೆಲವಡಿ ಈತನಿಗೆ-

ಕೆಳಗೆ ಹೆಬ್ಬಟ್ಟಿನ ಗುರ್ತಾ ಮಾಡುವ ಯಲ್ಲವ್ವಾ ಕೋಂ ಹಣಮಂತಾ ಕುರುಬರ ಹಾಲಿವಸ್ತಿ ಉಗ್ನಿನಕೇರಿ ಈಕೆಯು ಈ ನೋಟೀಸಿನಿಂದ ತಿಳಿಸುವದೇನಂದರೆ —

ನೀನು ನನ್ನ ಮದುವೆಯ ಗಂಡನಾಗಬೇಕು. ನೀನು ವ್ಯಸನೀಮನುಷ್ಯನಾದ್ದರಿಂದ ನನ್ನ ಕೂಡ ಬರೋಬರೀ ಪ್ರಪಂಚಮಾಡದೆ ನನ್ನ ಮೈಮೇಲಿನ ದಾಗೀನೆ ಸಹ ಕಸಕೊಂಡು ಮನೀಬಿಟ್ಟು ಹೊರಗೆ ಹಾಕಿದಿ. ನೀನು ಈಗ ಅನ್ಯ ಸ್ತ್ರೀಸಹವಾಸದಲ್ಲಿದ್ದೀದಿ. ನನಗೆ ಬೇಕಾದವನನ್ನು ಉಡಿಕೆಮಾಡಿಕೊಂಡು ಹೋಗೆಂದು ಹೇಳಿರುತ್ತೀದಿ. ಕಾಯದೆಪ್ರಕಾರ ಸೋಡಪತ್ರ ಬೇಕಾಗಿರುವದರಿಂದ, ಈ ನೋಟೀಸು ಕೊಟ್ಟಿರುತ್ತೇನೆ. ನಿನ್ನ ಮನಸ್ಸಿನಲ್ಲಿ ನನ್ನ ಕೂಡ ಬಾಳ್ವೆ ಮಾಡಬೇಕೆಂದು ಇಂದಿಗೂ ಇದ್ದರೆ-ನನಗೆ ಈ ಪರ್ಯಂತರ ಉಪಜೀವನದ ದೆಸೆಯಿಂದಾದ ಸಾಲದ ರಕಮು ಎರಡುನೂರು ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು. ಮತ್ತು ವ್ಯಸನಬಿಟ್ಟು ಚಲೋರೀತಿಯಿಂದ ಬಾಳ್ವೆ ಮಾಡಬೇಕು. ಜರ ಇದಕ್ಕೆ ತಪ್ಪಿದರೆ ನಾನು ನಿನ್ನ ಉಜುರು ಇಡದೆ, ಎರಡನೇದವನನ್ನು ಉಡಿಕೆಮಾಡಿಕೊಳ್ಳುವೆನು. ಆ ನಂತರ ನಿನ್ನ ಹಕ್ಕು ನನ್ನಮೇಲೆ ಮತ್ತು ನನ್ನ ಉಡಿಕೆಯಾದ ಗಂಡನಮೇಲೆ ಬಿಲಕೂಲ ನಡೆಯಲಾರದು. ಇದೇ ನೋಟೀಸು ಸೋಡಪತ್ರವೆಂದು ತಿಳಿಯಬೇಕು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲಿದೆ ವರು ತಾ|| ೩೦ ಸಪ್ಟಂಬರ ೧೯೩೧ನೇ ಇಸವಿ

ಈ ಎ ಹೆಬ್ಬಟ್ಟಿನ ಗುರ್ತಾ ಯಲ್ಲವ್ವಾ ಕೋಂ ಹಣ ಂತಾ ಕುರುಬರ ಸಾ|| ಉಗ್ನಿನಕೇರಿ ತಾಲೂಕ ಕಲಘಟಗಿ ಈಕೆ ಇರುತ್ತದೆ.

ದಿ ಧಾರವಾಡ ಅರ್ಬನ್ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

....(೦)....

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದಮೇಲುಂಟು. [illegible] ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟ್‌ಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

[illegible]

ವಿಜಯ

[illegible]

ಸಂಪಾದಕರು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಶುಕ್ರವಾರ ತಾರೀಖು ೩ ನೇ ಅಕ್ಟೋಬರ ೧೯೩೧ (ಸಂಚಿಕೆ ೨೨೨

ಜಾಹೀರ ನೋಟೀಸು

····(೦)····

ಕೆಳಗೆ ಸಹಿ ಮಾಡಿದವನ ಕಡಿಂದಾ ಈ ನೋಟೀಸಿನ ದ್ವಾರ ತಿಳಿಸುವದೇನಂದ್ರೆ : —

ನಮ್ಮ ತಂದೆಯಾದ ಮಲ್ಲೇಶಪ್ಪಾ ಬಿನ್ನ ಬಸಲಿಂಗಪ್ಪಾ ಭಂಗಿ ಈತನು ದುರ್ವ್ಯವಹಾರಕ್ಕೆ ಬಿದ್ದು ಮತ್ತು ತಲೆಕೆಟ್ಟು ದುಷ್ಟ ಜನರ ಮಾತು ಕೇಳಿ ನನ್ನನ್ನು ಹಾಳಮಾಡಬೇಕೆಂತಾ ಜಮೀನು ಖರೀದಿ ವ ಬಕ್ಷೀಸ ಕೊಡತಾನೆ ಮತ್ತು ಸಾಲಾ ವಗೈರೆ ಮಾಡತಾನೆ. ಅಂತಾ ತಿಳೀಕದೆ ಯಾರಾದರು ಖರೀದಿ ವ ಬಕ್ಷೀಸ ಮಾಡಿಸಿಕೊಂಡರೆ ವ ಸಾಲಾ ವಗೈರೆ ಕೊಟ್ಟರೆ ನಾನು ಜವಾಬದಾರನಲ್ಲಾ ಕಾರಣ ಯಾರೂ ಇವನ ಸಂಗಡ ವೆವಹಾರ ಮಾಡಬಾರದು. ತಿಳಿಯುವದು

ತಾ|| ೨೦-೯-೧೯೩೧

ಈ ಎಡಗೈ ಹೆಬ್ಬಟ್ಟಿನ ಗುರ್ತು ರುದ್ರಪ್ಪಾ ಮಲ್ಲೇಶಪ್ಪಾ ಭಂಗಿ ಈತ ಮಾಡಿದ್ದು ಅದೆ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ, ಮುಂದೆ ಪ್ರತಿಯೊಂದು ಓಳಿಗೆ ಒಂದುವರೀ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳ ಸಾಲಿಗೆ ಮೂರಾಣೆ ಇಂಗ್ಲಿಷಿನ ಅಪಾರಿಸಿ [illegible]ಶದಲ್ಲಿ ಹಾಕುವದಿದ್ದರೆ ಅದು ಆಣೆ ಡಬಲ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಸುಡುವ ಮನೆಯ ಗಳ ಹಿರಕೊಳ್ಳುವಿಕೆ

—(೦)—

ಇಂಗ್ಲಂಡದಲ್ಲಿ ಪೌಂಡಿನ ಬೆಲೆಯು ಕಡಿಮೆಯಾದ್ದರಿಂದ, ವಿಲಾಯತಿಯು ಅನೇಕ ದೇಶಗಳ ಜನರು ಇಂಗ್ಲಂಡದಲ್ಲಿ ಅಗ್ಗವಾಗಿ ಚಕ್ಕಂದವಾಡಲಿಕ್ಕೂ ಮೋಜು ಮಾಡಲಿಕ್ಕೂ ಬರುತ್ತದೆಂದು ಭಾವಿಸಿಕೊಂಡು. ಅಸಂಖ್ಯವಾಗಿ ಬಂದಿದ್ದಾರೆ. ಲಂಡನ ಮಾತ್ರವಲ್ಲ. ಸಮುದ್ರದಂಡೆಯ ಪಟ್ಟಣಗಳಲ್ಲಿರುವ ಎಲ್ಲಾ ಹೋಟೇಲಗಳು ಪರದೇಶಿಯರಿಂದ ತುಂಬಿಹೋಗಿವೆ. ಪರದೇಶಿಯರು ಇಂಗ್ಲಿಷ ಪೌಂಡಿನ ಲಾಭವನ್ನು ಈ ರೀತಿಯಾಗಿ ತಕ್ಕೊಳ್ಳಬಾರದೆಂದು ನಿರ್ಬಂಧನೆ ಮಾಡುವರು. ಅಂದರೆ ಪರದೇಶಿಯರ ಬಂಗಾರದ ನಾಣ್ಯಗಳು ಇಂಗ್ಲಂಡದ ನಾಣ್ಯಗಳಿಗೆ ವಿನಿಮಯವಾಗಿ ಇಂಥದೊಂದು ಬಟ್ಟಾದಿಂದ ಮಾರಲ್ಪಡಬೇಕೆಂದು ನಿಯಮ ಮಾಡುವರು.

ಸ್ಯಾಂಡೋ ರಾಮಮೂರ್ತಿಯನ್ನು ಮಿಕ್ಕಿದನು

—(೦)—

ಮೋಹನರಾಯ ಆಗರಕರನೆಂಬ ಹದಿನೆಂಟೇ ವರ್ಷದ ಯುವಕನು ಶಕ್ತಿ ಸಾಮರ್ಥ್ಯದಲ್ಲಿ ಸ್ಯಾಂಡೋ ರಾಮಮೂರ್ತಿಯನ್ನು ಮಿಕ್ಕಿದ್ದಾನೆ. ಈತನು ಹೈದರಾಬಾದಿನಲ್ಲಿ ಒಂದೇ ವೇಳೆಯಲ್ಲಿ ೨೫೦೦-೨೫೦೦ ಪೌಂಡು ತೂಕದ ಎರಡು ಬಂಡಿಗಳನ್ನು-ಒಂದು ಕೊರಳಿನ ಮೇಲೆ ಇನ್ನೊಂದು ಹೊಟ್ಟೆಯ ಮೇಲೆ, ಹಾಯಿಸಿಕೊಂಡು ಪ್ರೇಕ್ಷಕರನ್ನು ಕೌತುಕ ಪಡಿಸಿದನು. ಈತನು ಇತ್ತ ಕಡೆಗೆ ಬೇಗನೆ ಬರತಕ್ಕವನಿದ್ದಾನೆ.

ಜಮೀನದಾರರ ಔದಾರ್ಯ

—(೦)—

ಅಭಾವನಗ ಮತ್ತು ಟಕರಿಯ ಜಮೀನದಾರರಾದ ರಾಜಾ ಹರಿಹರ ಪ್ರಸಾದರು-ತಮ್ಮ ರೈತರಲ್ಲಿ ಈ ವರ್ಷ ತೀರ್ವೆ ಕೊಡುವ ತ್ರಾಣವಿಲ್ಲೆಂದು ಕಣ್ಣಾ ಕಂಡು, ಅವರಿಗೆ ಐದು ಲಕ್ಷದ ಸೂಟು ಕೊಟ್ಟರು. ಕೆಲ ರೈತರ ಮೇಲೆ ಮಾಡಿದ್ದ ದಾವೇಗಳನ್ನ ಹಿಂದಕ್ಕೆ ತಕ್ಕೊಂಡರು.

ಬರುವ ೧೨ ನೇ ತಾರೀಖಿನ ದಿವಸ ಹುಬ್ಬಳ್ಳಿಯಲ್ಲಿ ಜವಳಿ ಅಂಗಡಿಗಳ ಮುಂದೆ ಪ್ರಾರಂಭವಾಗುವ ಪಿಕೆಟಿಂಗದಲ್ಲಿ ಶ್ರೀ. ವೀರನಗೌಡಾ ಪಾಟೀಲರ ಪತ್ನಿಯವರೂ ಪಿಕೆಟಿಂಗ ಮಾಡುವರು. ಆಗ ಇವರು ತಮ್ಮ ಕೂಡ ಅನೇಕ [illegible] ಭಗಿನಿಯರನ್ನೂ ಕರೆತರುವರೆಂದು ಆಶಿಸುತ್ತೇವೆ.

ಧಾರವಾಡ- ಇಂದು ಸಾಯಂಕಾಲದಲ್ಲಿ ಗಾಂಧೀಸಪ್ತಾಹದ ದೆಸೆಯಿಂದಲೇ ಕಡಪಾ ಬೈಲಿನಲ್ಲಿ ಶ್ರೀ. ಸಿ. ಆರ ರಡ್ಡಿಯವರ ಭಾಷಣವಾಗುವದು.

ಕಾಂಗ್ರೆಸ ಕಮಿಟಿಯವರು ೨-೫-೧೦ ರೂಪಾಯಿಗಳ ಟಿಕೀಟು ಮಾಡಿದ್ದು, ಈ ಟಿಕೀಟು ಕೊಂಡು ಒಂದು ವಾರದಲ್ಲಿ ತನ್ನ ಅನುಕೂಲತೆಯ ಪ್ರಕಾರ ಖಾದೀ ಅಂಗಡಿಯಲ್ಲಿ ಅಷ್ಟು ಅರಿವೆ ಕೊಳ್ಳಬಹುದೆಂಬ ವಿಚಾರ ಮಾಡಿದ್ದಾರೆ.

ವಿಜಯ.

ತಾರೀಖು ೨-೧೦-೧೯೩೧ನೇ ಇಸ್ವಿ

ಂದುಸ್ಥಾನದಲ್ಲಿ ಕರ ಹೆಚ್ಚಿತು

ಪೋಸ್ಟಕಾರ್ಡು ಪಾಕೀಟುಗಳ ಹಾಸಿಲು ಹೆಚ್ಚಾಯಿತು

—(೦)—

ಆದಾಯವೆಚ್ಚಗಳನ್ನ ಬಾಯಿಗೂಡಿಸುವದಕ್ಕಾಗಿ ದುಸ್ಥಾನ ಸರಕಾರದವರು ಪರದೇಶಗಳಿಂದ ದುಸ್ಥಾನಕ್ಕೆ ಬರುವ ಸರಕುಗಳ ಮೇಲೆ ಕೆಳ ಕೊಟ್ಟಂತೆ ಕರ-ಜಕಾತಿಯನ್ನು ಹೆಚ್ಚು ಮಾಡಿ ರೆ

೧ ಪರದೇಶಗಳಿಂದ ಹಿಂದುಸ್ಥಾನಕ್ಕೆ ಬರುವ ತ್ತಿಯ ಮೇಲೆ ಒಂದು ಪೌಂಡಿಗೆ ಆರು ಪೈ

೨ ಯಂತ್ರ ಸಾಮಗ್ರಿಗಳ ಮೇಲೆ ನೂರಕ್ಕೆ ತ್ತರಂತೆ

೩ ಕಂದುಬಣ್ಣದ ಸಕ್ಕರೆಯು ಒಂದು ಕ್ವಾಟರ ದರೆ ೧೧೨ ಪೌಂಡಿಗೆ ೬-೧೨-೦ ರಿಂದ ೭-೪-೦

೪ ಬೂಟು ಮತ್ತು ಪಾದರಕ್ಷೆಗಳ ಒಂದು ೋಡಿಗೆ ನಾಲ್ಕಾಣೆ

೫ ಕೃತ್ರಿಮ ರೇಶಿಮೆ ಮತ್ತು ಅದರ ದಾರದ ಲೆ ನೂರಕ್ಕೆ ಹತ್ತರಿಂದ ೫೦ ವರೆಗೆ

೬ ಕೃತ್ರಿಮ ರೇಶಿಮೆಯ ಅರಿವೆ, ಕಪ್ಪುರ, ವಿ ಸ್ಕ್ರಿನ ಒಲ್ಪ ಇವುಗಳ ಮೇಲೆ ೩೦ ರಿಂದ ೪೦ ಟಕ

ಕರಗಳು

ಒಂದು ಸಾವಿರದಿಂದ ೧೯೯೯ರವರೆಗಿನ ಆದಾಯಕ್ಕೆ ಎರಡು ಪೈಯಂತೆ ಈ ವರ್ಷ ಅಂದರೆ ೧೯೩೨ನೇ ಮಾರ್ಚದ ತನಕ ಮತ್ತು ಮುಂದಿನ ವರ್ಷ ರೂಪಾಯಕ್ಕೆ ನಾಲ್ಕು ಪೈ ಪ್ರಕಾರ.

೨ ಉಪ್ಪನ್ನು ಸಹ ಕೂಡಿ ಎಕ್ಸಾಯಿಜದ ಎಲ್ಲಾ ಪದಾರ್ಥಗಳ ಮೇಲೆ ೧/೪ ರಂತೆ ಸರ ಚಾರ್ಜ.

೩ ಪೋಸ್ಟಿನ ಕಾರ್ಡು ಪಾಕೀಟುಗಳ ಮೇಲೆ ನೂರಕ್ಕೆ ೫೦ ರಂತೆ ಅಂದರೆ ಕಾರ್ಡಿನ ಬೆಲೆಯು ಒಂಬತ್ತು ಪೈ ಮತ್ತು ಪಾಕೀಟಿನ ಬೆಲೆಯು ೧೮ ಪೈ. ಸಾದಾ ಕಾರ್ಡು ಪಾಕೀಟುಗಳಿಗೆ ಇಷ್ಟು ಬೆಲೆಯ ಟಿಕೀಟು ಹಚ್ಚಬೇಕು.

ಕಾರ್ಡು ಪಾಕೀಟುಗಳ ಹೊರತು ಮೇಲೆ ಹೇಳಿದ ಎಲ್ಲಾ ಪದಾರ್ಥ-ಸಾಮಾನುಗಳ ಮೇಲೆ ನಿನ್ನೆ ೩೦ನೇ ತಾರೀಖು ದಿನಗಾದ ಕೂಡ ಕರ ಜಕಾತಿ ಕೂಡಿತು. ಪೋಸ್ಟ ಕಾರ್ಡು ಪಾಕೀಟುಗಳ ದರವನ್ನು ಎಂದಿನಿಂದ ಹೆಚ್ಚು ಮಾಡುವದೆಂಬನ್ನು ಗವರ್ನರ ಜನರಲ್ಲ ಹೇಬರು ಈ ನಂತರ ಪ್ರಸಿದ್ಧ ಮಾಡುವರು.

ನ್ಯಾಯಾಧೀಶರು ತಮ್ಮ ಸಂಬಳ ಕಡಿಮೆ ಮಾಡಿಕೊಂಡರು

ವೆಚ್ಚ ಉಳಿತಾಯದ ದೆಸೆಯಿಂದ ಲಾರ್ಡ ವಿಲಿಂಗಡನ್ನ ಸಾಹೇಬರು ತಮ್ಮ ಸಂಬಳವನ್ನು ನೂರಕ್ಕೆ ೨೦ರಂತೆ ಮತ್ತು ಕೌನ್ಸಿಲರರು ೧೫ರಂತೆ ಕಡಿಮೆಮಾಡಿಕೊಂಡರು. ಲಾರ್ಡವಿಲಿಂಗಡನ್ನ ಸಾಬರಿಗೆ ಇಪ್ಪತ್ತುಸಾವಿರ ರೂಪಾಯಿ ಸಂಬಳವಿದೆ.

೨ ಉಳಿದ ತಾಮದಾರರ ಸಂಬಳವನ್ನು ನೂರಕ್ಕೆ ೧೦ ರಂತೆ ಕಡಿಯುವರು. ಈ ವ್ಯವಸ್ಥೆಯು ೧೯೩೩ರ ತನಕವಿರುವದು. ಪ್ರಸಂಗಬಿದ್ದರೆ ಅದರೊಳಗಾಗಿ ಹೆಚ್ಚು ಕಡಿಮೆ ಮಾಡುವರು.

೩ ದಂಡಿನಖಾತೆಯು ವೆಚ್ಚವು ೪॥ ಕೋಟಿಯಷ್ಟು ಕಡಿಮೆಯಾಗುವದು ಎರಡು ವರ್ಷಗಳಲ್ಲಿ ೫೫ ಕೋಟಿಯಿದ್ದ ವೆಚ್ಚವು ೪೭ ಕೋಟಿಗೆ ಬಂತು

೪ ನಡೆಯುವ ವರ್ಷ ಸರಕಾರಕ್ಕೆ ೧೯ ಕೋಟಿ ೫ ಲಕ್ಷದ ಕೊರತೆಯಾಗಿದೆ ಕರ ಜಕಾತಿಯಿಂದ ಈ ವರ್ಷದಲ್ಲಿ ಹತ್ತುಕೋಟಿಯ ನಷ್ಟ ಉಳಿಯುವದು ಅದು ಮುಂದಿನ ವರ್ಷ ವೆಚ್ಚ ಹೋಗಿ, ೫ ಕೋಟಿ ೨೩ ಲಕ್ಷದಷ್ಟು ಉಳಿತಾಯವಾಗುವದು.

ಸರಕಾರಕ್ಕೆ ಉತ್ಪನ್ನ ಕಡಿಮೆ ಬಂದ ಬಾಬುಗಳು-

ಕಸ್ಟಮ	೧೦ ಕೋಟಿ
ಇನಕಂಟ್ಯಾಕ್ಸ	೯। ,,
ರೇಲ್ವೆ	೫। ,,
ಬೇರೆ ಬಾಬುಗಳು	೨। ,,
ವೆಚ್ಚ ಕಡಿಮೆ ಮಾಡುದರಿಂದಾಗುವ ಉಳಿತಾಯ	
ಮುಲಕೀ	೨॥ ಕೋಟಿ
ದಂಡು	೪॥ ,,

ನಾಮದಾರ ಆಗಾಖಾನರ ಸಂದೇಶದ ನಿಷೇಧ

ನಾಮದಾರ ಆಗಾಖಾನರು ಅಮೇರಿಕೆಗೆ ಕಳಿಸಿದ ಸಂದೇಶದ ನಿಷೇಧವೆಂದು ಪಂಡಿತ ಮಾಲವಿಯಾ, ನಾಮದಾರ ಶಾಸ್ತ್ರಿ, ಬ್ಯಾರಿಸ್ಟರ ಜಯಕರ, ದಿವಾನಬಹಾದ್ದೂರ ರಾಮಚಂದ್ರರಾವ, ಶ್ರೀ. ಗಾಂಧಿಯವರು ಒಂದು ಪತ್ರಿಕೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಪಂಡಿತ ಮಾಲವಿಯಾಯವರ ಸ್ಪಷ್ಟೋಕ್ತಿಯು

ರಾವುಂಡ ಟೇಬಲ ಹಳಸಿದರೇನಾಗುವದು ?

...(೦)....

ಲಂಡನದಲ್ಲಿರುವ ಹಿಂದುಸ್ಥಾನದ ವಿದ್ಯಾರ್ಥಿಗಳ ಮಧ್ಯವರ್ತಿ ಸಂಘದಲ್ಲಿ ಪಂಡಿತ ಮಾಲವಿಯಾಯವರ ಮಹತ್ವದ ಭಾಷಣವಾಯಿತು ಅವರು ಅಂದದ್ದೇನೆಂದರೆ

" ಹಿಂದುಸ್ಥಾನವು ಅಪೇಕ್ಷಿಸಿದಂತಹದು ರಾವುಂಡಟೇಬಲಿನಲ್ಲಿ ದೊರೆಯದಿದ್ದರೆ ಹಿಂದುಸ್ಥಾನದಲ್ಲಿ ಇಂಗ್ಲಿಷರೆಂಬ ಪ್ರತಿಯೊಂದು ವ್ಯಕ್ತಿಯ ವಿಷಯವಾಗಿ ದ್ವೇಷ ಮತ್ತು ಕಟುತನದ ಭಾವವು ಉತ್ಪನ್ನವಾಗುವದು. ಇಂಗ್ಲಿಷ ಸರಕುಗಳಿಗೆ ಬಹಿಷ್ಕಾರ ಹಾಕಬೇಕೆಂಬ ಇಚ್ಛೆಯೇ ಉಂಟಾಗುವದು ಪ್ರಸ್ತುತದ ರಾಜಕಾರಣವು ಅತಿ ಗಹನವಾದದಿದ್ದು, ಅದು ಅಪಜಯ ಹೊಂದಿದರೆ ಅದರಿಂದುಂಟಾಗುವ ಪರಿಣಾಮವು ಕಲ್ಪನೆ ಮೀರಿ, ಅನರ್ಥಕಾರಕವಾಗುವದು ಈಗಿನ ರಾವುಂಡಟೇಬಲಿನ ಸ್ವರೂಪ ನೋಡಲಾಗಿ, ಅದು ಯಾರೊಬ್ಬರನ್ನು ಮೆಚ್ಚಿಸುವಂಥಹದಾಗಿರುತ್ತದೆಂದು ನನಗೆ ಅನಿಸುವದಿಲ್ಲ. ಆದರೂ ಅದು ತನ್ನ ಧ್ಯೇಯ ಸಾಧನ ಮಾಡಲು ಶಕ್ತಿಶಾಲಿಯೆಂದು ನನಗೆ ನಿರಾಶೆ ಉಂಟಾಗಿದೆ. ಈಗಿನ ಹಿಂದುಸ್ಥಾನದ ದೊರೆತನವು ಪದ್ಧತಿಯು ಮುಂದೆ ನಡೆಯುವದು ತೀರ ಅಶಕ್ಯವಾಗಿರುತ್ತದೆ

ನಾನೇಕೆ ಪಾಚಿ ಹೋಗುತ್ತೇನೆ. —

ಇದೇ ವಿದ್ಯಾರ್ಥಿಗಳ ಸಭೆಯಲ್ಲಿ ಮಹಾತ್ಮರೂ ಭಾಷಣ ಮಾಡಿದರು. ವಿಲಾಯತಿಯಲ್ಲಿರುವ ಅನೇಕ ವಿದ್ಯಾರ್ಥಿಗಳು ಇಂಗ್ಲಿಷ ಪದ್ಧತಿಯ ಉಡಿಗೆ ತೊಡಿಗೆ ಮಾಡುವರೇ ಹೊರತು ಹಿಂದುಸ್ಥಾನದಲ್ಲಿ ಒಡೆತನದ ಮಾಲಕ ಜನರು ಹೇಗೆ ಅತ್ಯಾಚಾರ ಮಾಡುತ್ತಾರೆಂಬುದನ್ನು ಬ್ರಿಟಿಶ ಜನತೆಗೆ ತೋರಿಸುವದಕ್ಕಾಗಿಯೇ ನಾನು ಈ ದೇಶಕ್ಕೆ ಹೊರಟು ಬಂದಿದ್ದೇನೆ

ವರ್ಧಾದ ತಿರುಗಿ [illegible]

ಹಿಂದುಸ್ಥಾನದ ತುಂಬ ಎಲ್ಲಾ ಪಟ್ಟಣಗಳಲ್ಲಿ ಮಹಾತ್ಮರ ಜನ್ಮೋತ್ಸವವು ಇಂದಿನಿಂದ ಪ್ರಾರಂಭವಾಗುವದಷ್ಟೇ ; ಈ ಉತ್ಸವ ಮ ಉತ್ಸವದ ದೆಸೆಯಿಂದ ಹೊರಡಿಸುವ ಮೆರವಣಿಗೆ ನಿಜಾಮ ಹೈದರಾಬಾದ ಸರಕಾರದವರು ಪ್ರತಿಬಂಧ ಮಾಡಿದ್ದರಿಂದ ಕಾಂಗ್ರೆಸ ಕಮೀಟಿಯವರು ಈ ಸಂಬಂಧವಾದ ಎಲ್ಲಾ ಕಾರ್ಯಕ್ರಮಗಳನ್ನು ನಿಲ್ಲಿಸಿಬಿಟ್ಟರು. ಜನರಿಗೆ ಇಷ್ಟು ವಿಚಾರ ಸ್ವಾತಂತ್ರ್ಯ ಕೊಡದವರು ಸಂಪೂರ್ಣ ವಿಚಾರ ಸ್ವಾತಂತ್ರ್ಯ ನಡೆಸುವ ವರ್ಧಾದವನ್ನು ಹೇಗೆ ಬೇಡುವರು? ಯಾವ ಗಣಿಮರ ಅಪ್ಪಣೆಗೆ ಹೇಗೆ ಒಪ್ಪುವ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ

ಅಂಕೋಲೆಯಲ್ಲಿ ಗೊತ್ತಾದ ನಿರ್ಣಯಗಳು.

....(೦)....

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ ಹಾಗೂ ಅದರ ಕಾರ್ಯಕಾರೀ ಮಂಡಲದ ಸಭೆಗಳು ಮೊದಲೇ ಗೊತ್ತಾದಂತೆ ತಾ|| ೨೬ ಹಾಗೂ ೨೭ನೇ ಸಪ್ಟಂಬರ ದಿವಸ ಅಂಕೋಲೆಯಲ್ಲಿ ಸೇರಿದ್ದವು. ಪ್ರಾ. ಕಾ. ಕಮಿಟಿಯ ೨೫ ಸಭಾಸದರು ಸಭೆಗೆ ಬಂದಿದ್ದರು. ಕಾರ್ನಾಡ ಸದಾಶಿವರಾಯರು ಅಧ್ಯಕ್ಷರಾಗಿದ್ದರು. ಆಗ ಪ್ರಾಂತಿಕ ಕಾಂಗ್ರೆ ಕಮಿಟಿಯಲ್ಲಿ ಗೊತ್ತಾದ ಮುಖ್ಯ ನಿರ್ಣಯಗಳನ್ನು ಇಲ್ಲಿ ಕೊಟ್ಟಿರುತ್ತೇವೆ.

೧ ಕರ್ನಾಟಕದಲ್ಲಿ ಅಸ್ಪೃಶ್ಯತಾ ನಿವಾರಣೆಯ ಕಾರ್ಯವನ್ನು ಸಾಗಿಸುವದಕ್ಕಾಗಿ ಕಾರ್ನಾಡ ಸದಾಶಿವರಾಯರನ್ನು ಮುಖ್ಯರನ್ನಾಗಿಯೂ ಶ್ರೀ. ಜಿ. ಜಿ. ಕಾಖಾರ್ನೀಸರನ್ನು ಕಾರ್ಯದರ್ಶಿಗಳನ್ನಾಗಿಯೂ ನೇಮಿಸಬೇಕು.

೨ ಕರ್ನಾಟಕದಲ್ಲಿ ಎಲ್ಲ ಸಮಾರಂಭಗಳಲ್ಲಿ ಇದುವರೆಗೆ "ಕರ್ನಾಟಕ ಮಾತಾಕೀಜೈ" ಎಂಬ ಜಯ ಜಯಕಾರವನ್ನು ಹಾಗು "ಕರ್ನಾಟಕಾಂಬೆ ಧನ್ಯೆ ಧನ್ಯೆ" ಎಂಬ ಪದವನ್ನು ಅನ್ನುತ್ತ ಬಂದಿರುವದರಿಂದಲೂ, ಕರ್ನಾಟಕವು ಪ್ರತ್ಯೇಕವಾದ ರಾಜಕೀಯ ಪ್ರಾಂತವಾಗುವವರೆಗಾದರೂ ಈ ಕ್ರಮವು ಅತ್ಯಂತ ಅವಶ್ಯವಿರುವದೆಂದು ಕರ್ನಾಟಕವು ನಂಬುತ್ತಿರುವದರಿಂದಲೂ ಕಾಂಗ್ರೆಸ ಕಾರ್ಯಕಾರೀ ಮಂಡಲದವರು ಇದೇ ಕ್ರಮವು ನಡೆಯುವಂತೆ ಅಪ್ಪಣೆಯನ್ನೀಯಬೇಕಾಗಿ ಈ ಸಭೆಯು ಬೇಡಿಕೆಯುದೆ.

೩ ಪ್ರಾಂತಿಕ ಸ್ವಯಂಸೇವಕರ ವಿಭಾಗದ ಮುಖ್ಯರನ್ನಾಗಿ ಶ್ರೀ. ರಂ. ರಾ. ದಿವಾಕರರನ್ನು ಈ ಸಭೆಯು ನೇಮಿಸುತ್ತದೆ. ಈ ವಿಭಾಗದ ಕಚೇರಿಯ ಸ್ಥಳವನ್ನು ಗೊತ್ತುಪಡಿಸುವದು, ಮತ್ತು ಪುರುಷ ಹಾಗೂ ಸ್ತ್ರೀಸ್ವಯಂಸೇವಕರ ಸಂಘಟನಗಾಗಿ ಕಾರ್ಯದರ್ಶಿಗಳನ್ನು ನೇಮಿಸುವದು ಇವುಗಳನ್ನು ಶ್ರೀ. ದಿವಾಕರರೇ ತಮಗೆ ಸಮ್ಮತವಾಗುವಂತೆ ಮಾಡಬೇಕು.

೪ ಸಿರಸಿ ಸಿದ್ದಾಪೂರ ತಾಲೂಕಿನಲ್ಲಿಯ ತೋಟಗಳ ಅಡಿಕೆಯ ಬೆಳೆಗೆ ಕೊಳೆರೋಗ ಉಂಟಾದದ್ದನ್ನು ಪರೀಕ್ಷಿಸಿ ವರದಿಯನ್ನೊಪ್ಪಿಸುವದಕ್ಕೆ ಕಮೀಸನ ಶ್ರೀ. ನಾ. ಗು. ಜೋಶಿ, ದ. ಪ. ಕರಮರಕರ, ಬಿಂದು ಮಾಧವ ಬರ್ವೆ ಹಾಗೂ ತಿ. ಶ್ರೀ. ಸಾಮುಕರನ್ನು ಈ ಸಭೆಯು ನೇಮಿಸುತ್ತದೆ.

೫ ಮೈಸೂರ ಸಂಸ್ಥಾನದಲ್ಲಿಯ ದಬ್ಬಾಳಿಕೆಯನ್ನು ಕುರಿತು ಮೈಸೂರ ಮಹಾರಾಜರು ಹಾಗೂ ದಿವಾನರೊಡನೆ ಸಮಕ್ಷಮ ಚರ್ಚೆ ಮಾಡಿ ಪ್ರಜೆಗಳ ಮುಂದಿನ ಧೋರಣವನ್ನು ನಿರ್ಣಯಿಸುವ ಕುರಿತು ಶ್ರೀ ಕರ್ನಾಡ ಸದಾಶಿವರಾವ ಹಾಗೂ ಕೆ. ರಂಗ ಅಯ್ಯಂಗಾರ ಇವರದೊಂದು ಉಪಮಂಡಲವನ್ನು ಈ ಸಭೆಯು ನೇಮಿಸುತ್ತದೆ.

೬ ಪರದೇಶಿ ವಸ್ತ್ರಗಳ ಬಹಿಷ್ಕಾರದಷ್ಟೇ ಪರದೇಶಿ ಜಮಖಾನೆ ಹಾಗೂ ಉಂಡೆ ರೇಶ್ಮೆಯ ಬಹಿಷ್ಕಾರವೂ ಅವಶ್ಯವಾಗಿದೆ. ಎಂಬದನ್ನು ಜಿಲ್ಲಾ ಕಾಂಗ್ರೆಸ ಕಮಿಟಿಗಳ ಗಮನಕ್ಕೆ ಈ ಸಭೆಯು ತರಲಿಚ್ಛಿಸುತ್ತದೆ. ದೇಶೀ ನೇಯುವ ಉದ್ಯೋಗದ ಹಿತದ ದೃಷ್ಟಿಯಿಂದ ಮೇಲ್ಕಂಡ ನೂಲಿನ ಆಯಾತವನ್ನು ನಿಲ್ಲಿಸಲು ಜಿ. ಕಾಂ. ಕಮಿಟಿಗಳು ಕೂಡಲೇ ಪ್ರಯತ್ನಪಡಬೇಕೆಂದೂ ಈ ಸಭೆಯು ಬಿನ್ನವಿಸಿಕೊಳ್ಳುತ್ತದೆ

೭ ಗ್ರಾಮ ಸಂಘಟನೆಯ ಕಾರ್ಯಕ್ಕಾಗಿ ಬರುವ ೩ ತಿಂಗಳಗಳ ಸಲುವಾಗಿ ೩೦೦ ರೂ. ಮಂಜೂರ ಮಾಡಲಾಗಿದೆ

೮ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಅಕ್ಕಲಕೋಟೆ ಸಂಸ್ಥಾನವನ್ನು ತಮ್ಮ ಹದ್ದಿಯಲ್ಲಿ ಎಳೆದುಕೊಳ್ಳುವ ಪ್ರಯತ್ನ ನಡೆಸಿದ್ದರ ವಿರುದ್ಧ ಅ. ಭಾ. ಕಾಂ. ಕಮಿಟಿಯ ನೆರವನ್ನು ಕೇಳಬೇಕೆಂದು ಗೊತ್ತಾಯಿತು.

ಚೀನದ ಪರರಾಷ್ಟ್ರ

ಮಂತ್ರಿಯನ್ನು ಸಾಯುವಂತೆ ಹೊಡೆದರು.

....(೦)....

ಚೀನ ಮತ್ತು ಜಪಾನರ ಕಲಹವನ್ನು ಚೀನಕ್ಕೆ ಹಿತವೆನಿಸುವಂಥ ರೀತಿಯಿಂದ ತೀರಿಸಿಕೊಳ್ಳುವ ಕೆಲಸದಲ್ಲಿ ಚೀನದ ಪರರಾಷ್ಟ್ರಗಳ ಮಂತ್ರಿಯಾದ ವಾಂಗಸಾಹೇಬನು ಯೋಗ್ಯ ಕರ್ತವ್ಯ ಮಾಡಲಿಲ್ಲೆಂದು ವಿದ್ಯಾರ್ಥಿಗಳು ಸಂತಾಪಗೊಂಡು, ಅವನ ಕಚೇರಿಗೆ ಹೋಗಿ ಜಾತಿ, ದೊಣ್ಣೆ ಮುರುಕ ಕಾಲು ಮುಂತಾದವುಗಳಿಂದ ಅವನನ್ನು ಹೆಣಬೀಳ ಹೊಡೆದರು. ಅಂಗಿ ಹರಿದರು. ರಕ್ತಬಂಬಾಳ ಮಾಡಿದರು, ಈ ಗದ್ದಲ ಕೇಳಿ ಕಚೇರಿಯವರು ಬಂದು, ಹುಡುಗರನ್ನು ತಡೆದು, ಮಂತ್ರಿಯನ್ನು ಕಿಟಕಿಯೊಳಗಿಂದ ಹಾಯಿಸಿಕೊಂಡು, ಮೋಟಾರಿನಲ್ಲಿ ಕೂಡಿಸಿ ಮನೆಗೆ ಕಳಿಸಿದರು.

ಶಿಂದಿ ಸವಾಲು ಮಾಡುವದನ್ನು ಬಿಡಿರಿ. ಅಂಗಡಿಗೆ ಬೀಗ ಹಾಕಿರಿ; ಇಲ್ಲವಾದರೆ ಜೀವ ಕೊಡಿರೆಂಬ ಕೆಂಪ ಭಯಸೂಚಕ ಬರಹದ ಕಾಗದಗಳನ್ನು ಯಾರೋ ಕುಮಟೆಯಲ್ಲಿ ಹಚ್ಚಿದ್ದಾರೆ ಬರೀ ಹುಡುಗಾಟಿಕೆ!!

ದಬ್ಬಾಳಿಕೆಯ ರುಚಿ

ಅಸೆಂಬ್ಲಿಯಲ್ಲಿ ವರ್ತಮಾನಪತ್ರಗಳ ದ್ರಣ ಹಾಗು ಲೇಖನ ಸ್ವಾತಂತ್ರ್ಯ ಹರಣದ ವಿಷಯಕ್ಕಾಗಿ ಈಗತಾನೆ ಚರ್ಚಿಸಲ್ಪಡತಕ್ಕ ಕಾಯದೆಯು ದಬ್ಬಾಳಿಕೆಯ ಸ್ವರೂಪದ್ದಾಗಿರುವದು ಅದನ್ನು ನಿಷೇಧಿಸಲು ಎಲ್ಲ ಕಡೆಗೆ ವರ್ತಮಾನಗಳನ್ನು ಹರತಾಳವಾಗಿ ಒಂದು ದಿವಸ ಬಂದಿಡುದು ವರ್ತಮಾನಪತ್ರಗಳ ಸಂಘದವರು ನಿರ್ಣಯದ ಮೇರೆಗೆ ನಾಳಿನ ಸಿಕ್ಕದ ವಿಜಯವು ಪ್ರಕಟವಾಗದು.

ವಿವಿಧ ವರ್ತಮಾನಗಳು

....(೦)....

ಕಳೆದ ತಿಂಗಳಲ್ಲಿ ಎ[illegible]ನಾತಿನಲ್ಲಿ ಭಯಂಕರ ಮಳೆ ಹಾಯಿತು. ಒಂದೇ ದಿನ ಕಡೆಗೆ ೧೬ ನ ತರಳ ಮಳೆಬಿದ್ದು [illegible] ಕೆರೆಯೊಡೆದು ಹನಬಂದ [illegible] ಹಳ್ಳ ನದಿಗೆ ಬರುವಂಥ [illegible] ಬಂದು ಕೇಡು ಮಾಡಿದವು, ಇ[illegible]ನಲ್ಲಿ ಮೂವರು ರು.

ಹಿಂದುಸ್ಥಾನಕ್ಕೆ ಸ್ವರಾಜ್ಯಸ್ವಾತಂತ್ರ್ಯ ದೊರೆತ ಬಳಿಕ ಶರೆ ಶಿಂದಿಯ ಕುಡಿತ ಪೂರಾ ಹೋಗುವದು. ನಾವು ಸ್ಕಾಚ ಜನರು ಶರೆ ಯಬೇಕೇ? ನೀರಿನಿಂದಲೇ ತೃಪ್ತರಾಗಬೇಕೆ ಎಂಬ ಪ್ರಶ್ನೆ ಹುಟ್ಟುವದೆಂದು ಕಲಕತ್ತೆಯಲ್ಲಿ ವರ್ಷ ಪಾದ್ರಿಯಾಗಿ, ಸ್ವದೇಶಕ್ಕೆ ಹೊರಟ ರೆವ್ಹೆರೆಂಡ ಅಂಡರಸನ್ನಸಾಹೇಬರು ಅಭಿಪ್ರಾಯಪಡುತ್ತಾರೆ.

ಸರಕಾರದವರು ಈ ವರ್ಷ ಶಾಲೆಗಳ ಕಟ್ಟುವದಕ್ಕೆ ಗ್ರಾಂಟು ಕೊಡದಿದ್ದರೂ, ಸೇಲಮ ಡಿ|| ರೆ|| ಬೋರ್ಡಿನವರು ತಮ್ಮ ಬೊಕ್ಕಸದ ೨೦ ರೂಪಾಯಿ ವೆಚ್ಚಮಾಡಿ, ಹೊಸ ಶಾಲೆಯನ್ನು ಕಟ್ಟುವರು.

ಗಾಂಧೀ ಸಪ್ತಾಹದ ದೆಸೆಯಿಂದ ಅಕೋಲ (ವರ್‍ಹಾಡ) ಕಾಂಗ್ರೆಸ ಕಮಿಟಿಯವರು ಎರಡು ಸಾವಿರ ಮತ್ತು ಸುರತ ಕಾಂಗ್ರೆಸ ಕಮಿಟಿಯು ಹತ್ತುಸಾವಿರ ಖಾದೀ ಕೊಂಡರು.

ನೋಟೀಸು

—(೦)—

ರಾ|| ಬಸಯ್ಯಾ ಬಿನ್ ಪಕ್ಕೀರಯ್ಯಾ ಹಿರೇಮಠ ಸಾ|| ಕಲಕೋಟಿ ತಾಲೂಕ ಹಾವೇರಿ ಇವರಿಗೆ—

ಕೆಳಗೆ ಸಹಿ ಮಾಡಿದ ನಾನು ಗಂಗವ್ವಾ ಕೋಂ ಬಸಯ್ಯಾ ಹಿರೇಮಠ ಮುಕ್ಕಾಮು ಗುಡಗೇರಿ ನಿನಗೆ ನೋಟೀಸಿನಿಂದ ತಿಳಿಸುವದೇನಂದರೆ ನಾನು ನಿನ್ನ ಲಗ್ನದ ಹೆಂಡತಿ ಇದ್ದು ಲಗ್ನವಾದ ನಂತರ ೮-೨ ವರ್ಷ ನೀವು ನನ್ನ ಕೂಡ ಚಲೋರೀತಿಯಿಂದ ಪ್ರಪಂಚ ಮಾಡಿದಿ ಆ ವೇಳ್ಯಾದಲ್ಲಿ ನಾನು ಚನ್ನವೀರಯ್ಯನನ್ನು ಹಡೆದೆನು. ಅನಂತರ ನೀನು ನನ್ನ ತವರುಮನಿಯಿಂದ ನನ್ನ ದಾಗಿನೇಗಳನ್ನು ಅವೇನಂದರೆ ಒಂದು ಜೋಡು ಬುಂಕಿ, ತೊಲಿ ೨೦ ಸಂಗಿ ವಂದು ತೊಲಿ ಅಜಮಾಸು ೮ ಮತ್ತು ಬಳಿ ಜೋಡು ವಂದು ತೊಲಿ ಅಜಮಾಸು ೫ ಈ ಎಲ್ಲ ಬಂಗಾರದ ದಾಗೀನೆಗಳನ್ನು ವ್ಯಾಪಾರವಮಾಡಬೇಕೆಂದು ಕರದು ಒಗೊಂಡು ವಮಾಂತಿನಾಡಿ ದುರ್ಜನರ ಸಹವಾಸದಿಂದ ನನ್ನ ಜೀವಕ್ಕೆ ದಿನಾಲು ತ್ರಾಸುಕೊಡಲಿಕ್ಕೆ ಹತ್ತಿದಿ. ಮತ್ತು ದುರವ್ಯಸನಕ್ಕೆ ಹಾಳುಮಾಡಿ ಮನಿಯಲ್ಲಿ ತಿನ್ನಲಿಕ್ಕೂ ಉಣಲಿಕ್ಕೂ ಏನೂ ಇಲ್ಲದಂತೆಮಾಡಿ ದಿನಾಲು ನನಗೆ ಹೊಡಿಯುವದು ಬಡಿಯುವದು ಮಾಡಿ ನನ್ನನ್ನು ೨|೪ ವರುಷಗಳ ಹಿಂದೆ ತವರುಮನೆಗೆ ಕಳಿಸಿದಿ ಅನಂತರ ಎಷ್ಟುಸಾರೆ ಕರಕೊಂಡು ಹೋಗೆಂದು ಹೇಳಿ ಕಳಿಸಿದರೂ ನೀನು ಕರಕೊಂಡು ಹೋಗಲಿಲ್ಲಾ ನಾನು ಎರಡನೇಯವರಲ್ಲಿ ದೇಣೆಮಾಡಿ ನನ್ನ ಮತ್ತು ನನ್ನ ಮಗನ ಸಂರಕ್ಷಣೆಮಾಡುತ್ತಾ ಬಂದೆನು ನನಗೆ ಈಗ ೨೦೦ ರೂಪಾಯಿಗಳ ದೇಣೆ ಆಗಿದೆ. ನನಗೆ ದೇಣಿಯು ಸಾವಕಾರರ ತಗಾದಿ ಆಗಿದೆ ಮತ್ತು ಹೊಟ್ಟೆತುಂಬಿಕೊಳ್ಳುವ ತ್ರಾಸಾಗಿದೆ. ಆದ್ದರಿಂದ ನೀನು ಮೇಲೆ ಬರೆದ ಬಂಗಾರದ ಜೀನಸುಗಳನ್ನು ಅಜಮಾಸ ಅವುಗಳ ಕಿಮ್ಮತ್ತು ೬೧೧ ರೂಪಾಯಿ ಮತ್ತು ೨೦೦ ರೂಪಾಯಿ ಸಾಲ ಬಾಬತ್ತುಕೊಟ್ಟು ನನ್ನನ್ನು ಈ ನೋಟೀಸದ ಎಂಟು ದಿವಸಗಳಲ್ಲಿ ಕರಕೊಂಡು ಹೋಗಿರಿ. ಜರ ಕರಕೊಂಡು ಹೋಗದಿದ್ದರೆ ನನ್ನ ಮತ್ತು ನನ್ನ ಮಗನ ಉಪಜೀವನದ ದಸೆಯಿಂದ ಆಗುವ ದೇಣೆಕ್ಕೆ ನೀನೇ ಜವಾಬದಾರನಾಗಿರತ್ತೀದೀ ತವರುಮನಿಯವರ ಹಂಗಣೆಯು ಬಹಳೇ ಆದ್ದರಿಂದ ನನಗೆ ತ್ರಾಸವಾಗಿದೆ. ನಾದರ ದಾಗೀನೆಗಳು ಅಥವಾ ಅವುಗಳ ಕಿಮ್ಮತ್ತು ಮುಟ್ಟಿದ ವಿನಹಾ ನನ್ನನ್ನು ಕರಿಯಲಿಕ್ಕೆ ಬರುವ ಹಕ್ಕು ನಿನಗಿಲ್ಲಾ ಜರ ಕರಕೊಂಡು ಹೋಗಿ ಬಾಳ್ವೆ ಮಾಡುವ ಇಚ್ಛೆ ಇದ್ದರೆ [illegible] ತ್ತ ರೂಪಾಯಿ ಮುಟ್ಟಿಸಿ ಕರಕೊಂಡು ಹೋಗಬೇಕು. ಜರ ಜೋರಾವರಿ ಮಾಡಿ ನನ್ನನ್ನು ಕರಕೊಂಡು ಹೋಗಲಿಕ್ಕೆ ದಂಗೆ ವಗೈರೆ ಮಾಡಿದಲ್ಲಿ ರೀತಿ ಪ್ರಕಾರ ಇಲಾಜಮಾಡಲಾದೀತು. ಈ ತಂತ್ರಸಕ್ಕೆ ಒಳಗಾಗಬಾರದೆಂದು ಈ ನೋಟೀಸಿನಿಂದ ತಿಳಿಸಿರುತ್ತೇನೆ. ನೀನು ಜಬರದಸ್ತಿಯಿಂದ ದಂಗೆ ಮಾಡಿ ಧಾಂದಲೆ ಮಾಡುವ ನಿನ್ನ ಆಲೋಚನೆ ಇದ್ದದ್ದು ನನಗೆ ತಿಳಿದುಬಂದದ್ದರಿಂದ ಈ ನೋಟೀಸ ಕೊಟ್ಟಿರುತ್ತೇನೆ. ಈ ನೋಟೀಸಿನ ಖರ್ಚ ನಿನ್ನ ತಲೆ ಮೇಲೆ ಇದೆ ಅಂತಾ ಬರಕೊಟ್ಟ ನೋಟೀಸ ತಾ|| ೨೯-೯-೧೯೨೬ನೇ ಇಸ್ವಿ

ಸಹಿ- ಗಂಗವ್ವಾ ಕೋಂ ಬಸಯ್ಯಾ ಹಿರೇಮಠ

ಮಾರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿವಾನಂದರೂಪರ ಅರ್ಜಿ, ಶ್ರೀ ಆರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಷ್ಕಳ ಜನರ ಆಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕಡಿಮೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕೊಳ್ಳುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡಲ್ಪಡುವದು. ವ್ಹಿ. ಪಿ ಖರ್ಚು ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಕಾದವರು ಮುಂಗಡ ಮನಿಯಾರ್ಡರ ಮಾಡಬೇಕು ವ್ಹಿ ಪಿ ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು

ಮ್ಯಾನೇಜರ ವಿಜಯ ಧಾರವಾಡ.

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದು ಮೂರೇ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

THE ANKALIGI BANK
LTD.

Head Office
Kam. Katta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT

Dharwar 3—1—1927 } K. B. ANKALIGI
Managing Director

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೩-೮-೦
೬ ,,	೭-೧-೦
೩ ,,	೪-೮-೦
ವಾರಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443.

ವಿಜಯ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨ ಧಾರವಾಡ ರವಿವಾರ ತಾರೀಖು ೪ ನೇ ಅಕ್ಟೋಬರ ೧೯೩೧ (ಸಂಚಿಕೆ ೨೩೩

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ

ಮಾಳಮಡ್ಡಿ

ಮತ್ತು ——— ಧಾರವಾಡ

ಕಾಮನಕಟ್ಟಿ

ನಮ್ಮಲ್ಲಿ ಇಡಿ ಕರ್ನಾಟಕದಲ್ಲಿ ಆಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರೆವಣಿಗೆ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ೪ ಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿ ಯುಂಟು. ಮಾಹಿತಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸಂ ೧,೨. ಪ್ರತಿ ೧ಕ್ಕೆ	೨-೪-೦
೨. ಕಥೆಗಳನ್ನೊಳಗೊಂಡ ಬೀಬಲ್ಲ ಚರಿತ್ರೆ ಸಚಿತ್ರ	೧-೬-೦
೩. ಛತ್ರಪತಿ ಶಿವಾಜಿ ಮಹಾರಾಜ	೨-೧೨-೦
೪. ಕರ್ನಾಟಕ ಸಿಂಹಾಸನ ಸ್ಥಾಪನೆ	೧-೦-೦
೫. ಚರಿತ್ರ ಸಂಗ್ರಹ ಭಾ. ೧.	೧-೪-೦
೬. ಆಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨-೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩.	೧೨-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧-೮-೦
ಲ್ಯಾಂಡ ರೆವಿನ್ಯೂ ಕೋಡು	೨-೧೧-೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೩-೧೩-೦
೧೨. ಸ್ತ್ರೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇಸೂಪನೀತಿ ಕಥೆ ಭಾ. ೧, ೨.	೨-೪-೦
೧೪. ಕಾರ್ತಿಕ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.

The Dharwar Urban Co-op. Bank Ltd.

NOTICE.

A special General Meeting of the Dharwar Urban Co-operative Bank will be held on Sunday, 11th October 1931 in the Bank office at 5-30 P. M. to fill up the vacancy caused by the resignation of Mr. B. J. Deshpande.

2. Any other subjects if any.

Dharwar S. S. Arur,

Date 3-10-1931. *Chairman.*

ಧಾರವಾಡ ಅರ್ಬನ ಕೋ. ಅಪ. ಬ್ಯಾಂಕ

ಲಿಮಿಟೆಡ ಧಾರವಾಡ

ನೋಟೀಸು

ಧಾರವಾಡ ಅರ್ಬನ ಕೋ ಆಪರೇಟಿವ್ಹ ಕ್ರೆಡಿಟ ಬ್ಯಾಂಕಿನ ಸ್ಪೇಶಲ ಜನರಲ ಕಮೀಟಿಯು ತಾ॥ ೧೧ ಅಕ್ಟೋಬರ ೧೯೩೧ ನೆಯ ರವಿವಾರ ದಿವಸ ಸಾಯಂಕಾಲದ ೫॥ ಗಂಟೆಗೆ ಸರಿಯಾಗಿ ಬ್ಯಾಂಕಿನ ಕಚೇರಿಯಲ್ಲಿ ಮಿ. ಬಿ. ಜೆ. ದೇಶಪಾಂಡೆಯವರು ರಾಜೀನಾಮೆ ಕೊಟ್ಟಿದ್ದರಿಂದ ತೆರವಾದ ಸ್ಥಳದ ಭರ್ತಿ ಮಾಡುವದಕ್ಕಾಗಿ ನೆರೆಯುವದು. ಎಲ್ಲ ಶೇರ ಹೋಲ್ಡರರು ಆಗ್ಗೆ ಬರಬೇಕೆಂಬ ವಿನಂತಿಯು

೨ ಇನ್ನು ಬೇರೆ ಏನಾದರೂ ವಿಷಯಗಳಿದ್ದರೆ.

ತಾ॥ ೩-೧೦-೧೯೩೧

ಎಸ. ಎಸ. ಆರೂರ

ಚೇರಮನ್ನ

ವಿಜಯ.

ತಾರೀಖು ೪-೧೦-೧೯೩೧ನೇ ಇಸ್ವಿ

ಧಾರವಾಡದಲ್ಲಿ ಶ್ರೀ. ರಾಮಲಿಂಗ ರಡ್ಡಿಯವರ ವ್ಯಾಖ್ಯಾನಗಳು.

ಇಲ್ಲಿಯ ಕರ್ನಾಟಕ ಕಾಲೇಜದವರು ತಮ್ಮ ವಾರ್ಷಿಕ ಗ್ಯಾದರಿಂಗದ ದೆಸೆಯಿಂದ ಇಲ್ಲಿಗೆ ಶ್ರೀ ರಾಮಲಿಂಗ ರಡ್ಡಿಯವರನ್ನು ಕರಿಸಿಕೊಂಡದ್ದು, ಈ ಭಾಗದ ಬ್ರಾಹ್ಮಣೇತರರ ಮೇಲೆ ಮಹೋಪಕಾರ ಮಾಡಿದಂತಾಯಿತು. ಶ್ರೀ. ರಡ್ಡಿಯವರು ಸಾಮಾನ್ಯರಲ್ಲ. ವಿಲಾಯತಿಯಲ್ಲಿ ಶಿಕ್ಷಣಪಡೆದು ಹಿಂದುಸ್ಥಾನಕ್ಕೆ ಬಂದ ಬಳಿಕ ಬಡೋದೆ ಮತ್ತು ಮೈಸೂರ ಸಂಸ್ಥಾನಗಳಲ್ಲಿ ವಿದ್ಯಾಖಾತೆಯಲ್ಲಿ ದೊಡ್ಡ ಕೆಲಸ ಮಾಡಿದರು. ಮೈಸೂರಲ್ಲಿ ಈ ಖಾತೆಯ ಮುಖ್ಯಾಧಿಕಾರಿಯಾಗಿದ್ದರು. ಈ ಕೆಲಸ ಬಿಟ್ಟಬಳಿಕ ರಾಜಕಾರಣದಲ್ಲಿ ಬಿದ್ದರು. ಮದ್ರಾಸ ಇಲಾಖೆಯಲ್ಲಿದ್ದ ಬ್ರಾಹ್ಮಣ-ಬ್ರಾಹ್ಮಣೇತರ ಸೊಗಡು ಇವರಿಗೂ ಬಡಕೊಂಡಿತು. ಆದರೆ ಅದು ಬಹಳ ದಿವಸ ತಡೆಯಲಿಲ್ಲ. ದೇಶಕಾರ್ಯದಲ್ಲಿ ಕುಲವಿಚಾರವು ಹೀನ ಬಯಕೆಯಾಗುತ್ತದೆಂದು ಮನಗಂಡು ರಾಷ್ಟ್ರೀಯರಾಗಿ, ಮದ್ರಾಸದ ಕೌನ್ಸಿಲದ ಮೆಂಬರರಾದರು. ಈ ರಾಷ್ಟ್ರೀಯರು ಬ್ರಾಹ್ಮಣೇತರರ ಮೂರ್ಖತನದ ದಿವಾನಗಿರಿಯನ್ನು ಅಳಿದರು. ಆಗಾದ ಚುನಾವಣೆಯಲ್ಲಿ ಬ್ರಾಹ್ಮಣೇತರ ಪಕ್ಷದವರ ಕೂರ್ಮರಡ್ಡಿಯವರು ಸೋತು ಖ್ಯಾಲಿಯಾದರು. ಇರಲಿ; ಇವರು ಕೌನ್ಸಿಲಮೆಂಬರರಾಗಿರುವಾಗಲೇ ಆಂಧ್ರಯುನಿವರ್ಸಿಟಿಯ ಸ್ಥಾಪನೆಯಾಯಿತು. ಅದನ್ನು ಅಂಗೋಪಾಂಗವಾಗಿ ವ್ಯವಸ್ಥೆಗೊಳಿಸಲೋಸುಗ ಸರಕಾರದವರು ಇವರನ್ನು ವ್ಹಾಯಿಸ ಚ್ಯಾನ್ಸಲರ ನೇಮಿಸಿದರು. ಈ ಕೆಲಸ ಮಾಡುತ್ತಿದ್ದಾಗ, ಹೋದ ವರ್ಷದ ಕಾಯದೆಭಂಗವು ಸರಕಾರ ಸೇವೆಯ ಉಳಿದ ಭಾಗವನ್ನೂ ದೂರ ಮಾಡಿತು. ಬರೇ ರಾಷ್ಟ್ರೀಯರಲ್ಲ. ಮಹಾತ್ಮರ ಭಕ್ತರಾದರು. ಗುಂಟೂರು, ಕರ್ನೂಲು, ಮಚ್ಛಲೀಪಟ್ಟಣ ಮುಂತಾದ ಸ್ಥಳಗಳಲ್ಲಿ ಸಿವ್ಹಿಲಸರ್ವಂಟರ ಮತ್ತು ಇವರ ಪ್ರೇರಣೆಯಿಂದ, ಹೊಯ್ದೋಸ ಹಾಕುತ್ತಿದ್ದ ಪೋಲಿಸರ ಅನೇಕ ಅತ್ಯಾಚಾರ ಮತ್ತು ಹಿಂಸೆಗಳನ್ನು ಕುರಿತು ಸರಕಾರಕ್ಕೆ ವಿರುದ್ಧ ಪತ್ರ ಬರೆದರು. ಸರಕಾರದವರು ತಮ್ಮ ಪತ್ರಕ್ಕೆ ತಕ್ಕ ಬೆಲೆಗೊಡದ್ದನ್ನು ಕಂಡು ವ್ಹಾಯಿಸ ಚ್ಯಾನ್ಸಲರ ಕೆಲಸಕ್ಕೆ ರಾಜೀನಾಮೆಕೊಟ್ಟು, ಕಾಂಗ್ರೆಸದ ಮೆಂಬರರಾಗಿ, ಕಾಂಗ್ರೆಸದ ದೀಕ್ಷೆ ತಕ್ಕೊಂಡಿದ್ದಾರೆ. ಈ ದೀಕ್ಷೆಗೆ ಭೂಷಣ ತರುವಂಥ ಭಾಷಣಗಳನ್ನೇ ಇಲ್ಲಿ ಮಾಡಿದರು. ಶ್ರೀ ಮುರುಗರಾಜೇಂದ್ರ ಫ್ರೀ ಬೋರ್ಡಿಂಗದಲ್ಲಿ ಇವರ ವ್ಯಾಖ್ಯಾನ ಮಾಡಿಸಿದರು. ಕಲೆಕ್ಟರರಾದ ಮಿ. ಹಾರ್ಟಶಾರ್ನ ಸಾಹೇಬರನ್ನು ಅಧ್ಯಕ್ಷರಾಗಿ ಕರೆದಿದ್ದರು. ಶ್ರೀ. ರಡ್ಡಿಯವರು ಸಿವ್ಹಿಲಸರ್ವಂಟರ ದೊರೆತನದ ಬಗ್ಗೆ ಟೀಕೆಮಾಡಲು ಸಾಹೇಬರ ದಾಕ್ಷಿಣ್ಯವೆಷ್ಟೂ ಇಡಲಿಲ್ಲ. ಜಾತಿಯ ಸಂಕುಚಿತ ಪ್ರಶ್ನೆ ಬಿಟ್ಟು ವಿಶಾಲ ದೃಷ್ಟಿಯವರಾಗಿ ಕಾಂಗ್ರೆಸವನ್ನು ಸೇರಿರೆಂದು ಎಲ್ಲಾ ಜನರಿಗೆ ಅಲ್ಲಿಯೂ, ಸಾಯಂಕಾಲದಲ್ಲಿ ಕೂಡಿದ್ದ ಸಾರ್ವಜನಿಕ ಸಭೆಯಲ್ಲಿಯೂ ಅಧಿಕಾರವಾಣಿಯಿಂದ ಉಪದೇಶ ಮಾಡಿದರು. ಮೂರು ವರ್ಷಗಳ ಹಿಂದೆ ಇಲ್ಲಿಗೆ ಸರ ಕೂರ್ಮರಡ್ಡಿಯವರು ಸಹಕಾರಿಯಾಗಿ ಬಂದಿದ್ದರು. ಶ್ರೀ. ರಾಮಲಿಂಗ ರಡ್ಡಿಯವರು ಅಸಹಕಾರಿಯಾಗಿ ಬಂದು ಹೋದರು. ಬ್ರಾಹ್ಮಣೇತರವೆಂದಿರುವ ರಡ್ಡೀ, ಲಿಂಗಾಯತ ಮುಖಂಡರು ಶ್ರೀ. ರಾಮಲಿಂಗರವರಿಂದ ಬುದ್ಧಿಗಲಿತರೆ- ತಮಗೆ ಈ ಪ್ರಾಂತದಲ್ಲಿ ಸಂಚಾರ ಮಾಡಿದ ಬಗ್ಗೆಯಾದ ಶ್ರಮದ ಫಲದೊರೆಯಿತೆಂದು ಅವರು ಸಂತೋಷ ಪಡವರು.

ಸ್ವರಾಜ್ಯದ ತಿರಿಕಿ ಬೇಡಲಿಕ್ಕೆ ಬಂದಿಲ್ಲ.

····(೦)····

ವ್ಹಿಯಾನಾದಿಂದ ಶ್ರೀ. ವಿಠ್ಠಲಭಾಯಿ ಪಟೇಲರು ಲಂಡನಕ್ಕೆ ಬಂದಿದ್ದಾರೆ. ಇವರು, ದೇವಿ ಸರೋಜನಿ ಮತ್ತು ಪಂಡಿತ ಮಾಲವಿಯಾಯವರು ಲಂಡನದಲ್ಲಿ ಹಿಂದೂ ಮತ್ತು ಇಂಗ್ಲಿಷ ಜನರು ಕೂಡಿದ ಸಭೆಯಲ್ಲಿ ಭಾಷಣ ಮಾಡಿದರು. ನಮಗೆ ಪೂರ್ಣ ಸ್ವಾತಂತ್ರ್ಯ ಬೇಕು. ಇಲ್ಲಿ ನಾವು ಹಳೇ ಕಾಲದ ಬ್ರಾಹ್ಮಣರಂತೆ ಭಿಕ್ಷಾಪಾತ್ರ ಹಿಡಕೊಂಡು ಸ್ವರಾಜ್ಯದೇಹಿ ಎಂದು ಬಂದಿಲ್ಲ. ಹಕ್ಕಿನಿಂದ ಕೇಳಲಿಕ್ಕೆ ಬಂದಿದ್ದೇವೆ. ಮೊದಲು ನಮ್ಮ ಸ್ವರಾಜ್ಯ ಸ್ವಾತಂತ್ರ್ಯ ಕೊಡಿರಿ. ದಂಡಿನ ಮೇಲೆ ಸಹ ನಮ್ಮ ಹುಕುಮತ್ತು ಇರಬೇಕು. ನಮಗೆ ನೀವು ಸ್ವಾತಂತ್ರ್ಯ ಕೊಟ್ಟ ಬಳಿಕ ನಾವು ನಮ್ಮ ಜಾತಿ, ಉಪಜಾತಿಯ ಪ್ರಶ್ನೆಗಳ ಅಗ್ಗಂಟನ್ನು ಬಿಡಿಸಿಕೊಳ್ಳುವೆವು. ಮಹಾತ್ಮರು ಮ್ಯಾಂಚೆಸ್ಟರದವರಿಗೆ ವ್ಯಾಪಾರ ವಿಷಯವಾಗಿ ಕೆಲ ಸವಲತ್ತುಗಳನ್ನು ಕೊಡುತ್ತೇವೆಂದು ಹೇಳಿದ್ದಕ್ಕೆ ನಮ್ಮ ಸಮ್ಮತಿಯಿಲ್ಲ. ಅವರು ನಮ್ಮ ಮುಖಂಡರು ನಿಜ. ಧಿತ್ವಾಧಿಪತ್ಯಯವಾದರೆ- ಒಡೆದು ಹೇಳುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ನೀವು ಇಂಗ್ಲಿಷ ಜನರು ಸಂಪೂರ್ಣ ಸ್ವಾತಂತ್ರ್ಯ ಕೊಡದಿದ್ದರೆ- ಹಿಂದುಸ್ಥಾನದಲ್ಲಿ ಆಶ್ಚರ್ಯವೆನಿಸುವಷ್ಟು ಅಸಂತೋಷ ತೋರುವದು- ಇಂಗ್ಲಿಷವೆಂಬುದಕ್ಕೆಲ್ಲ ಬಹಿಷ್ಕಾರ ಹಾಕುವರು. ಕುಸು ಜನರು ಸರಕಾರದ ಕರ ಕಂದಾಯ ಕೊಡದಿದ್ದರೂ, ಸರಕಾರದ ಫಜೀತಿಯಾಗುವದು. ರಾಜ್ಯವಾಳುವದೇ ಕಷ್ಟವಾಗುವದು. ಮುಂದಿನ ಸಂಕಟಗಳೇಳದಂತೆ ಎಚ್ಚರರಾಗಿ, ಸ್ವರಾಜ್ಯ ಕೊಡಿರೆಂದು ಹೇಳುವದೇ ಈ ಮೂರ್ತಿತ್ರಯರ ಭಾಷಣದ ಸಾರಾಂಶವಾಗಿರುತ್ತದೆ.

ಮಹಾತ್ಮರನ್ನು ಹೊಗಳುವ ಪೌಂಡರೀಕ ವಾಸುದೇವನು

····(೦)····

ತಾನೇ ಈ ಶ್ರೀಕೃಷ್ಣ ಪರಮಾತ್ಮನೆಂದು ಹೇಳಿಕೊಂಡು, ತೋತಯಾ ಕೃಷ್ಣನಾಗಿದ್ದ ಪೌಂಡರೀಕ ವಾಸುದೇವನ ದೇವನಿಂದೆಯು ಪುರಾಣ ಪ್ರಸಿದ್ಧವಾಗಿರುತ್ತದೆ. ಅಂಥ ನಿಂದೆಯಿಂದ ತನ್ನ ಪ್ರಖ್ಯಾತಿ ಮಾಡಿಕೊಳ್ಳಲು- ಇಂಗ್ಲಂಡದಲ್ಲಿ ಲಾರ್ಡ ಬರ್ನಹ್ಯಾಮರೆಂಬ ಸಾಹೇಬರು ಮುಂದೆ ಬಂದಿದ್ದಾರೆ. ಈ ಸಾಹೇಬರು ಮಹಾತ್ಮರನ್ನೂ ಮತ್ತು ಅವರ ಕೂಡ ಲಾರ್ಡ ಆರ್ವಿನ್ನ ಸಾಹೇಬರನ್ನೂ ಮನದಣಿ ಬೈದುಕೊಂಡಿದ್ದಾರೆ. ವಣವರನ್ನದೇನೆಂದರೆ-

ಮಿ. ಗಾಂಧಿಯವರು ಇಂಗ್ಲಿಷ ಜನರ ಕಡು ವೈರಿಯಾಗಿದ್ದಾರೆ. ಬಹಳ ದೊಡ್ಡ ವೈರಿಯು. ಲಾರ್ಡ ಆರ್ವಿನ್ನ ಸಾಹೇಬರ ಉದಾತ್ತ ವಿಚಾರದ ಬಗ್ಗೆ ಮತ್ತು ಲೌಕಿಕ ವ್ಯವಹಾರದ ಬಗ್ಗೆ ಅವರಲ್ಲಿ ನನ್ನ ಆದರವುಂಟು. ಆದರೆ ರಾಜಕೀಯ ರಣಾಂಗಣದ ಕುಸ್ತಿಯಲ್ಲಿ ಅವರು ಮಿ. ಗಾಂಧಿಯವರಿಗೆ ಸರಿಯಾದ ಜೋಡಿಯಾಗಲಿಲ್ಲ. ಲಾರ್ಡಸಾಹೇಬರ ದೊರೆತನವು ಬಲಹೀನತೆಯ ಶುದ್ಧ ಸಾರವಾಯಿತು. ಹಿಂದುಸ್ಥಾನದಲ್ಲಿ ಲಾರ್ಡ ಆರ್ವಿನ್ನರ ದೊರೆತನದಂಥ ಮಾದರಿಯಿಂದಲೇ ರಾಜ್ಯಕಾರಭಾರ ಮಾಡುವದಾದರೆ- ನಾವು ಅನಾಯಕತನದ ಗೊಂದಲದಲ್ಲಿ ಸಿಕ್ಕು, ಅಧಃಪಾತಕ್ಕೆ ಗುರಿಯಾಗುವದೇ ನಿಜ. ಹುಚ್ಚ ಇಂಗ್ಲಿಷ ಜನರು ಗಾಂಧಿಯು ಇಂಗ್ಲಂಡಕ್ಕೆ ಬಂದಾಗ ಬಹುಮಾನಪೂರ್ವಕವಾಗಿ ಆತನ ಸ್ವಾಗತಮಾಡಿ, ಜಯಜಯಕಾರ ಮಾಡಿದ್ದು ಇಂಗ್ಲಿಷ ಜನರು ತಮ್ಮ ಮಾನಭಂಗವನ್ನು ತಾವೇ ಮಾಡಿಕೊಂಡಂತಾಯಿತು.

ಮಹಾತ್ಮರು ಹಿಂದುಸ್ಥಾನಕ್ಕೆ ಯಾವಾಗ ತಿರುಗುವರೆಂಬ ನಿಯಮವುಳ್ಳಿಲ್ಲ.

....(೦)....

ಮಹಾತ್ಮರ ಜನ್ಮೋತ್ಸವದ ಕಾರ್ಯ ಮುಗಿದ ಬಳಿಕ, ಮುಖ್ಯ ಮಂತ್ರಿ ಮೆ. ಮ್ಯಾಕಡೋನಾಲ್ಡ ಸಾಹೇಬರನ್ನು ಕಾಣಲಿಕ್ಕೆ ಹೋಗಿ, -ನೀವು ನಿಮ್ಮ ನಿಶ್ಚಿತವಾದ ಧೋರಣವನ್ನು ಬೇಗನೆ ಜಾಹೀರ ಮಾಡಿರೆಂದು ಸೂಚಿಸಿದರು. ಅದಕ್ಕೆ ಆ ಮಹಾನುಭಾವರು ಸರಕಾರದ ಉತ್ತರ ಕೊಟ್ಟರು ಇದರಿಂದ ಮಹಾತ್ಮರು ಇಂಗ್ಲಂಡದಲ್ಲಿರುವದು ಅಸ್ಥಿರವಾದ್ದರಿಂದ, ಅವರು ಯಾವಾಗ ಲಂಡನಕ್ಕೆ ಶರಣು ಹೊಡೆದು, ಸ್ವದೇಶದ ದಾರೀ ಹಿಡಿಯುವರೆಂಬದು ತಿಳಿಯದಾಗಿದೆ. ಮಹಾತ್ಮರ ಹೊರಡುವದೆಂದರೆ ಬಂದ ದಾ ಜೋಗಿ ಎಂದ ಕೂಡಲೆ-ಕಯ್ಯಲ್ಲಿ ಕಡಾಣವೊಂದುಳಿತ್ತದೆ.

ಲಂಡನದಲ್ಲಿ ಮಹಾತ್ಮರ ಹುಟ್ಟಿದ ಹಬ್ಬ

....(೦)....

ಸರಕಾರದವರು ನಂಬಿಗೆಯ ಮಾತು ಹೇಳದಿದ್ದರೆ- ಹಿಂದುಸ್ಥಾನದ ದಾರೀ ಹಿಡಿಯುವರು

....(೦)....

ಲಂಡನವಾಸಿಗಳಾದ ಹಿಂದೀ ಜನರು ಶ್ರೀ ವಿಠ್ಠಲಭಾಯಿಯವರ ಅಧ್ಯಕ್ಷತೆಯಲ್ಲಿ ಮಹಾತ್ಮರ ವರ್ಧಂತ್ಯುತ್ಸವದ ಸಮಾರಂಭ ಮಾಡಿದರು. ಸಭೆಗೆ ಮಹಾತ್ಮರೂ ದಯಮಾಡಿಸಿದರು. ಸಭಿಕರು ಮಹಾತ್ಮರಿಗೆ ೫೭೫ ಪವನುಗಳ ಥೈಲಿಯನ್ನು ಕಾಣಿಕೆಯಾಗಿ ಕೊಟ್ಟರು. ಮಹಾತ್ಮರು ಆಗೊಂದು ಪುಟ್ಟ ಭಾಷಣ ಮಾಡಿ

ಹಿಂದೀ ಜನರು ತಮ್ಮ ಹೊಟ್ಟೆ ಬಟ್ಟೆಗಳ ದೆಸೆಯಿಂದಾದರೂ ಪರದೇಶಗಳ ಕಡೆಗೆ ಮೋರೆ ಮಾಡುವ ಕಾರಣವಿಲ್ಲ. ಬ್ರಿಟಿಶ ಮಂತ್ರಿಮಂಡಲಿಯವರು ಹಿಂದುಸ್ಥಾನ ವಿಷಯಕವಾದ ತಮ್ಮ ಧೋರಣವನ್ನು ಬೇಗನೆ ಜಾಹೀರ ಮಾಡದಿದ್ದರೆ- ನಾನು ತಿರುಗಿ ಹಿಂದುಸ್ಥಾನಕ್ಕೆ ಹೋಗುವೆನು.

ಎಂಬದಾಗಿ ಜಾಹೀರ ಮಾಡಿದರು

ಮಹಾತ್ಮರ ಜನ್ಮೋತ್ಸವಕ್ಕಾಗಿ ಆರು ಸಾವಿರ ರೂಪಾಯಿ ವೆಚ್ಚಮಾಡಿ, ಹುಡುಗರಿಗೆ ಮಹಾತ್ಮರ ಭಾವಪಟ ಹಾಗು ಮೆಚ್ಚು ಕೊಡಬೇಕೆಂದು ಕಲಕತ್ತೆಯ ಮ್ಯುನಿಸಿಪಾಲಿಟಿಯಲ್ಲಿ ಠರಾವು ಮಾಡಿದ್ದಾರೆ. ಯುರೋಪಿಯನ್ನ ಮೆಂಬರರು ಉತ್ಸವಕ್ಕೆ ಹಿಸ್ಪಿದರು. ಆದರೆ ಮ್ಯುನಿಸಿಪಾಲಿಟಿಯು ದುಡ್ಡು ವೆಚ್ಚ ಮಾಡಬಾರದೆಂದು ವಿರೋಧಿಸಿದರು.

ಮುಂಬಯಿ ಕೌನ್ಸಿಲದಲ್ಲಿ ಒಬ್ಬ ಸಾಹೇಬರ ನೇಮಣೂಕಿಯ ದೆಸೆಯಿಂದಾದ ವ್ಯಾಜ್ಯ.

—(೦)—

ಮಂತ್ರಿಯಾದ ಮೆ. ರಫಿಯುದ್ದೀನಸಾಹೇಬರು ಕೆಮೆರಾನರೆಂಬಸಾಹೇಬರು ವಿದ್ಯಾಖಾತೆಯ ಇನಸ್ಪೆಕ್ಟರರಾಗಿ ನೇಮಿಸಿದ್ದಾರೆ. ಸಾಹೇಬರ ಬದಲು ಹಿಂದೀಗೃಹಸ್ಥನನ್ನೇಕೆ ನೇಮಿಸಲಿಲ್ಲೆಂದು ಇವರಿಗೆ ಪ್ರಶ್ನ ಮಾಡಲು-ಪ್ರಶ್ನ-ಉತ್ತರ- ಉತ್ತರದಿಂದಾದ ಪುನಃ ಪ್ರಶ್ನ ಇವುಗಳಿಗೆ ಉತ್ತರಕೊಡುವಾಗ ಮಂತ್ರಿಯವರ ಫಜೀತಿಯಾಗಿಹೋಯಿತು.

ಕೆಮೆರಾನರಂಥ ಯೋಗ್ಯ ಗೃಹಸ್ಥನು ಸಿಗದ್ದರಿಂದ, ಈ ನೇಮಣೂಕ ಮಾಡಬೇಕಾಯಿತು.

ರಾ. ಬ. ಕಾಳೆ ಸಂಬಳ ಪ್ರಾರಂಭವು ೩೨೦ ರಿಂದ ಪ್ರಾರಂಭವಾಗಬೇಕೆಂದು ಈ ಸಾಹೇಬರಿಗೆ ೫೨೦ ರೂಪಾಯಿ ಏಕೆ ದೊರೆಯುತ್ತದೆ.

ಮಂತ್ರಿ-ಪಗಾರದ ಸ್ಕೇಲು ೩೩೦ ರಿಂದ ೧೨೦೦ ರ ತನಕ ಇರುವದರಿಂದ, ಇಂತಿಷ್ಟೇ ಸಂಬಳದ ಪ್ರಾರಂಭವಾಗಬೇಕೆಂದು ಕೌನ್ಸಿಲದ ಮಂಜೂರಿ ಬೇಡುವ ಅಗತ್ಯವುಂಟಾಗಲಿಲ್ಲ.

ಮಿ. ಕುಲಕರ್ಣಿ-ಈ ಸಾಹೇಬರ ಕಡೆಗೆ ಸದ್ಯ ಯಾವ ಕೆಲಸವುಂಟು ?

ಮಂತ್ರಿ-ಅವರನ್ನು ಡಾಯರೆಕ್ಟರರ ಕಚೇರಿಯಲ್ಲಿ ತಕ್ಕೊಂಡಿವೆ.

ಮಿ. ಕುಲಕರ್ಣಿ-ಎಜ್ಯುಕೇಶನಲ ಇನಸ್ಪೆಕ್ಟರರೆಂದು ನೇಮಿಸಿಕೊಂಡಿರಷ್ಟೇ;

ಮಂತ್ರಿ-ಕೆಲಸದ ಮಾಹಿತಿಯಾಗಬೇಕೆಂದು ಡಾಯರೆಕ್ಟರರ ಕಚೇರಿಯಲ್ಲಿ ಹಾಕಿದೆ.

ರಾ. ಬ, ಕಾಳೆ-ಅವರು ಅನುಭವಿಕ ಇನಸ್ಪೆಕ್ಟರರೆಂದು ಅವರಿಗೆ ೫೩೦ ಕೊಟ್ಟು ನೇಮಿಸಿಕೊಂಡಿರಷ್ಟೇ?

ಮಂತ್ರಿ-ಹೌದು. ಅವರ ಅನುಭವವು ಇಂಗ್ಲಂಡದ್ದಿರುತ್ತದೆ.

ಮಿ-ಕುಲಕರ್ಣಿ-ಅವರಿಗೆ ಮರಾಠಿ ಬರುತ್ತದೇನು ?

ಮಂತ್ರಿ-ಬೇಗನೆ ಮರಾಠಿ ಕಲಿಯುವರು.

ಕೌನ್ಸಿಲದ ತುಂಬ ಜನರು ಖೊಳ್ಳನೆ ನಕ್ಕು ಮಂತ್ರಿ ರಫಿಯುದ್ದೀನ ಸಾಹೇಬರು ಕಕ್ಕಾವಿಕ್ಕಿಯಾದರು.

ಬ್ಯಾಂಕುಗಳಿಗೆ ದಿವಾಳಿಯ ಪ್ಲೇಗೆ ಬಂತು

ಉತ್ತರಹಿಂದುಸ್ಥಾನದಲ್ಲಿ ಪ್ರಸಿದ್ಧವಾದ ಲಾಹೋರಿನ ಪೀಪಲ್ಸ ಮತ್ತು ರಾವಲಪಿಂಡಿಯಲ್ಲಿರುವ ಪಂಜಾಬ ಮತ್ತು ಕಾಶ್ಮೀರ ಹಾಗು ಇನ್ನು ಅನೇಕ ಬ್ಯಾಂಕುಗಳಿಗೆ ಈ ವಾರದಲ್ಲಿ ದಿವಾಳಿತೆಗೆಯುವ ಪಿಡುಗು ಬಂದು, ಬಂದಾದವು. ಈ ಮೂಲಕ ಅತ್ತಿಕಡೆಯು ಜನರಲ್ಲಿ ಹಾಹಾಕಾರವಾಗಿದೆ.

ತಿರಪೂರದಲ್ಲಿ ಪೋಲೀಸರ ಉದ್ಧಟತನ

—(೦)—

ಖಾದಿಯಿಂದ ಪ್ರಸಿದ್ಧವಾದ ತಿರಪೂರಿನಲ್ಲಿ ಪ್ರತಿಷ್ಠಿತ ಜನರು ಗಂಡಂಗಡಿಗಳ ಮುಂದೆ ಪಿಕೆಟಿಂಗ ಮಾಡುತ್ತಿದ್ದಾಗ, ಸಬ್ ಇನ್ಸಪೆಕ್ಟರ ಅಹಮದರೆಂಬವರು ಇವರನ್ನು ಹಿಡಿದು, ಅನ್ನ ನೀರಿಲ್ಲದೆ ಹದಿನೆಂಟು ತಾಸಿನ ತನಕ ಲಾಕಪ್ಪಿನಲ್ಲಿ ಹಾಕಿ, ಹೊಡೆದು ಮೀಸೆ ಜಗ್ಗಿ, ಬಂದೂಕಿನಿಂದ ತಿವಿದು ಬಹುವಾಗಿ ಹಿಂಸಿಸಿ ಬಿಟ್ಟರು. ಸಾಹೇಬರ ಈ ಕೃತ್ಯದ ಬಗ್ಗೆ ಅಲ್ಲಿಯ ಲೋಕಮತವು ಅತ್ಯಂತವಾಗಿ ಸಂತಾಪಗೊಂಡಿದೆ

ಸ್ವದೇಶಿ ವರ್ತಮಾನಪತ್ರಗಳು ಒಂದು ದಿವಸ ಬಂದಾದವು

—(೦)—

ಅಸೆಂಬ್ಲಿಯಲ್ಲಿ ವರ್ತಮಾನಪತ್ರಗಳ ದಬ್ಬಾಳಿಕೆಯ ವಿಷಯವಾಗಿ ಸರಕಾರದವರು ತಂದ ಬಿಲ್ಲಿನ ನಿಷೇಧವೆಂದು ಹಿಂದುಸ್ಥಾನದಲ್ಲಿ ಸ್ವದೇಶಿಯರಿಂದ ನಡೆಸಲ್ಪಡುವ ವರ್ತಮಾನಪತ್ರಗಳು ಈ ವಾರದಲ್ಲಿ ಒಂದು ದಿವಸ ಹರತಾಳ ಮಾಡಿ, ಬಂದಾದವು. ಇಂಗ್ರೇಜಿ ಪತ್ರಗಳು ಮಾತ್ರ ಉಬ್ಬಿನಿಂದ ಮೆರೆದವು. ಹಿಂದೀ ಜನಾಂಗದ ಕೂಡ ಸ್ವರಾಜ್ಯದಲ್ಲಿ ಸಹಕಾರ ಮಾಡುವ ಮುಂಗುರುತೇ ಸರಿ

ಇಪ್ಪತ್ತು ಲಕ್ಷ ತೊಲಿಯು ಹಿಂದುಸ್ಥಾನ ಬಿಟ್ಟಿತು

—(೦)—

ಅಮೇರಿಕೆಯ ಚಿನ್ನವು ವಿಲಾಯತಿಯ ಮಾರ್ಗವಿಡಿದಾಗ, ಹಿಂದುಸ್ಥಾನದಿಂದ ೨೦ ಲಕ್ಷ ತೊಲಿಯಷ್ಟು ಬಂಗಾರವು ಅಮೇರಿಕೆಯ ದಾರೀ ಹಿಡಿಯಿತು. ಏಕಂದರೆ- ಅಲ್ಲಿಯ ಡಾಲರಗಳ ಬೆಲೆಯು ಇಲ್ಲಿಯ ಬಂಗಾರಕ್ಕಿಂತ ಅಗ್ಗವಾದ್ದರಿಂದ, ಅಲ್ಲಿಗೆ ಚಿನ್ನ ಹೋಗಲಾರಂಭಿಸಿದೆ. ಹೀಗೆ ಇದರ ನಿರ್ಗತವಾಗಬಾರದೆಂದು ವರ್ತಕರು ಆಗಲೆ ಪಾಂಚಜನ್ಯ ಮಾಡಲಾರಂಭಿಸಿದ್ದಾರೆ. ಆದರೆ ಇದು ಅರಣ್ಯರೋದನವಾಗುವದೇ ನಿಜ.

ವಿಲಾಯತಿಗೆ ಅಮೇರಿಕೆಯ ಬಂಗಾರದ ಪ್ರವ

—(೦)—

ಅಮೇರಿಕೆಯ ಗ್ಯಾರಂಟಿ ಟ್ರಸ್ಟವೆಂಬ ಪೇಢಿಯವರು ವಿಲಾಯತಿಗೆ ಬಂಗಾರದ ಹರಿ ಕಡಿದಿದ್ದಾರೆ. ಇವರು ೧, ೬೪೦೦೦೦೦ ಡಾಲರ ಚಿನ್ನವನ್ನು ಫ್ರಾನ್ಸಕ್ಕೆ ೫೫,೯೦೦೦೦ ಡಾಲರ ಚಿನ್ನವನ್ನು ಸ್ವಿಟ್ಝರಲಂಡಕ್ಕೆ, ೧೦, ೨೫೦೦೦ ದ ಚಿನ್ನವನ್ನು ಹಾಲಂಡಕ್ಕೆ ಕಳಿಸುವರು. ಇದರ ಕೆಲ ಭಾಗವನ್ನು ಈಗಾಗಲೇ ಅಕ್ವಿಟಾನಿಯಾ ಎಂಬ ಹಡಗವು ಹೇರಿಕೊಂಡು ವಿಲಾಯತಿಯ ದಾರೀ ಹಿಡಿದಿದೆ.

ವ್ಯಾಯಾಮ ಶಾಲೆ
ರಾಣೇಬೆನ್ನೂರ

—(೦)—

ಪತ್ರಿಕೆಯ ಸಂಪಾದಕರಿಗೆ:-

ರಾಣೇಬೆನ್ನೂರಲ್ಲಿ ಮಲ್ಲಸರ್ಜನ ವ್ಯಾಯಾಮಶಾಲೆಯು ಸುರುವಾಗಿ ಎರಡೂವರೆ ತಿಂಗಳು ಆಗುತ್ತ ಬಂತು. ಈ ಶಾಲೆಯನ್ನು ಸುರುವುಮಾಡಿ ನಡಿಸುತ್ತಿರುವರು ಧಾರವಾಡ ಕನ್ನಡಿಗರ ಕೂಟದ ವ್ಯಾಯಾಮಶಾಲೆಯವರಾದ ಹಳೇಪ್ಯಾಟಿ ಮಾಧವರಾಯರು. ಶಿಕ್ಷಕರು ಈಗ ೫೦ ವಿದ್ಯಾರ್ಥಿಗಳು ಕ್ಲಾಸಿ ಬಂದು ಪ್ರತಿನಿತ್ಯದ ಪಾಠಗಳಾದ ಹಿಂದೀಡ್ರಿಲ್, ಲಾಠೀ, ಲೇಝೀಮ, ಸೂರ್ಯನಮಸ್ಕಾರ, ಮತ್ತು ಆಸನಗಳನ್ನು ಕಲಿಯುತ್ತಿರುವರು.

ಜುಲೈ ತಿಂಗಳ ಅಖೈರಿಗೆ ಸುರುವಾದ ಕ್ಲಾಸಿಗೆ ೨೦ ವಿದ್ಯಾರ್ಥಿಗಳು ಬರುತ್ತಿದ್ದರು. ಈಗ ಅವರ ಲಾಠೀ ಶಿಕ್ಷಣವು ಪೂರೈಸುತ್ತ ಬಂದಿದೆ. ಆಗಸ್ಟ ಮೊದಲನೇ ವಾರದಲ್ಲಿ ಸುರುವಾದ ಕ್ಲಾಸಿಗೆ ೩೦ ವಿದ್ಯಾರ್ಥಿಗಳು ಬರುತ್ತಿರುವರು.

ಈಸಲ ಗಣೇಶಚತುರ್ಥಿಯ ದಿವಸ ಮೊದಲನೇ ಕ್ಲಾಸಿನ ವಿದ್ಯಾರ್ಥಿಗಳಲ್ಲಿ ಸೂರ್ಯನಮಸ್ಕಾರಗಳ ಮೇಲಾಟವಾಯಿತು. ಅದರಲ್ಲಿ ೧೪ ವಯಸ್ಸು ಮೀರಿದ ೯ ಜನಗಳಲ್ಲಿ ೨೫೨ ನಮಸ್ಕಾರಗಳನ್ನು ಹಾಕಿ ಶ್ರೀ ಶಿಂಧೆ ರಾಮಚಂದ್ರ ಇವರೂ ೧೪ ವಯಸ್ಸಿನ ಒಳಗಿನ ೧೬ ಜನಗಳಲ್ಲಿ ೮೦ ನಮಸ್ಕಾರಗಳನ್ನು ಹಾಕಿ ಶ್ರೀ ಜೋಗಳೇಕರ ರಾಮಚಂದ್ರ ಇವರೂ ಮೊದಲು ನಂಬರು ಬಂದರು. ಈ ಮೊದಲು ನಂಬರ ಬಂದವರಿಗೆ ವ್ಯಾಯಾಮೋತ್ತೇಜನಾರ್ಥವಾಗಿ ಎ. ಎಸ್. ನಾಯಿಕ ಇವರು ಕೊಟ್ಟ ಚಿನ್ನ ಮಾರುತಿಯ ಪದಕಗಳನ್ನು ಬಾಗಲಕೋಟೆ [illegible] ಕ್ಯಾಂಪಿನಲ್ಲಿ ಹಿಂದುಸ್ಥಾನೀ ಸೇವಾದಲದ [illegible] ಶಿಕ್ಷಣವನ್ನು ಪಡೆದು ಬಂದವರಾದ ಶ್ರೀ ಮಾಗಡಿಯವರ ಕೈಯಿಂದ ಈಗಿನ [illegible] ಕೊಡಿಸುವದರಲ್ಲಿ ಬಂತು.

ಹಳೇಪ್ಯಾಟಿಯವರು ಕ್ಲಾಸಿನ ಎಲ್ಲರಿಗೂ [illegible] ಮಾಗಡಿಯವರ ಪರಿಚಯವನ್ನು [illegible] ಮಾಡಿಕೊಟ್ಟರು. ನಂತರ ಶ್ರೀ ಮಾ[illegible]ನ್ನು ಮತ್ತು ಆಜ್ಞೆ ಪಾಲಿಸುವದರ [illegible]ಷಣಮಾಡಿದರು. ಶ್ರೀ ಹಳ್ಳೀಕೇರಿಯವರು ಕ್ಲಾಸಿನ ವಿದ್ಯಾರ್ಥಿಗಳು ಇನ್ನು ಮುಂದೆ ಮಾಡತಕ್ಕದಾದ ಕಾರ್ಯಗಳನ್ನು ಕುರಿತು ಅಂದ ನಾಡಹಬ್ಬವಾದ ನವರಾತ್ರೀ ಹಬ್ಬದ ಗುಟ್ಟ ಎಲ್ಲ ಜನರಿಗೂ ತಿಳಿದು ಬರುವಂತೆ ಆಚರಿಸಬೇಕಾಗಿ ಹೇಳಿದರು.

ಶ್ರೀ ಹಳೆಪ್ಯಾಟಿಯವರು ಎಲ್ಲರ ಆಭಾರ ಮನ್ನಿಸಿದನಂತರ ಕಾರ್ಯಕ್ರಮವನ್ನು ಮುಗಿಸಲಾಯಿತು.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿವಾದ್ವೈತದೂತರ ಅಪೀಲರ್ಥ, ಶ್ರೀ ಆರೂಢಸ್ವಾಮಿಗಳ ಕೃಪೆಯನ್ನು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ ವಾದಿ, ಪ್ರತಿವಾದಿ, ಹಾಗು ಮುನಸುಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಭಕ್ತರ ಬಹಳ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ಕಡಿಮೆನಿಸುತ್ತವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ಕರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚ ಬೇರೆ ಒಂದೆರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಐದಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಬಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಬಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

೨೨-೯-೨೬ ಮತ್ತು ೨೩ನೇ ದಿನ ಧಾರವಾಡ ಮಲ್ಲಸರ್ಜನ ವ್ಯಾಯಾಮ ಶಾಲೆಯ ಪ್ರವರ್ತಕರಾದ ಶ್ರೀ ಶೇಷಣ್ಣನವರು, ತಾವು ಕಳಿಸಿಕೊಟ್ಟ ಹಳೇಪ್ಯಾಟಿಯವರು ರಾಣೇಬೆನ್ನೂರಿನಲ್ಲಿ ಸುರುವು ಮಾಡಿದ ಮಲ್ಲಸರ್ಜನ ವ್ಯಾಯಾಮ ಶಾಲೆಯು ಎರಡೂ ಲಾಠೀ ಕ್ಲಾಸುಗಳನ್ನು ಪರಿಶೀಲಿಸಿಕೊಂಡು ಹಾವೇರಿಗೆ ಹೋದರು.

ಕುಮಾರಶ್ರೀ, ಕೊಟ್ರಪ್ಪನವರು
ಸದ್ಯದ ಕಾರ್ಯದರ್ಶಿ
ಮ| ಶಾ| ಕ| ರಾಣೇಬೆನ್ನೂರ.

ಫಕ್ತ ೩ ತಿಂಗಳು ಈ ಪತ್ರದ ವರ್ಗಣಿದಾರರಿಗೆ

"ಸೋ ಇ" ಅರ್ಧ ಕಿಮ್ಮತ್ತು "ಸೋ ಇ"

ಕತ್ತಲಲ್ಲಿ ಕಾಣುವ ರೆಡಿಯಂ ರಿಸ್ಟ ವಾಚು.



ನಿಜವಾದ ಕಿಮ್ಮತ್ತು
ರೂ. ೧೬

ಈಗ ಕೊಡುವ ಕಿಮ್ಮತ್ತು
ರೂ. ೮-೦-೦

ಇವುಗಳ ಕಿಮ್ಮತ್ತಿನ ಶಿವಾಯ ಟ. ಖ ಬೇರೆ

ಒಮ್ಮೆಲೇ ೩ ವಾಚು ತರಿಸಿದರೆ ಟ. ಖ ಮಾಫ ೬ ವಾಚು ತರಿಸಿದರೆ ೧ ವಾಚು ಹೆಚ್ಚು. ಇವುಗಳಿಗೆ ಗ್ಯಾರಂಟಿ ೫ ವರ್ಷ ಕೊಡುವೆವು.

ವಿಳಾಸ:- ಸುಪೀರಿಯರ್ ವಾಚ್ ಕಂಪನಿ,
ಪೋಸ್ಟ ಬನವಾಸಿ (ಉ. ಕಾ.)

THE ANKALIGI BANK
LTD.
Head Office
Kamankatta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT

Dharwar 3—1—1927 } K. B. ANKALIGI
Managing Director

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	ರೂ. ೧೫-೦-೦
೬ ,,	೭-೮-೦
೩ ,,	೪-೦-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟ ಮಾಡಿದರು

K. N. D. 1553.

ವಿಜಯ

[illegible] [illegible]

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಸೋಮವಾರ ತಾರೀಖು ೫ ನೇ ಅಕ್ಟೋಬರ ೧೯೩೧ (ಸಂಚಿಕೆ ೨೨೪

The Asian Life Assurance Co. Ltd Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦ ಹೆಡ್ಡ ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶೀ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೪,೦೦೦,೦೦ ಕಂತದ ಉತ್ಪನ್ನ ರೂ. ೭೦೬,೮೦೮

ವಿಮೆಯ ಹಣ ತಿರುಗಿ ಕೊಟ್ಟದ್ದು ೧೦,೮೮,೦೦೦

ಜಿಂದಿಗಿ ೨೩,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಜಾಬಾಗಕರ ಮತ್ತು ಕುಲಕರ್ಣಿ, ಧಾರವಾಡದ ಏಜಂಟರು

ಬಿ. ಎಚ್. ಪಾಟೀಲ ಹಾವೇರಿಯ ಚೀಫ ಏಜಂಟರು.

ಕೆ. ಪ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಹುಬಳಿಯ ಏಜಂಟರು- ಶ್ರೀ. ಎನ್. ಎಮ್. ದೊಡ್ಡವಾಡ ಮತ್ತು ಶ್ರೀ. ಬಿ. ಟಿ ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೮೦ ರೂ. ಗಳನು ಕೊಡುವಂಥ **ಗೋಲ್ಡನ್** (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ ಏಶಿಯನ ಕಂಪನಿಯೊಂದೇ ಆಗಿರುತ್ತದೆ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸಸ್ಥೆ.

ಜಿಂದಿಗೆಯು ಎಂಟು ಲಕ್ಷದಮೇಲುಂಟು. ಚೆಕ್ಕು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು

—(೦)—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದು ಪರೀ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅವಾರಸಿ ಅಕ್ಷರದಲ್ಲಿ ಹಾಕುವವಿದ್ದರೆ ಆರು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ವಿಜಯ

ತಾರೀಖು ೫-೧೦-೧೯೩೧ನೇ ಇಸ್ವಿ

ಸ್ವದೇಶೀ ವರ್ತಮಾನಪತ್ರಗಳ ಕೊರಳಿಗೆ ಎರಡು ಗುದ್ದಿಗಳು

ಅಸೆಂಬ್ಲಿಯಲ್ಲಿ ವರ್ತಮಾನಪತ್ರಗಳಿಂದ ಮತ್ತು ಮುದ್ರಾಲಯಗಳಿಂದ ಜಾಮೀನು ತಕ್ಕೊಳ್ಳುವ ಕಾಯದೆಯು ಪಾಸಾಯಿತೆಂತಲೇ ಹೇಳಬೇಕು. ಈ ಕಾಯದೆಯು ಪಾಸಾಗಲಿಕ್ಕೆ ಸರಕಾರವು ಮೂಲಕಾರಣವೆಂಬದೇನೂ ಸರಿಯೇ? ಆದರ ಕೂಡ ನಾನ್- ಅಫಿಶಿಯಲ ಮೆಂಬರರ ಮೂರ್ಖತನವೂ, ಕರ್ತವ್ಯಶೂನ್ಯತೆಯೂ ಕಾರಣವಾಗಿರುತ್ತದೆ. ನಾನ್- ಅಫಿಶಿಯಲರಾಗಿ ಚುನಾಯಿಸಲ್ಪಟ್ಟ ಮೆಂಬರರು ಕೌನ್ಸಿಲ ಮತ್ತು ಅಸೆಂಬ್ಲಿಯ ಮೆಂಬರರೆನಿಸಿಕೊಳ್ಳುವದಕ್ಕೆ ಹುರಿಗೊಳ್ಳುವಂತೆ-ಅಲ್ಲಿ ಮೊದಲಿನಿಂದ ಕಡೆತನಕ ಇದ್ದು ಜಡೀ ಕೂತು, ಭಾಷಣ ಮಾಡಿ, ಮತಕೊಡಲಿಕ್ಕೆ ತತ್ಪರರಾಗುವದೇ ಇಲ್ಲ. ಇವರಲ್ಲಿ ಅನೇಕರು ದಿಮಾಕಿನಿಂದ ಅಲ್ಲಿಗೆ ಹೋಗುವರು. ಹಳ್ಳಿಯ ಜನರಲ್ಲಿ ಅಸೆಂಬ್ಲಿಗೆ ಹೋಗಿದ್ದಾರೆಂದು ಪೊಳ್ಳು ಜಂಭ ಕೊಚ್ಚಿಸಿಕೊಳ್ಳುವರು. ಏನಾದರೊಂದು ನೆವನ ಸಿಕ್ಕ ಕೂಡಲೆ ಊರ ದಾರೀ ಹಿಡಿಯುವರು. ಅಲ್ಲಿ ರಾಜ್ಯಕ್ರಾಂತಿಯಂಥ ಭಯಂಕರ ಪ್ರಸಂಗ ಬಂದರೂ, ಇವರು ಹೆಂಡರ ಮಕ್ಕಳ ಕೂಡ ಲೋಲಾಡಲಿಕ್ಕೆ ಹೊರಟು ಬರುವರು.

ವರ್ತಮಾನಪತ್ರಗಳಿಂದ ಮತ್ತು ಮುದ್ರಾಲಯಗಳಿಂದ ಜಾಮೀನು ತಕ್ಕೊಳ್ಳಬೇಕೆಂಬ ಕಾಯದೆಯು ಸರಕಾರ ದೃಷ್ಟಿಯಿಂದ ಘನವಾದ ಕೆಲಸವಾದಂತೆ ಸ್ವದೇಶ ದೃಷ್ಟಿಯಿಂದ ಅತ್ಯಂತ ಹಾನಿ ಮತ್ತು ಅಪಮಾನಕಾರಕವಾಗಿರುತ್ತದೆಂಬದನ್ನು ಮೆಂಬರರು ಬಲ್ಲರು. ಆದರೂ ಇವರು ಇಂಥ ಮಹತ್ವದ ಬಿಲ್ಲಿನ ವಾಚನ ನಡೆದಾಗ ಊರ ದಾರೀ ಹಿಡಿದರು. ಸರಕಾರದ ಮೆಂಬರರು ಮಾತ್ರ ಇಂದ್ರ ಹೋದರೂ, ಇಂದ್ರಾಯಣಿಯು ಇದ್ದೇ ಇರುವಳೆಂಬಂತೆ ತಮ್ಮ ಸ್ಥಳ ಕಾಯ್ದುಕೊಂಡು ಕೂತರು. ತಮ್ಮ ಜನರೇ ತಮ್ಮ ಕತ್ತಿಗೆಯನ್ನು ಹೇಗೆ ಕೊಯ್ಯುತ್ತಾರೆಂಬದಕ್ಕೆ ಸದ್ಯ ಇದಕ್ಕೂ ಹೆಚ್ಚಿನ ಪ್ರತ್ಯಕ್ಷ ಪ್ರಮಾಣವೇ ಬೇಕಾಗಿಲ್ಲ.

ಹೊಸದಾಗಿ ತೆಗೆಯುವ ಮುದ್ರಾಲಯಗಳಿಂದ ಜಾಮೀನು ಬೇಡಬಾರದು. ಜಾಮೀನದ ರಕಮು ಐನೂರರಿಂದ ಸಾವಿರದ ತನಕವಿರಬೇಕು. ಎರಡುಸಾವಿರ ಮೂರುಸಾವಿರ ಬೇಡುತ್ತ ಹೋದರೆ- ಅಷ್ಟು ಡಿಪಾಜಿಟ್ಟು ಇಡುವ ಯೋಗ್ಯತೆಯು ಹಿಂದೀ ಮುದ್ರಾಲಯಗಳಿಗಿರುವದಿಲ್ಲೆಂದು ಗೌರ ಮೊದಲಾದ ಕೆಲ ಮೆಂಬರರು ಸರಕಾರ ಪಕ್ಷಕ್ಕೆ ಮಾಡಿದ ಸೂಚನೆಯು ವ್ಯರ್ಥವಾಯಿತು. ಸರಕಾರ ಪಕ್ಷದವರು ಹಿಡಿದ ಹಟವನ್ನು ಬಿಡಲೇ ಇಲ್ಲ. ಇಷ್ಟೇ ಅಲ್ಲದ, ಮೆ. ಕ್ರೆರಾರ ಸಾಹೇಬರು ಇವರಿಗೆ ನೀವು ಮುತ್ಸದ್ದಿಗಳೇ ಅಲ್ಲ ಬರೇ ವಕೀಲರಂತೆ ವಾದಾಡುತ್ತೀರೆಂದು, ಅವರ ಅವಹೇಲನೆ ಮಾಡಿದರು. ಈ ಅಪಮಾನವನ್ನು ಅವರು ಹೊಟ್ಟೆಯಲ್ಲಿದ್ದ ಸಿಟ್ಟು ರಟ್ಟೆಯಲ್ಲಿಲ್ಲೆಂದು ಸಹನಮಾಡಿಕೊಂಡು ಸುಮ್ಮನೆ ಕೂತರು. ಕೊನೆಯಲ್ಲಿ ಪತ್ರಕಾರ ಮತ್ತು ಮುದ್ರಾಲಯಕಾರರ ಕೊರಳಿಗೆ ಒಂದರ ಬದಲಾಗಿ ಎರಡು ಗುದ್ದಿಗಳು ಕಟ್ಟಲ್ಪಟ್ಟು ದಬ್ಬಾಳಿಕೆಯು ಮೂರ್ತಿಮಂತವಾಗಿ ವ್ಯಕ್ತವಾಯಿತು.

ಮುಂಬಯಿಯಲ್ಲಿ ಸ್ತ್ರೀ ಪುರುಷರಿಗೆ ಮತಸ್ವಾತಂತ್ರ್ಯ

—(೦)—

ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಚುನಾವಣೆಯಾಗಬೇಕಾದರೆ- ಹತ್ತು ರೂಪಾಯಿ ಬಾಡಿಗೆ ಕೊಡುವಂಥವರಿಗೇ ಹೋಟಿನ ಅಧಿಕಾರವಿರುತ್ತದೆ. ಇದನ್ನು ಐದು ರೂಪಾಯಿ ಮಾಡಬೇಕೆಂದು ರಾಬ ಬೋಲೆಯವರು ಮುಂಬಯಿಯ ಕೌನ್ಸಿಲದಲ್ಲಿ ಠರಾವು ತಂದರು. ಐದು ರೂಪಾಯಿ ಕೂಡಬೇಡ ೨೧ ವರ್ಷದವರಾದರಾಯಿತು. ಹೆಂಗಸರು ಮತ್ತು ಗಂಡಸರಿಗೆ ಮತಕೊಡುವ ಅಧಿಕಾರ ಇರಬೇಕೆಂದು ಪುಣೆಯ ಶ್ರೀ. ಗೋಖಲೆಯವರು ಉಪಸೂಚನೆ ಮಾಡಿದರು ಹೋಟು ತಕ್ಕೊಳ್ಳುವಾಗ ಈ ಸೂಚನೆಯೇ ಬಹುಮತದಿಂದ ಪಾಸಾಯಿತು ಇದು ಮೊದಲನೆಯ ವಾಚನ. ಇನ್ನೆರಡು ವಾಚನಗಳಿಗಿ ಅಲ್ಲಿ ಈ ಉಪಸೂಚನೆಯದೇ ಬಹುಮತವಾದರೆ- ಕಾಯದೆಯಾಗುವದು ಈ ತರದ ಸರ್ವ ವ್ಯಾಪಕತ್ವಕ್ಕೆ ಸರಕಾರದ ಸಮ್ಮತಿಯಿಲ್ಲ ಅವರು ಮುಂದಿನ ಎರಡು ವಾಚನಗಳಲ್ಲಿ ಇದನ್ನು ಕೆಡಹುವರು. ರಾ. ಬ. ಬೋಲೆಯವರು ಹಿಂದಕ್ಕೆ ಇದೇ ವಿಚಾರವಾಗಿ ಎರಡು ಸಾರೆ ಬಿಲ್ಲು ತಂದಿದ್ದರು ಆಗ ಮೊದಲನೆಯ ವಾಚನಕ್ಕೇ ನಾಪಾಸಾದವು. ಲೋಕಪಕ್ಷದ ಮೆಂಬರರ ಎರಡೇ ಹೆಚ್ಚು ಹೋಟುಗಳಿಂದ ಬಿಲ್ಲು ಪಾಸಾಗಿವೆ. ಬಿಲ್ಲು ಹೀಗೆ ಕೆಸರೊಳಗಿನ ಕಂಬದಂತುಂಟು. ಸೋಲ ಗೆಲವು ಯಾರ ಭಾಗಕ್ಕೆ ಬರುತ್ತದೆಂಬದನ್ನು ಹೇಗೆ ಹೇಳುವದು?

ಮತಸ್ವಾತಂತ್ರ್ಯದ ಬಗ್ಗೆ ಸ್ಪೇನದ ಪಾರ್ಲಮೆಂಟಿನಲ್ಲಿ ಪಾಸಾದ ಠರಾವು

—(೦)—

ಸ್ಪೇನದ ಪಾರ್ಲಮೆಂಟ ಸಭೆಯಲ್ಲಿ ಸ್ತ್ರೀಯರಿಗೆ ಸಾರ್ವತ್ರಿಕ ಮತಾಧಿಕಾರವಿದ್ದಿಲ್ಲ. ಈ ಅಧಿಕಾರ ದೊರೆಯಬೇಕೆಂದು ಕ್ಯಾಂಪೋಮಾರಳೆಂಬುವಳು ಠರಾವು ತಂದಳು. ಇದನ್ನು ಇನ್ನೊಬ್ಬ ಸ್ತ್ರೀ ಮೆಂಬರಳಾದ ವ್ಹಿಕ್ಟೋರಿಯಾ ಕೆಂಟಳೆಂಬುವಳು ಬಲವಾಗಿ ವಿರೋಧಿಸಿದಳು. ಸ್ತ್ರೀಯರ ರಾಜಕೀಯ ಶಿಕ್ಷಣಕ್ಕೆ ಇನ್ನೂ ಪ್ರಾರಂಭ ಕೂಡ ಆಗಿಲ್ಲ ಆದ್ದರಿಂದ ಅವರಿಗೆ ಮತದಾನದ ಹಕ್ಕು ದೊರೆಯಬಾರದೆಂದಳು ಇವಳಿಗೆ, ಕ್ಯಾಂಪೋಮಾರಳು ಖಂಡಿತವಾದ ಉತ್ತರ ಕೊಟ್ಟಳು, ಸ್ತ್ರೀಯರನ್ನು ಸಾಮಾನ್ಯರೆಂದು ತಿಳಿದಿರೊ? ಅವರು ಪುರುಷರಿಗೆ ನೆರವಾದರೆಂತಲೇ ಅರಸೊತ್ತಿಗೆಯು ಅಳಿದು, ಪ್ರಜಾಸತ್ತಾತ್ಮಕ ಸರಕಾರದ ಸ್ಥಾಪನವಾಯಿತೆಂಬದನ್ನು ಮರೆತರೊ? ಎಂದುತ್ತರಕೊಡಲು- ಇವಳ ಕಡೆಗೇ ಬಹುಮತವಾಗಿ, ಸ್ತ್ರೀಯರಿಗೂ ಹೋಟಿನ ಅಧಿಕಾರವಿರಬೇಕೆಂಬ ಠರಾವು ಪಾಸಾಯಿತು.

ಮುಂಬಯಿಯ ಕೌನ್ಸಿಲಲ್ಲಿಯೂ ಸ್ತ್ರೀಯರ ಪ್ರಶಂಸೆ

—(೦)—

ಪ್ರಬುದ್ಧರಾದ ಎಲ್ಲ ಸ್ತ್ರೀಪುರುಷರಿಗೆ ಮುಂಬಯಿ ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ ಸ್ವಾತಂತ್ರ್ಯವಿರಬೇಕೆಂಬದಾಗಿ ಕೌನ್ಸಿಲದಲ್ಲಿ ವಾದಿಸಿದ ಶ್ರೀ ಗೋಖಲೆಯವರು ಈ ವಿಷಯವಾಗಿ ಮಾತಾಡುವಾಗ

“ಜನರು ಇನ್ನೂ ಅಷ್ಟು ಸುಶಿಕ್ಷಿತರಾಗಿಲ್ಲೆಂದು ಯಾರಾದರೂ ಆಕ್ಷೇಪಣೆ ಎದ್ದರೆ- ಮುಂಬಯಿಯವರು ಕಾಯದೆಭಂಗದ ಈ ವೇಳೆಯಲ್ಲಿ ಎಷ್ಟು ಕಷ್ಟಬಂದರೂ ಕರ್ತವ್ಯದಕ್ಷರಾಗಿ ಸತ್ಯಾಗ್ರಹ ಮಾಡಿದ್ದನ್ನು ಸ್ಮರಣೆಗೆ ತನ್ನಿರಿ. ಇವರು ತಮ್ಮ ಯೋಗ್ಯತೆಯನ್ನು ಹಿಂದುಸ್ಥಾನದಲ್ಲಿ ಮಾತ್ರವಲ್ಲ, ಜಗತ್ತಿಗೇ ತೋರಿಸಿಕೊಟ್ಟಿದ್ದಾರೆ. ಈಸಂತರ ಅವರಿಗೆ ಮತದಾನ ಕೊಡಬಾರದೆಂಬದು ಅವರ ವಿಷಯವಾಗಿ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ ”

ಎಂಬದಾಗಿ ಪ್ರಶಂಸೆ ಮಾಡಿದರೆಂತಲೇ- ಸ್ತ್ರೀಯರಿಗೂ ಪುರುಷರಿಗೂ ಮತಾಧಿಕಾರ ದೊರೆಯುವಂತೆ ಬಹುಮತವಾಯಿತು. ಕಾಂಗ್ರೆಸಿನಲ್ಲಿ [illegible] ಸಹ ಇಂಥ ಸಾರ್ವತ್ರಿಕ ಮತಪದ್ಧತಿಯನ್ನೇ ಕೊಡಬೇಕೆಂದಿದ್ದಾರೆ.

ಲಾರ್ಡ ಸಾಂಕೀಯವರು ಮಿಶ್ರ ಪ್ರಧಾನ ಮಂಡಲದಲ್ಲೇಕೆ ಸೇರಿದರು?

—(೦)—

ಲಾರ್ಡಸಾಹೇಬರು ಈ ವಿಷಯವಾಗಿ ಖುಲಾಸೆ ಮಾಡಿದ್ದೇನೆಂದರೆ- ರಾಷ್ಟ್ರೀಯ ಪಕ್ಷಕ್ಕಿಂತ ಕೂಲಿಕಾರ ಸಂಘದ ವಿಷಯವಾಗಿಯೇ ನನ್ನ ಸಹಾನುಭೂತಿಯುಂಟು. ಹಿಂದುಸ್ಥಾನದ ಪ್ರಶ್ನವು ಸಮಾಧಾನದಿಂದ ಬಿಡಬೇಕೆಂತಲೇ ನಾನು ರಾಷ್ಟ್ರೀಯ ಪ್ರಧಾನ ಮಂಡಲದಲ್ಲಿ ಸೇರಿಕೊಂಡದ್ದು. ಹಿಂದುಸ್ಥಾನದ ವಿಷಯವು ಕನ್ಸರ್ವೇಟಿವ್ಹರ ಕೈಯ್ಯಲ್ಲಿ ಸೇರಿ, ಅದರ ಏನು ಹಣ್ಣೆಂದಾಗುವದು ನನಗೆ ಸಮ್ಮತವಿಲ್ಲ. ಹಿಂದಿ ಸ್ಥಾನ ಸಂಬಂಧವಾಗಿದ್ದ ನನ್ನ ಧೋರಣದಲ್ಲಿ ಮಿಶ್ರ ಸರಕಾರವು ಕಲಕು ಮಾಡಿ, ಏನಾದರೂ ಕಿತಾಪತಿ ಎಬ್ಬಿಸಿ ನನ್ನ ದಾರಿಯಲ್ಲಿ ಅಡ್ಡ ಬಂದರೆ- ನಾನು ನಿಂತ ಕಾಲಿನ ಮೇಲೆ ರಾಜೀನಾಮೆ ಕೊಡುವೆನು. ಮಂತ್ರಿಗಳ ಬಲವು ಕಾನ್ಸರ್ವೇಟಿವ್ಹರ ಕಡೆಗೆ ಹೋದದ್ದು ಕಂಡರಾಯಿತು, ನಾನು ಈ ಸರಕಾರದ ಕೂಡ ಸಹಕಾರ ಮಾಡುವದನ್ನು ಬಿಟ್ಟುಬಿಡುವೆನು.

ಪಾದ್ರೀಭಟ್ಟರಿಗೆ ದಶಾಂಶ ಕೊಡುವದಕ್ಕಾಗಿ ಜಪ್ತಿ ಮತ್ತು ಲಿಲಾವು

....(೦)....

ಇಂಗ್ಲಂಡದಲ್ಲಿ ರೈತರು ಪಾದ್ರಿ ದೇವಾಲಯ ಮತ್ತು ಪಾದ್ರಿಭಟ್ಟರ ದೆಸೆಯಿಂದ ಆದಾಯದಲ್ಲಿ ದಶಾಂಶ ಕೊಡಬೇಕೆಂಬ ಕಾಯದೆಯುಂಟು. ಈ ದಶಾಂಶವು ರೈತರಿಗೆ ಭಾರವಾಗಿ ಅವರು ಕೊಡತದಾಗಲು- ಸರಕಾರದವರು ರೈತರ ದನಗಳನ್ನು ಜಪ್ತಮಾಡಿ, ಲಿಲಾವಿಗೆ ತಂದರು. ಲಿಲಾವಿನಲ್ಲಿ ಮೋಜೀ ಮೋಜಾಯಿತು. ಲಿಲಾವಿಗೆ ಬಂದವರಲ್ಲಿ ಒಬ್ಬನ ಹತ್ತರ ಎಂಟೇ ಪೆನ್ಸಗಳಿದ್ದವು. ಆನು ಐನೂರು ಪೌಂಡಿಗೆ ಒಂದು ಎತ್ತಿನ ಜೋಡಿಯನ್ನು ಸವಾಲು ಮಾಡಿದನು. ಇನ್ನೊಂದು ಜೋಡಿಯ ಸವಾಲು ಒಂದು ಶಿಲಿಂಗದಿಂದ ಪ್ರಾರಂಭವಾಗಿ ಐನೂರು ಪೌಂಡಿನ ತನಕ ಹೋಯಿತು. ಕಡೆಯ ಸವಾಲಿನವನಲ್ಲೇನಿತ್ತು? ಕಾಸು ಕೂಡ ಇದ್ದಿಲ್ಲ. ಇದೇ ಪ್ರಕಾರ ಬೇರರವೇಲೊಂದು ಲಿಲಾವಿನ ಘಾಸಾರಗಲು ಸರಕಾರದವರು ಸವಾಲನ್ನು ನಿಶ್ಚಿಸಿದರು. ಕೂಡಲೆ ರೈತರು ಜಪ್ತಾದ ದನಗಳನ್ನು ಬಿಡಿಸಿ, ಹೊಡೆದು ಅಲ್ಲಿಂದ ಓಡಿಸಿಬಿಟ್ಟರು. ಲಿಲಾವಗಾರನ ಉಪನೇತ್ರ ಒಡೆದರು. ಟೊಪ್ಪಿಗೆ ಹಾರಿಸಿದರು. ವೈತಾಂಟ ರಾಡಿ ಚಳ್ಳಿ ಪೂಜೆಮಾಡಿದರು. ಕಂಟಗ್ರಾಮದ ಚೀಫಕಾನ್ಸಟೇಬಲನು ಇದೇ ಉದುಗರ ಹೊಂದಿ, ಮನೆಯ ದಾರೀ ಹಿಡಿದನು. ಹಿಂದುಸ್ಥಾನದ ಅಹಿಂಸೆಯ ಸತ್ಯಾಗ್ರಹಕ್ಕೆ ಹೆದರುವ ಸರಕಾರಾಯಸ್ಥರು ತನ್ನ ಎದೆಯಲ್ಲೇನು ಬಿದ್ದಿದೆಂಬದನ್ನು ನೋಡುವರೇ?

ಪಾರ್ಲಮೆಂಟದ ಚುನಾವಣೆಯು ಖಚಿತವಾಯಿತು.

....(೦)....

ಬುಧವಾರ ದಿವಸ ಪಾರ್ಲಮೆಂಟ ಸಭೆಯು ವಿಸರ್ಜನೆ ಹೊಂದಿ, ತಿಲನೆಯ ದಿವಸ ಚುನಾವಣೆಯಾಗುವದೆಂತು ಖಚಿತವಾಗಿ ಗೊತ್ತಾಗಿದೆ. ಪಾರ್ಲಮೆಂಟ ಸಭೆಯು ರಹಿತವಾದರೂ, ರಾವುಂಡಟೇಬಲಿನ ಕೆಲಸವನ್ನು ಅವಿಚ್ಛಿನ್ನವಾಗಿ ನಡಿಸುವಂತೆ ಲಾರ್ಡ ರೀಡಿಂಗ, ಲಾರ್ಡ ಸಾಂಕೆ ಮೊದಲಾದ ಲಾರ್ಡ ಮೆಂಬರರು ಒಪ್ಪಿಕೊಂಡಿದ್ದಾರೆ

ಧಾರವಾಡದಲ್ಲಿ ಎರಡು ಸಾವಿರದ ಮೇಲೆ ಖಾದೀ ಮಾರಿತು.

....(೦)....

ಶುಕ್ರವಾರ, ಶನಿವಾರ ಮತ್ತು ನಿನ್ನೆ ಆದಿತ್ಯವಾರ ಮಧ್ಯಾಹ್ನದ ತನಕ ಧಾರವಾಡದಲ್ಲಿ ಮಹಾತ್ಮರ ವರ್ಧಂತಿಯ ಸಂತೋಷದ ದೆಸೆಯಿಂದ, ಈ ಮೊದಲೇ ಗೊತ್ತಾದ ಪ್ರೇರಿಗೆ, ಖಾದಿಯ ಮಾರಾಟಕ್ಕೆ ಪ್ರಾರಂಭವಾಯಿತು. ಮೊದಲನೆಯ ದಿವಸ ಕಾಂಗ್ರೆಸದ ಖಾದೀ ಅಂಗಡಿಯಲ್ಲಿ ಆರುನೂರು ರೂಪಾಯಿಯ ಮಾರಾಟವಾಯಿತು. ಶ್ರೀ ಏಣಜಿಗಿ ಶಂಕರಪ್ಪ, ಧಾರವಾಡ ವ್ಯಾಪಾರೋತ್ತೇಜಕ ಕಂಪನಿಯವರ ಅಂಗಡಿಯಲ್ಲಿಯೂ ವ್ಯಾಪಾರ ನಡೆಯಿತು. ಮತ್ತು ಊರೊಳಗೆ ಹಾಡ್ಗರ ಮಾಡಿಕೊಂಡು ಮಾರಾಟಕ್ಕೆ ಹೋದವರಷ್ಟು ವ್ಯಾಪಾರವಾದದ್ದು ಬೇರೆ. ಅಂತೂ ಮೂರು ದಿವಸಗಳಲ್ಲಿ ಎರಡು ಸಾವಿರದ ಮೇಲೆ ಮಾರಾಟವಾಗಿದೆ. ಆದರೆ ಮೂರು ಸಾವಿರಕ್ಕೆ ಸರಿಯುಮಾಡಿಲ್ಲ. ಇನ್ನುಳಿದ ಆರು ದಿವಸಗಳಲ್ಲಿ ನಾಲ್ಕು ಸಾವಿರದ ವ್ಯಾಪಾರವಾಗಬಹುದೆಂದು ಅಂದಾಜುಮಾಡಲ್ಪಟ್ಟಿದೆ.

ಸರದಾರ ಪಟೇಲರು ಸಾವಿರ- ಸಾವಿರದ ಮಾಲು ಕೊಳ್ಳುವಂಥ ೧೫೦೦ ಜನರನ್ನು ಬೇಡಿದ್ದಾರೆ ಹಿಂದುಸ್ಥಾನದಲ್ಲಿ ಧಾರವಾಡದಷ್ಟು ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ೧೫೦೦ ಊರುಗಳು ಸಹಜವಾಗಿವೆ ಈ ಲೆಕ್ಕದಿಂದ ಧಾರವಾಡವು ತನ್ನ ಕರ್ತವ್ಯದ ನಾಲ್ಕಾಡಿ ಕೆಲಸಮಾಡಿದಂತಾಗುತ್ತದೆ ಕರ್ನಾಟಕದಲ್ಲಿ ಒಂದು ಲಕ್ಷದ ಅರವೆಯು ವಿಕ್ರಯವಾಗಬೇಕೆಂದು ಪ್ರಾಂತಿಕ ಕಾಂಗ್ರೆಸ ಕಮಿಟಿಯವರ ಇಚ್ಛೆಯಿದ್ದು, ಧಾರವಾಡ ಮಾಸದಿಂದ ಆ ಆಶೆ. ದು ನಂಬಿಗೆಯಿಂದ ಹೇಳಬಹು.

ವಿವಿಧ ವರ್ತಮಾನಗಳು

....(೦)....

ಮುಂಬಯಿಯಿಂದ ಹಡಗದಿಂದ ಬಂಗಾರವು ರಟುಹೋಗಹತ್ತಿರುವದನ್ನು ಹೇಗೆ ತಡೆಯಬೇಕೆಂದು ಸರ ವಿಕ್ಟರ ಸಸೂನ, ಮಿ ವಾಲಚಂದ ಹೀರಾಚಂದ, ಸರ ಕಾವಸಜಿ ಜಹಾಂಗೀರ, ಮಿ. ಲಾಲ ಮೇಥಾ, ಸರ ಚುನಿಲಾಲ ಮೊದಲಾದ ಸರದಾರ ಪಟೇಲರ ಕೂಡ ವಿಚಾರ ಮಾಡಲಿದ್ದಾರೆ.

ಆಸಾಮದ ಕೌನ್ಸಿಲದಲ್ಲಿ ಮಂತ್ರಿಯ ಸಂಬಳವನ್ನು ಎರಡು ಸಾವಿರ ಮಾಡಬೇಕೆಂಬ ಠರಾವು ಬಂತು. ಹತ್ತೇ ಜನರು ಇದಕ್ಕೆ ಅನುಕೂಲ ಮತ ಕೊಟ್ಟರು. ೩೦ ಜನರು ಮೊದಲಿನಂತೆ ಮೂರು ಸಾವಿರವಿರಬೇಕೆಂದು ಓಟು ಕೊಟ್ಟರು.

ಡೇರಾಇಸ್ಮಾಯಿಲ್‌ಖಾನದಲ್ಲಾದ ಮುಸಲಮಾನರ ಪುಂಡಾಟಿಕೆಯಲ್ಲಿ ಹಿಂದೂ ಜನರ ಮುನ್ನೂರು ಅಂಗಡಿಗಳು ಸುಟ್ಟವು. ೩೦ ಲಕ್ಷದ ಹಾನಿಯಾಯಿತು. ಹಾಗೆ ಗುರಿಯಾದವರು ಸುಮಾರು ದರಿದ್ರರಾಗಿದ್ದಾರೆ. ಕೋಹಟದ ದಂಗೆಯಲ್ಲಿ ಸರಕಾರದವರು ಅಲ್ಲಿಯ ಹಿಂದೂ ಜನರಿಗೆ ತುಸು ಬಡ್ಡಿಯಿಂದ ಸಾಲಕೊಟ್ಟು, ಅವರಲ್ಲಿ ಜೀವ ತುಂಬಿದರು. ಇಲ್ಲಿ ಆ ತೆರವಾಗಿ ನೆರವಾಗಲಿಕೆ ಸಿದ್ಧರಿಲ್ಲ.

ಮಹಾತ್ಮರ ಪತ್ನಿಯವರು ಗಾಂಧೀ ಹದಲ್ಲಿ ಬಜಾರಿಗೆ ಹೋಗಲು ಬಾಸಿರಯವ ತ್ಯಸ್ವಾರರ ಖಾದಿಯನ್ನು ಕೊಂಡ

ಇಂಗ್ಲಂಡದಲ್ಲಿ ಕೂಲಿಕಾರರ ಹೆಚ್ಚಾಗುತ್ತ ನಡೆದಿದೆ. ಈ ದಂಗೆಯ ನಿಮಿತ್ತವಾಗಿ ವ್ಯಾಕಗಲ್ಲರ ಮೆಂಬರರನ್ನು ದಸ್ತಗೀರ ಮಾಡಿದ ಳನ್ನು ಮುರಿಯಲು ಪೊಲೀಸರು ರಿ ಪ್ರಯೋಗ ಮಾಡಿದರು. ಅಲ್ಲಿಯೂ ಜಯವಾಯಿತು.

ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಹಿಂದಿ ಜನರೇ ಗಂಗಾಪ್ರವಾಹದಂತೆ ರಕ್ತಹರಿಸುವರು. ದರೆ ಇಂಗ್ಲಿಷರ ಒಂದು ಹನಿಗೆ ಕೈ ಹಚ್ಚಬಾರದೆಂದು ಮಹಾತ್ಮರು ತಮ್ಮ ಹುಟ್ಟಿದ ದಿವಸದ ಸಭೆಯಲ್ಲಿ ಭಾಷಣ ಮಾಡಿದ್ದಾರೆ.

THE ANKALIGI BANK
LTD.
Head Office
Kamankatta Dharwar
Branches
Ranebennur & Hirekerur
5%
Interest allowed on
NN SAVINGS BANK
DEPOSIT
Dharwar 3—1—1927 } K. B. ANKALIGI
Managing Director

ಶೀರೆ! ಪತ್ತಲ!! ರವಿಗಿ!!!

ಶ್ರೀ ದತ್ತವೀವ್ಹಿಂಗ ಮಿಲ್
ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ
ಶೀರೆಯ ಮಿಲ್ಲು.

ಇದೇಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ ಮತ್ತು ಯೋಗ್ಯದರದಿಂದ ಸಿಗುತ್ತವೆ. [illegible] ಮಾಡಿ, ನಿಮಗೆ ಬೇಕಾದ ಮಾಲು ಕೊಂಡು, ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ. ಬಣ್ಣ ಹೋದರೆ - ಮಾಲು ತಿರುಗಿ ತಕ್ಕೊಳ್ಳುವೆವು.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ. ಮುಂದೆ ಪ್ರತಿಯೊಂದು ಪಳಿಗೆ ಒಂದೂವರೀ ೬ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಂತೆ ಲವಾಜಿಮೆ ಕನ್ನಡದಲ್ಲಿ ಹಾಕುವದಿದ್ದರೆ ಎರಡು ಆಣೆ ಡಬಲ ಕಾಲಮಿನ ಪಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

“ ಈ ಕೆಳಗೆ ಬರೆದ ೫೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ. ”

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸರ್ಗಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,
೬	ದುರ್ಗಸಿಂಹನ ಪಂಚತಂತ್ರ ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,,
೧೨	ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇಮಮಂದಿರ	೮	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹವ್ಯವಸ್ಥೆ	೮	,
೧೭	ಪೋತೀಹೇನೀ ನಿಂದಕರ ಸಡಾವಳಿ	೮	,,
೪೦	ಕನ್ನಡ ಮಾತು ತಲೆ ಯೆತ್ತುವ ಬಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರ ಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಲಿದಾಸ	೬	,
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೭	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೬	,,
೨೪	ಬೇಗಮ್ ಸಮರು	೬	,
೨೫	ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	,,
೩೨	ಶೇರಷಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	ಮೊಹರಮ್	೩	,,
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	,,
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	,,
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ಸರಗಂಪ ಬಂದಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ.
ಒಂದೇ ರೂಪಾಯಿ.

೨. ನಿಜವಾದ ವೀರ ಅದವಾ ಜಗಮಲ್ಲ [ಶ್ರೀ. ಗು ಹ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ.
ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ
೧—೪—೦

೪. ಶ್ರೀಹರ್ಷನ ಆರಸ ನಾಟಕಗಳೂ [ನಾ. ವೆ ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು.
೦—೧—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

[illegible] :- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨ ಧಾರವಾಡ ಸೋಮವಾರ ತಾರೀಖು ೬ ನೇ ಜುಲೈ ೧೯೩೧ (ಸಂಚಿಕೆ ೧೫೩

The Asian Life Assurnance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೧; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತದ ಉತ್ಪನ್ನ ರೂ. ೬೦೦,೦೦೦

ವಿಮೆಯ ಹಣ ತುಂಬಿ ಕೊಟ್ಟದ್ದು ೧೦,೧೦,೦೦೦

ಜಿಂದಿಗಿ ೩೫,೦೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ್ ರಾಯಬಾಗಕರ ಮತ್ತು ಕುಲಕರ್ಣಿ, ಧಾರವಾಡದ ಏಜಂಟರು

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು–

ಹಾವೇರಿಯ ಚೀಫ ಏಜಂಟರು. ಶ್ರೀ. ಎನ್ ಎಮ್. ದೊಡ್ಡವಾಡ ಮತ್ತು ಶ್ರೀ. ಬಿ. ಟಿ ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ [illegible] ರೂ. ಗಳನು ಕೊಡುವಂಥ **ಗೋಲ್ಡನ್** (ಸುವರ್ಣ) **ಪಾಲಿಸಿಯನ್ನು** ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಅಷ್ಟಷ್ಟೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೊಂದರೆ

ದಿ ಧಾರವಾಡ ಅರ್ಬನ ಕೋ|| ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ|| ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠಪದದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಶಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. [illegible],
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨/೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿ ಕೊಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೬-೭-೧೯೩೧ನೇ ಇಸ್ವಿ

ಧಾರವಾಡದ ಜವಳೀ ಕಮಿಟಿಯವರ ಹುಚ್ಚು ತೀರ್ಪು

* * *

ಊರಿಗೆ ಮನುಷ್ಯವಲ್ಲ; ಮಸೀದಿಗೆ ಹೆಣವಲ್ಲ

* * *

ಈಯೂರಲ್ಲಿ ನಡೆದ ಪಿಕೆಟಿಂಗದಲ್ಲಿ ತಮಗಾವದರೂ ದಾರೀ ತೋರಿಸಿ, ತಮ್ಮಲ್ಲಿದ್ದ ಪರದೇಶೀ ಮತ್ತು ಬಹಿಷ್ಕೃತ ಗಿರಣಿಗಳ ಅರಿವೆಯ ವ್ಯವಹಾರವಾಗಿ, ಅದರಲ್ಲಿ ತೊಡಗಿದ ದುಡ್ಡು ಯಾವದೊಂದು ಮಾರ್ಗದಿಂದ ತಮಗೆ ತಿರುಗಬೇಕೆಂದು ಜವಳಿಯವರು ಒಂದು ಸಭೆ ಮಾಡಿದರು. ಅದು ಅರ್ಧ ಸಾರ್ವಜನಿಕ ಮತ್ತು ಅರ್ಧ ಖಾಸಗಿಯಾಗಿತ್ತು. ಆಮಂತ್ರಣ ಪತ್ರಿಕೆಗಳನ್ನು ಮುದ್ರಿಸಿ, ಇನ್ನೂರು ಜನರಿಗೆ ಕಳಿಸಿದರು. ತಾವು ಎಲ್ಲಾ ವ್ಯಾಪಾರಸ್ಥರು ಬಂದಿದ್ದರು. ಹಾಗೂ ತಮ್ಮ ಬಳಗದವರನ್ನು ಕರೆತಂದಿದ್ದರು. ಆದರೆ ಸಾರ್ವಜನಿಕ ಸಭೆಯಂತೆ ಅದ ಜಾಪ ಘನ ಕುಸೂರಾ ಎಂದು ಮುಕ್ತದ್ವಾರವಿದ್ದಿಲ್ಲ. ಯಾವದೊಂದು ಮಾತಿನ ನಿರ್ಣಯದ ಬಗ್ಗೆ ಸಂದೇಹಪಡುವಂಥ ಶ್ರೀ. ಜೋಗ ವಿಶ್ವನಾಥರಾಯರು ಸಭಾಪತಿಯಾಗಿದ್ದರೂ ಸಭೆಯವರು ಇವರನ್ನು ಆರಿಸಲಿಲ್ಲ. ವ್ಯಾಪಾರಸ್ಥರು ಇವರೇ ಅಧ್ಯಕ್ಷರೆಂದು ಮುಂದಾಗಿ ಜಾಹೀರ ಮಾಡಿದ್ದರು. ಕೊನೆಗೆ ಸಭೆಯಲ್ಲಾದ ತೀರ್ಮಾನಗಳು ಅಡ್ಡ ನೋಡಿಯ ಮೇಲೆ ದೀಪವಿಟ್ಟಂಥ ಸ್ಥಿತಿಯಲ್ಲಿ ಸಂದೇಹದವೇ ಆಗಿವೆ. ರಾಯರ ಅಧ್ಯಕ್ಷತೆಯಲ್ಲಿ ಕೂತ ೧೧ ಜನ ಕಮಿಟಿಯವರು ಹೇಳಿದ ನಿರ್ಣಯವು ಪೂರಾ ಹಾಸ್ಯಾಸ್ಪದವಾಗಿರುತ್ತದೆ. ಈ ಹಾಸ್ಯಕ್ಕೆ ಶ್ರೀ. ಜೋಶಿ ವಿನಾಯಕರಾಯರು ಗುರಿಯಾಗಲಿಲ್ಲೆಂಬುದು ಸಂತೋಷ. ಇವರು ಈ ಠರಾವಿಗೆ ತಮ್ಮ ಸಮ್ಮತಿಯಿಲ್ಲೆಂದು ಪತ್ರಬರೆದು ಬಿಟ್ಟಿದ್ದಾರೆ. ಕಮಿಟಿಯವರು ಹೇಳಿದ ಸಂಗತಿಗಳಲ್ಲಿ ಮುಖ್ಯವಾದಂಥವು ಕೆಳಗೆ ಕೊಟ್ಟಂತಿರುತ್ತದೆ.

ಪರದೇಶಿ ಅರಿವೆ ಮತ್ತು
ವೆ ಮಾರಬಾರದೆಂಬ ತತ್ವವು ಸ್ಪ
ಆದರೆ ಧಾರವಾಡದ ಪರಿಸ್ಥಿತಿಯ ಮೂಲಕ

೧ ಉಣ್ಣೆಯ ಅರಿವೆಗಳನ್ನು ಇದಿಸ್ಟೈದು:
೨ ಬಹಿಷ್ಕೃತ ಗಿರಣಿಗಳ ಅರಿವೆಯನು ತಿಂಗಳು
೩ ಪರದೇಶಿ ಅರಿವೆಯನ್ನು ಮೂರ ವಟ್ಟಿಗೆ

ಕಟ್ಟಿಡಬೇಕು. ಅನಂತರ ಇವನ್ನು ಅಡ್ಡಿಯಿಲ್ಲ. ವ್ಯಾಪಾರಸ್ಥರು ಇವನ್ನು ಬೇರೆಕಡೆಗೆ ಎಲ್ಲಾದರೂ ಮಾರಬೇಕು. ಅದರ ವ್ಯವಸ್ಥೆ ಮಾಡಬೇಕು. ಈ ಪ್ರಕಾರ ಠರಾವಿನ ಮಹತ್ವದ ಭಾಗವಿರುತ್ತದೆ. ಇದಕ್ಕೆ ಶ್ರೀ. ವಿನಾಯಕರಾಯರು ಬರೆದ ಪ್ರತಿಕೂಲ ಮತದ ಸಾರಾಂಶವು ಮುಂದೆ ಕೊಟ್ಟಂತಿರುತ್ತದೆ.

೧ ಕಮಿಟಿಯವರು ಕೊಟ್ಟ ಠರಾವು ರಾಷ್ಟ್ರೀಯ ಸಭೆಯ ಧ್ಯೇಯದ ವಿರುದ್ಧವಿರುವದಲ್ಲದೆ, ಧಾರವಾಡಕ್ಕೆ ಅನರ್ಥ-ಕಾರಕವಾದ ಹಾನಿಯನ್ನು ತರುವದಾಗಿರುತ್ತದೆ.

೨ ಕಮಿಟಿಯವರು ಪರದೇಶಿ ಮತ್ತು ಬಹಿಷ್ಕೃತ ಗಿರಣಿಗಳ ಸನಗಿಗೆ ಬಹಿಷ್ಕಾರ ಹಾಕಬೇಕೆಂದು ತತ್ವತಃ ಸ್ಪಷ್ಟ ಶಬ್ದಗಳಲ್ಲಿ ಅಂಗೀಕಾರ ಮಾಡಿದ ಬಳಿಕ, ಅದರ ವಿರುದ್ಧ ಇವರು ಬೇರೊಂದು ರೀತಿಯಿಂದ ನಿರ್ಣಯ ಹೇಳತಕ್ಕದ್ದಿರುವದಿಲ್ಲ.

೩ ಕುಸು ದಿವಸಗಳನಂತರ ಪರದೇಶೀ ಅರಿವೆಯನ್ನು ನಿಮ್ಮ ಮನಸಿಗೆ ಬಂದಂತೆ ವ್ಯವಸ್ಥೆ ಮಾಡಿಕೊಳ್ಳಿರೆಂದು ವ್ಯಾಪಾರಸ್ಥರಿಗೆ ಹೇಳುವದು ಕಮಿಟಿಯು ಅಂಗೀಕಾರ ಮಾಡಿದ ಬಹಿಷ್ಕಾರ ತತ್ವದ ವಿರುದ್ಧ ನಡೆದಂತಾಗುತ್ತದೆ.

೪ ಉಣ್ಣೆ ಮತ್ತು ರೇಶಿಮೆಯಂಥ ಬೇಗನೆ ಕೆಡುವಂಥ ಬಟ್ಟೆಗಳನ್ನು ಹೊರ-ರವಾನಿಸಿ, ಉಳಿದ ಎಲ್ಲಾ ಅರಿವೆಗಳನ್ನು ದೀರ್ಘಕಾಲ ಪರ್ಯಂತರ ಕಟ್ಟಿಡಲಿಕ್ಕೆ ಹೇಳಿ, ಅವುಗಳ ಮೇಲೆ ಮೊಹರು ಮಾಡಬೇಕಾಗಿತ್ತು. ಕನಿಷ್ಠ ಡಿಸೆಂಬರದ ಕೊನೆಯ ತನಕಾದರೂ ಕಟ್ಟಿಡಬೇಕಾಗಿತ್ತು.

೫ ಧಾರವಾಡದಲ್ಲಿ ಪರದೇಶೀ ಅರಿವೆಯು ಬಹಳ ಇರುವದಿಲ್ಲ. ಆರು ಸಾವಿರಕ್ಕಿಂತ ಹೆಚ್ಚು ಇರುವದಿಲ್ಲ. ಕೆಲ ಅಂಗಡಿಕಾರರಲ್ಲಿ ೫೦೦ ರಿಂದ ೧೫೦೦ ರ ತನಕ ಇರುವದು.

೬ ಕೆಲವರು ಸಾಲವಾಗಿ, ಅರಿವೆ ತಂದಿದ್ದಾರೆ. ಅಂಥ ಬಡವರಾದವರಿಂದ ಕಾಂಗ್ರೆಸ, ಮತ್ತು ಸ್ಥಾನಿಕ ವರ್ಗಣಿಯಿಂದ ಸಹಾಯ ಮಾಡಬಹುದಾಗಿದೆ. ಅಥವಾ ಶ್ರೀಮಂತ ಜವಳಿಯವರೂ ಸಹಾಯ ಮಾಡಬಹುದಾಗಿರುತ್ತದೆ.

ಅರಿವೆಯನ್ನು
ಕಾಂಗ್ರೆಸದ
ಂತೆ ಮಾಡು
ಗನೆ ಪರದೇಶಕ್ಕೆ
ಕು.
ಷ್ಟಕ್ಕೆ ಗುರಿಯಾಗುವಂ
ಗೆ ದ್ರವ್ಯಸಹಾಯ ಮಾಡದೆ,
ತ್ತು ಗುಪ್ತ ಮಾರ್ಗದಿಂದ ಧಾರ
ವಾಗಲಿ ಇನ್ನೆಲ್ಲಾದರೂ ಮಾರಾಟ ಮಾಡ
ಬೇಕೆಂದು (dishose of) ಹೇಳಿ ಕೊಡುವದು
ಹಿಷ್ಕಾರದ ತತ್ವದ ವಿರುದ್ಧವಾಗುತ್ತದೆ

— ಕಮಿಟಿಯವರು ನಿಃಶಂಕರಾದ ಒಂದೇ ಹೇಳಬೇಕಾಗಿತ್ತು.

ನೀವು ಕಾಂಗ್ರೆಸದ ಆಜ್ಞೆಯ ಪ್ರಕಾರ ನಡೆ...ರಿ.

ಇಲ್ಲವಾದರೆ

ನಮ್ಮಿಂದ ನಿಮಗಾವ ದಾರೀ ತೋರಿಸುವದಾಗುವದಿಲ್ಲೆಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು.

ಶ್ರೀ ವಿನಾಯಕರಾಯರು ಹೀಗೆ ಸ್ಪಷ್ಟವಾಗಿ ಕೊಟ್ಟ ಮತವು ಸರ್ವಮಾನ್ಯವಾಗುವಂತಿದೆ. ಕಮಿಟಿಯವರು ಕಾಂಗ್ರೆಸದ ಧ್ಯೇಯವನ್ನು ನಿಷ್ಕಪಟ ಬುದ್ಧಿಯಿಂದೊಪ್ಪಿದ ಬಳಿಕ, ಅದರಲ್ಲಿ ಕಳ್ಳದಾರಿಯನ್ನು ಹುಡುಕುವದು ಅಪದ್ಧವೇ ಸರಿ. ಆರೋಪಿಯು ನಿರ್ದೋಷಿ ಇದ್ದಾನೆಂದು ಜಡ್ಜರು ಹೇಳಿದ ತರುವಾಯ, ಅವನಿಗೆ ಶಿಕ್ಷೆ ಕೊಟ್ಟರೆ-ಮತೀಬಂದಂಥ ಶ್ರೀ ಜೋಗರಾಯರು ಸುಮ್ಮನಾಗುವರೇ? ಎಷ್ಟೋ ಜನರು ಮನೆಯಲ್ಲಿದ್ದ ಮತ್ತು ಮೈ ಮೇಲಿದ್ದ ನೂರಾರು ರೂಪಾಯಿ ಬೆಲೆ ಬಾಳುವ ಜರತಾರಿ ಬಟ್ಟೆಗಳನ್ನು ಬಹಿಷ್ಕಾರದ ಬೆಸೆಯಿಂದ ಸುಟ್ಟು ಹಾಕಿದ್ದಾರೆ. ಅವರೇನು ಹಾನಿ ಸೋಸಲಿಲ್ಲವೇ? ಅದೇ ಪ್ರಕಾರ ವ್ಯಾಪಾರಸ್ಥರೂ ಸೋಸಲಿಕ್ಕೇ ಬೇಕು. ಏನೆಂದರೆ-ಅವರು ತಿಳಿ- ತಿಳಿದೂ ಪುನಃ ಪುನಃ ಕಾಂಗ್ರೆಸದ ಆಜ್ಞೆಯನ್ನು ಧಿಕ್ಕರಿಸಿ ಈ ಅರಿವೆ ತರಿಸಿದ್ದಾರೆ. ಮಾಡಿದವನ್ನುಣ್ಣುವನು ಮಣೆಯಂಥ ಕಡು. ಅದಕ್ಕೆ ಕಾಂಗ್ರೆಸವೆಷ್ಟು ಜವಾಬದಾರವಾಗಲಾರದು.

ಈ ವರ್ತಕರು ಹಿಂದೆ ನಂಬಿಗೆಯಿಂದ ನಡೆಯಲಿಲ್ಲ. ಕಮಿಟಿಯ ನಿರ್ಣಯವಾಗುವ ತನಕವಾದರೂ ಪರದೇಶೀ ಅರಿವೆ ಮಾರಾಟವನು ಕರ್ತು ಇದ್ದರೂ, ಪ್ರಮುಖ ಜವಳಿಯವರು ಕಾಸ ಭ್ರಷ್ಟರಾಗಿ, ಮಾರಾಟ ಮಾಡಿದರು. ಶ್ರೀ ವಿನಾಯಕರಾಯರು ಈ ಸಂಗತಿಯನ್ನು ಕಮಿಟಿಗೆ ತಿಳಿಸಿತ್ತ

ರು. ನಮ್ಮ ಕೂಡಾದ ಕರಾರಿನ ವಿರುದ್ಧ ನಡೆದಿರೆಂದು ಆರೋಪಿಸಿಬಿಟ್ಟು, ಆಗಿಂದಾಗ ನಾವು ಈ ಮುಂದೆ ಕೆಲಸ ನಡಿಸುವದಿಲ್ಲೆಂದು ಇವರು ಹೇಳಬೇಕಾಗಿತ್ತು. ಅದನ್ನು ಬಿಟ್ಟು ತಪ್ಪು ಹೇಳುವದರೊಳಗಿಂದ ಪಾರಾಗುವದಕ್ಕೆ ಇದರಂಥ ಉತ್ಕೃಷ್ಟ ಮಾರ್ಗವೇ ಇದ್ದಿಲ್ಲ. ವ್ಯಾಪಾರಸ್ಥರನ್ನು ಪ್ರಸನ್ನೀಕರಿಸಿಕೊಳ್ಳುವದಕ್ಕೆ ಹೋಗಿ, ತಾವೇ ಬಲೆಯಲ್ಲಿ ಬಿದ್ದು, ಅಪಹಾಸ್ಯಕ್ಕೆ ಕಾರಣರಾದರು. ಜಗತ್ತಿನಲ್ಲಿ ಯಾರೂ ಈ ರೀತಿ ಸಮಾಧಾನವಾಗಿದೆಂದು ಹೇಳಲಾರರು. ಇದರಿಂದ ಇವರು ಧೈರ್ಯದ ಲೌಕಿಕವನ್ನೇ ಕಳಕೊಂಡರು. ಅತ್ಯಂತ ದುಃಖದ ಸಂಗತಿಯಾಯಿತು.

ಧಾರವಾಡ ಜಿಲ್ಲಾ ಕಾಂಗ್ರೆಸ ವರ್ಕಿಂಗ ಕಮಿಟಿಯು.

ಹಾವೇರಿ ಪೇಟೆ ತಾ|| ೨೮-೬ನೇ ದಿವಸ ಮೊದಲೇ ಪ್ರಕಟ ಪಡಿಸಿದ ಪ್ರಕಾರ ಧಾರವಾಡ ಜಿಲ್ಲಾ ಕಾಂಗ್ರೆಸ ವರ್ಕಿಂಗ ಕಮಿಟಿಯ ಅಧಿವೇಶನವು ಜಿಲ್ಲಾ ಅಧ್ಯಕ್ಷರಾದ ಶ್ರೀ ಸಿದ್ದಪ್ಪ ಹೊಸಮನಿ ವಕೀಲ ಇವರ ಅಧ್ಯಕ್ಷತೆಯಲ್ಲಿ ಅವರ ಮನೆಯ ಅಟ್ಟದ ಮೇಲೆ ಪ್ರಾರಂಭವಾಯಿತು. ಶ್ರೀ ದಿವಾಕರರೇ ಮೊದಲಾದ ಪ್ರಮುಖ ಜನರು ಸಭೆಗೆ ಬಂದಿದ್ದರು. ಹೊಸ ಮಂಡಳವು ಏರ್ಪಟ್ಟ ಬಳಿಕ ಇದು ಮೊದಲನೇ ಅಧಿವೇಶನವಾದ್ದರಿಂದ ಬಹುಶಃ ಎಲ್ಲಾ ಭಾಗದ ಜನರು ಇದರಲ್ಲಿ ಉತ್ಸಾಹದಿಂದ ಭಾಗ ತೆಗೆದುಕೊಂಡಿದ್ದರು. ಕಾಂಗ್ರೆಸ ಪ್ರಚಾರಕರನ್ನು ನೇಮಿಸುವ ಮುಖ್ಯ ಗೊತ್ತುವಳಿಯು ಹಣದ ಅಡಚಣೆಯಿಂದ ಹಿಂದಕ್ಕೆ ತೆಗೆಯಲ್ಪಟ್ಟಿತು. ಹಾವೇರಿ ಬ್ಯಾಡಗಿ ರಾಣೆಬೆನ್ನೂರ ಗ್ರಾಮಗಳಲ್ಲಿ ಪರದೇಶಿ ಮತ್ತು ಬಹಿಷ್ಕೃತ ಗಿರಣಿಗಳ ಅರಿವೆ ಮಾರಾಟ ನಿಲ್ಲಿಸಲು ಒಂದು ಮಂಡಳವು ಏರ್ಪಟ್ಟಿತು. ಈಗಿರುವ ೬೦೦ ರೂ ಹಣದಲ್ಲಿ ೪೦೦ ರೂಪಾಯಿಗಳನ್ನು ಬ್ಯಾಂಕಿನಲ್ಲಿ ಮುದ್ದತಿ ಠೇವಿನಿಂದ ಇಡಬೇಕೆಂದೂ ೨೦೦ ರೂಪಾಯಿಗಳನ್ನು ಚಾಲತಿ ಇಡಬೇಕೆಂದೂ ನಿರ್ಣಯವಾಯಿತು. ಸವಣೂರ ಸಂಸ್ಥಾನದಲ್ಲಿ ಗಾಂಧಿಟೊಪ್ಪಿಗೆ ಹಾಕಲಿಕ್ಕೆ ಅಧಿಕಾರಿಗಳಿಂದ ಅಡ್ಡಿಯುಂಟಾಗುತ್ತದೆಂದು ತಕರಾರುಗಳು ಬಂದದ್ದರಿಂದ ಈ ಬಗ್ಗೆ ಜಿಲ್ಲಾ ಅಧ್ಯಕ್ಷರು ನವಾಬಸಾಹೇಬರೊಡನೆ ಹಾಗು ರೆಸಿಡೆಂಟರೊಡನೆ ಪತ್ರವ್ಯವಹಾರ ಮಾಡಬೇಕೆಂದು ಗೊತ್ತಾಯಿತು. ಬಂಕಾಪುರ, ಸವಣೂರ, ಮತ್ತು ಹಾನಗಲ್ಲ, ತಾಲೂಕುಗಳಲ್ಲಿ, ಕಾಂಗ್ರೆಸ ಕಮಿಟಿಗಳನ್ನು ಸ್ಥಾಪಿಸಲಿಕ್ಕೆ ಬೇರೆ ಬೇರೆ ಜನರು ನೇಮಿಸಲ್ಪಟ್ಟಿರುವರು. ಜಿಲ್ಲೆಯೊಳಗಿನ ಅನ್ಯ ಕಾಂಗ್ರೆಸ ಕಮಿಟಿಗಳಿಂದ ಬರಬೇಕಾದ ಹಣವು ಇನ್ನೂ ಬಂದಿರುವದಿಲ್ಲೆಂದೂ ಯೋಗ್ಯ ಮಾಹಿತಿಗಳನ್ನು ಈ ಕಮಿಟಿಯವರು ಜಿಲ್ಲಾ ಸಂಘಕ್ಕೆ ಪೂರೈಸಿರುವದಿಲ್ಲೆಂದೂ ಕಾರ್ಯದರ್ಶಿಗಳು ತಕರಾರ ಮಾಡಿದ ಬಳಿಕ ಈ ಬಗ್ಗೆ ಆಯಾ ಕಮಿಟಿಯವರನ್ನು ಎಚ್ಚರಗೊಳಿಸಬೇಕೆಂದು ಗೊತ್ತಾಯಿತು ರಾ|| ಹರ್ಡೀಕರರ ರಾಜಿನಾಮೆಯು ಸ್ವೀಕರಿಸಲ್ಪಟ್ಟು ಇವರ ಸ್ಥಳದಲ್ಲಿ ಶ್ರೀ ಗುರುನಾಥ ವಾಳವೇಕರ ಇವರನ್ನು ವರ್ಕಿಂಗ ಕಮಿಟಿ ಸಭೆಯು ಸಭಾಸದರಾಗಿ ನೇಮಿಸಲಾಯಿತು. ಜಿಲ್ಲೆಯೊಳಗಿನ ಸ್ಥಳಿಕ ಕಾ. ಕ. ಸಭಾಸದರ ಸಹಾಯದಿಂದ ಕಮಿಟಿಯ ಅಧ್ಯಕ್ಷರು ಹಾಗು ಕಾರ್ಯದರ್ಶಿಗಳು ೫೦೦೦ ರೂ. ಹಣ ಕೂಡಿಸಬೇಕೆಂದು ಗೊತ್ತಾಯಿತು. ಇದಲ್ಲದೆ ಇನ್ನೂ ಕೆಲವು ಕಿರಕೋಳ ಠರಾವುಗಳು ಪಾಸಾಗಿರುವವು.

ಇಂಗ್ಲಿಷರು ನೂರು ವರ್ಷಗಳಲ್ಲಿ ಮಾಡದ್ದನ್ನು ಮಹಾತ್ಮರು ಹತ್ತು ವರ್ಷಗಳಲ್ಲಿ ಮಾಡಿದರು

....(೦)....

ಕ್ರಿಶ್ಚನ್ನ ಸೇವಾ ಸಂಘದ ಮುಖ್ಯ ಪಾದ್ರಿಯವರಾದ ಫಾದರ ಇವ್ಯಾನ್ಸರು ಹೇಳುವದೇನಂದರೆ-

ಮಹಾತ್ಮರು ಬ್ರಿಟಿಶ ಸಾಮ್ರಾಜ್ಯದ ವೈರಿಯಾಗಿರುವದಿಲ್ಲ ರಾಜಕಾರಣದಲ್ಲಿ ನಿವೃತ್ತಿ ಮಾರ್ಗಕ್ಕೇರಿಸಿ, ಮಹಾತ್ಮರು ನಿಜವಾದ ಅಮೂಲ್ಯ ಲೋಕಸೇವೆ ಮಾಡಿದ್ದಾರೆ ನಿಜವಾದ ಧರ್ಮವು ಗುಡಿಯಲ್ಲಿಲ್ಲದೆ, ಭೂತದಯೆಯಲ್ಲಿರುತ್ತದೆ ರಾಟಿಯಿಂದಲೇ ಹಿಂದುಸ್ಥಾನದ ನಿಜವಾದ ಹಿತವಾಗುವದು. ಕಳೆದ ನೂರಾರು ವರ್ಷಗಳಲ್ಲಿ ಇಂಗ್ಲಿಷರು ಹಿಂದುಸ್ಥಾನಕ್ಕೆ ಮಾಡಿದ ಹಿತಕ್ಕಿಂತ ಹೆಚ್ಚು ಹಿತವನ್ನು ಮಹಾತ್ಮರು ಹತ್ತು ವರ್ಷಗಳಲ್ಲಿ ಮಾಡಿದ್ದಾರೆ..

ಮುಂಬಯಿ ಇಲಾಖೆಯವರ ಪಗಾರದಲ್ಲಿ ಕತ್ರಿ

—(೦)—

ಮುಂಬಯಿ ಸರಕಾರದವರು ವೆಚ್ಚ ಉಳಿತಾಯವೆಂದು ತಮ್ಮ ಕಾಮದಾರರ ಸಂಬಳದಲ್ಲಿ ಕೆಳಗೆ ಹೇಳಿದಂತೆ ಕಡಿಮೆ ಮಾಡುವರು. -

೬೦ ರಿಂದ ನೂರರ ತನಕ ನೂರಕ್ಕೆ ೫ ರಂತೆ
೧೨೦ ರಿಂದ ೫೦೦ ತನಕ ೭|| ಪ್ರಕಾರ
೫೦೦ ರಿಂದ ೧೦೦೦ ಮೀರಿದವರಿಗೆ ಹತ್ತರಂತೆ

ಹೀಗೆ ಸಂಬಳ ಕಡಿಮೆ ಮಾಡುವದರಿಂದ ಸರಕಾರಕ್ಕೆ ೨೨ ಲಕ್ಷದ ಉಳಿತಾಯವಾಗುತ್ತದೆ

ಮುನಸಫರಿಗೆ ಮ್ಯಾಜಿಸ್ಟ್ರೇಟ ಅಧಿಕಾರ

—(೦)—

ಮುನಸಫರಿಗೆ ಅಸಿಸ್ಟಂಟ ಜಜ್ಜ, ಡಿಸ್ಟ್ರಿಕ್ಟ ಜಜ್ಜರ ಕೆಲಸ ಕೊಡಬೇಕಾಗುವದರಿಂದ, ಅವರಿಗೆ ಪ್ರಾರಂಭದಲ್ಲಿ ಫೌಜದಾರಿ ಕೆಲಸಗಳ ಅನುಭವ ಬರಬೇಕೆಂದು, ಮದ್ರಾಸ ಸರಕಾರದವರು ಇವರಿಗೆ ಇಂಥ ಅಧಿಕಾರ ಕೊಡುವ ಉಪಕ್ರಮ ಮಾಡತಕ್ಕವರಿದ್ದಾರೆ

ಔಂಧ ಸಂಸ್ಥಾನದ ಸ್ತುತ್ಯ ಪ್ರಯತ್ನ

—(೦)—

ಔಂಧ ಸಂಸ್ಥಾನದಲ್ಲಿ ಪರದೇಶಿ ಅರಿವೆ ಮತ್ತು ಪರದೇಶಿ ನೂಲು ಬರದಂತೆ ಠರಾವ ಮಾಡಬೇಕೆಂದು ಅಲ್ಲಿಯ ಕೌನ್ಸಿಲದಲ್ಲಿ ಶ್ರೀ. ಸಾತವಳೇಕರರು ಸೂಚನೆ ತಂದರು. ಸ್ವತಃ ಶ್ರೀಮಂತರೇ ಈ ಸೂಚನೆಯನ್ನು ಅಂಗೀಕರಿಸಿ, ಎರಡಕ್ಕೂ ತಮ್ಮ ಸಂಸ್ಥಾನದಲ್ಲಿ ಆಶ್ರಯ ದೊರೆಯದೆಂದು ಹುಕುಮು ಮಾಡಿದರು

ವರ್‍ಹಾಡವು ನಿಜಾಮರಿಗೆ ಸಹಸಾ ಸೇರತಕ್ಕದ್ದಲ್ಲ

....(೦)....

ವರ್‍ಹಾಡ ಪ್ರಾಂತದವರು ಒಂದು ಪರಿಷತ್ತು ಸೇರಿಸಿ, ವರ್‍ಹಾಡವು ನಾಗಪೂರ ಇಲಾಖೆಯಿಂದ ಅಗಲತಕ್ಕದ್ದಲ್ಲೆಂದೂ, ನಿಜಾಮಶಾಹಿಗೆಂತೂ ಸಹಸಾ ಸೇರತಕ್ಕದ್ದಲ್ಲೆಂದೂ ಠರಾವು ಮಾಡಿದರು.

ನೀರಿಲ್ಲದೆ ದನಗಳು ಸತ್ತವು.

—(೦)—

ಜಬಲಪೂರದಲ್ಲಿ ನೀರಿನ ಭಯಂಕರ ಕೊರತೆಯಾಗಿದೆ ಬಿಸಿಲಿನಲ್ಲಿ ನಡೆದು, ದಣಿದ ದನಗಳಿಗೆ ನೀರು ಸಿಗದೆ ೬೫ ದನಗಳು ಸತ್ತು ಬಿದ್ದವು.

ಸರ ಸಾಯಿಮನ್ನಸಾಹೇಬರು ತಮ್ಮ ಬಣಬಿಟ್ಟು ಹೋದದ್ದಕ್ಕಾಗಿ ಮಿ. ಲಾಯಿಡ ಜಾರ್ಜಸಾಹೇಬರು ಹೀಗೆನ್ನುತ್ತಾರೆ.

" ಯಾವನೊಬ್ಬ ಮನುಷ್ಯನು ಮುದುಕನಾಗುವ ತನಕ ಸರೆ ಕುಡಿಯುವದನ್ನು ಬಿಟ್ಟು, ೭೦ ವರ್ಷದ ಮುದುಕನಾದ ತರುವಾಯ ಸರೆ ಕುಡಿದು ಗಟಾರದಲ್ಲಿ ಬಿದ್ದು, ಕೊಂಡವಾಡಿ, ಕೊನೆಯಲ್ಲಿ ಹುಚ್ಚರ ಆಸ್ಪತ್ರಿಯಲ್ಲಿ ಹೋಗಿ ಬೀಳುವಂತೆ ಸರ ಸಾಯಿಮನ್ನಸಾಹೇಬರ ಮತಾಂತರದ ಅವಸ್ಥೆಯಾಗಿದೆ"

ಮುಪ್ಪಿನ ಕಾಲದಲ್ಲಿ ಮತಭ್ರಷ್ಟರಾದಂಥವರ ಹೆಬ್ಬೆಟ್ಟಿಗೆಯನ್ನು ಹಿಂದೀ ಜನರು ಎರಡು ವರ್ಷಗಳ ಹಿಂದೆಯೇ ಸುಟ್ಟಿದ್ದು ಎಷ್ಟು ಆಶ್ಚರ್ಯಕರವಲ್ಲೆಂದು ಈಗ ನಿಶ್ಚಯಿಸಿದರು.

ಕಾರಕ ಜಾಹೀರನಾಮೆಯನ್ನು ಹಚ್ಚಿದ್ದಾರೆ. ಈ ಪತ್ರ ಲೇಖಕರನ್ನು ಹಿಡಕೊಟ್ಟವರಿಗೆ - ಐನೂರು ರೂಪಾಯಿ ಇನಾಮು ಕೊಡುವಂತೆ ಪೋಲಿಸರು ಜಾಹೀರನಾಮೆ ಹಚ್ಚಿದ್ದಾರೆ.

ಮುಸಲಮಾನರ ಅಂಗಡಿಗಳ ಮುಂದೂ ಪಿಕೆಟಿಂಗಕ್ಕೆ ಯಶ ಬಂತು.

ಪುಣೆಯಲ್ಲಿ ಸೇನಾಪತಿ ಬಾಪಟ, ಶ್ರೀ. ಚ ಪಾಧ್ಯಾಯ ಕಮಲಾದೇವಿಯರ ನೇತೃತ್ವದ ಪರದೇಶಿ ಅಂಗಡಿಗಳ ಮುಂದೆ ಪಿಕೆಟಿಂಗ ನಡೆ[illegible]. ನಾವು ಮುಸಲಮಾನರು; ಹಿಂದುಸ್ಥಾನದ [illegible] ಇದ್ದೇವೆಂದು ಮುಸಲಮಾನರು ತಿಳಕೊಂಡಿದ್ದರು. ಸೇನಾಪತಿಯವರು ಈ ಭ್ರಾಂತಿಯನ್ನು [illegible]ನೆ ದೂರ ಮಾಡಿದರು. ನಮಗೆಲ್ಲರೂ ಒಂ[illegible] ಎಂದು ಹೇಳಿ, ಪಿಕೆಟಿಂಗ ಪ್ರಾರಂಭಿಸಿದರು. ದ ಮೊದಲು ಮುಸಲಮಾನರು ಅಡ್ಡಿ ಮಾಡಿದರು ಕೊನೆಯಲ್ಲಿ ರಾಜಿಯಾಗಿ, ಅಂಗಡಿಗಳನ್ನು ಬಂದು ಮಾಡಿದರು.

ಸಿರ್ಸಿ-ಸಿದ್ದಾಪೂರ ತಾಲೂಕಗಳಲ್ಲಿ ಪಟ್ಟಿ ದೆಸೆಯಿಂದ ಜಪ್ತ ಮಾಡಿದಂಥ ಜಂಗಮ ಆಸ್ತಿ ಲಿಲಾವು ಮಾಡಲಾರಂಭಿಸಿದ್ದಾರೆ.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರೀ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು ಒಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

ಜುಲೈ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾದ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

“ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳಿಗೂ ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ.”

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,
೬	ದುರ್ಗಸಿಂಹನ ಪಂಚತಂತ್ರ ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,,
೧೨	ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇಮಮಂದಿರ	೮	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹವೈದ್ಯಕ	೮	,,
೧೭	ಮೋಹಿನೀ ನಿಂದಕರ ನಡಾವಳಿ	೮	,,
೪೦	ಕನ್ನಡ ಮಾತು ತಲೆಯೆತ್ತುವ ಬಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಳಿದಾಸ	೬	,,
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೬	,,
೨೪	ಬೇಗಮ್ ಸಮರು	೬	,,
೨೫	ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	,,
೩೨	ಶೇರಶಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	ಮೊಹರಮ್	೩	,,
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	,,
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	,,
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ. ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಫ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ. ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ ೧—೪—೦

೪. ಶ್ರೀಹರ್ಷನೂ ಅವನ ನಾಟಕಗಳೂ [ನಾ. ವೆ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು. ೦—೧೨—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ [illegible] ಪ್ರಸಿದ್ಧ ಮಾಡಿದರು.

R. N. B. 1443.

ಶ್ರೀ

[illegible]

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಬುಧವಾರ ತಾರೀಖು ೮ ನೇ ಜುಲೈ ೧೯೩೧ (ಸಂಚಿಕೆ ೬೫೪

The Asian Life Assurnance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಅಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೨೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦.

ವಿಮೆಯ ಹಣ ತಿರಿಗಿ ಕೊಟ್ಟಿದ್ದು ೧೦,೦೦,೦೦೦

ಜಿಂದಿಗಿ ೨೫,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಮಬಾಗಕರ ಮತ್ತು ಕುಲಕರ್ಣಿ, ಧಾರವಾಡದ ಏಜಂಟರು

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಪಿ. ಎಚ್. ಪಾಟೀಲ ಹುಬ್ಬಳ್ಳಿಯ ಏಜಂಟರು-

ಹಾವೇರಿಯ ಖಾಸ ಏಜಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು ಶ್ರೀ. ಬಿ. ಟಿ. ಶಿರೋಳಕರ.

ಆಸುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦ ರೂ. ಗಳನು ಕೊಡುವಂಥ **ಗೋಲ್ಡನ್ (ಸುವರ್ಣ) ಪಾಲಿಸಿ**ಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಎಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ,

ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨/೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೮-೭-೧೯೩೧ನೇ ಇಸ್ವಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಾದ ಗೊತ್ತುವಳಿಗಳು.

ಹೋದ ಆದಿತ್ಯವಾರ ತಾರೀಖು ೫ನೆಯ ಜುಲೈದ ದಿವಸ ಈಯೂರಲ್ಲಿ ಶ್ರೀ. ಕಾರನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಕೂಡಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಿ ಪಾಸಾದ ಗೊತ್ತುವಳಿಗಳ ಸಾರಾಂಶವು.

೧ ಕರ್ನಾಟಕದೊಳಗಿನ ಎಲ್ಲಾ ಜಿಲ್ಲಾ ಕಾಂಗ್ರೆಸ ಕಮಿಟಿಗಳು ಖಾದಿಯ ಪ್ರಸಾರವನ್ನೊಳಗೊಂಡು ಪರದೇಶಿ ಮತ್ತು ಬಹಿಷ್ಕೃತ ಗಿರಣಿಗಳ ಅರಿವೆಯನ್ನು ಅಚ್ಚುಕಟ್ಟಾಗಿ ಬಹಿಷ್ಕಾರ ಹಾಕುವಂತೆ ಈ ಕ್ಷಣವೇ ಉಪಾಯ ಕೈಕೊಳ್ಳಬೇಕು.

೨ ಇದೇ ಪ್ರಕಾರ ಸೆರೆ-ಶಿಂದಿಯ ಬಹಿಷ್ಕಾರದ ವಿಷಯವಾಗಿಯೂ ಪ್ರಯತ್ನಿಸಬೇಕು,

೩ ಕಾಂಗ್ರೆಸದ ಮೆಂಬರರನ್ನು ಮಾಡಬೇಕು ಅಲ್ಲಲ್ಲಿ ಕಾಂಗ್ರೆಸ ಕಮಿಟಿ ಸ್ಥಾಪಿಸಬೇಕು ಮತ್ತು ಕಾಂಗ್ರೆಸ ಫಂಡು ಕೂಡಿಸಬೇಕು.

೪ ಆಯಾ ಸ್ಥಳಗಳ ಪರಿಸ್ಥಿತಿಗನುಸರಿಸಿ, ಮುಂದೆ ಕೊಟ್ಟ ಕೆಲಸಗಳ ಕರ್ತವ್ಯ ಮಾಡಬೇಕು.

(ಅ) ವಿಜಾಪೂರ ಜಿಲ್ಹೆ- ರೈತರ ಸರ್ವಸಾಮಾನ್ಯವಾದ ಸಾಂಪತ್ತಿಕ ಸ್ಥಿತಿಯ ವಿಚಾರ-

(ಬ) ಧಾರವಾಡ ಜಿಲ್ಹೆ- ಇರಿಗೇಶನ ಕರಭಾರುಗಳ ಬಗ್ಗೆ.

(ಕ) ಬೆಳಗಾವ ಜಿಲ್ಹೆ-

(೧) ಖಾನಾಪೂರ- ವನಗಾವಲು

(೨) ಹುಕ್ಕೇರಿ ಗೋಕಾಕ- ಇರಿಗೇಶನ

(ಡ) ಬಳ್ಳಾರಿ ಜಿಲ್ಹೆ-

(೧) ಕೂಡ್ಲಗಿ ತಾಲೂಕ- ವನಗಾವಲು (೨) ಹೊಸಪೇಟ ಮತ್ತು ಹರಪನಹಳ್ಳಿ- ರೈತರ ಸಾಂಪತ್ತಿಕ ಸ್ಥಿತಿಯ ವಿಚಾರ.

(ಇ) ಮಂಗಳೂರ ಜಿಲ್ಹೆ- ಇದೇ ಜಿಲ್ಹೆಯ ರಿವ್ಹಿಜನ ಮತ್ತು ಸರ್ವೆ- ಕುಂದಾಪೂರ. ತಾಲೂಕಿನ ಪಟ್ಟಿಗೆ. ವನಗಾವಲು- ಪುತ್ತೂರ ಮತ್ತು ಕಾಸರಗೋಡ ತಾಲೂಕುಗಳಲ್ಲಿ ರೈತರ ಸಾಂಪತ್ತಿಕ ಸ್ಥಿತಿಯ ವಿಚಾರ.

೫ ಶ್ರೀ. ಕಾರನಾಡ ಸದಾಶಿವರಾಯರು, ಶ್ರೀ. ಹುಕ್ಕೇರಿ ರಾಮರಾಯರು ಮತ್ತು ಶ್ರೀ. ಮುದವೀಡು ಕೃಷ್ಣರಾಯರು ಕೆಲವೊಂದು ವಿಶಿಷ್ಟ ಸ್ಥಳಗಳಲ್ಲಿ ಸ್ಥಾನಿಕ ಸಭ್ಯಗೃಹಸ್ಥರ ಸಹಾಯ ಪಡೆಕೊಂಡು, ಪರದೇಶಿ ಮತ್ತು ಬಹಿಷ್ಕೃತ ಗಿರಣಿಗಳ ಅರಿವೆಯ ಬಹಿಷ್ಕಾರವು ಪರಿಣಾಮಕಾರಕವಾಗುವಂತೆ ವ್ಯವಸ್ಥೆಗೊಳಿಸಬೇಕು.

೬ ಅಖಿಲ ಭಾರತೀಯ ಸ್ವದೇಶಿ ಬೋರ್ಡಿನಲ್ಲಿ ಕರ್ನಾಟಕದ ವತಿಯಿಂದ ಶ್ರೀ. ಹುಕ್ಕೇರಿ ರಾಮರಾಯರೊಬ್ಬರನ್ನು ಮೆಂಬರ ಮಾಡಿಕೊಳ್ಳುವಂತೆ- ಕಾಂಗ್ರೆಸದ ವರ್ಕಿಂಗ ಕಮಿಟಿಯವರಿಗೆ ವಿನಂತಿ ಮಾಡಿಕೊಳ್ಳತಕ್ಕದ್ದು.

೭ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ವಿಶೇಷವಾಗಿ ಸಿರಸಿ ಸಿದ್ಧಾಪೂರ ತಾಲೂಕಗಳಲ್ಲಿ ಮುಲಕೀ ಅಮಲದಾರರು ನಡೆಸಿರುವ ಅನೇಕ ಅಕ್ರಮಗಳನ್ನು ಈ ಕಮಿಟಿಯು ಬಲವಾಗಿ ದೂಷಿಸುತ್ತದೆ. ಪಟ್ಟಿಕೊಡಲಿಕ್ಕೆ ತ್ರಾಣವಿಲ್ಲದ ಜನರ ಮೇಲೆ ಬಲಾತ್ಕಾರ ಮಾಡುವದು ಗಾಂಧಿ ಆಯರ್ವಿನ್ನ ಒಡಂಬಡಿಕೆಯ ತಿಳುವಳಿಕೆಯ ವಿರುದ್ಧವಿರುತ್ತದೆಂದು ಕಮಿಟಿಯ ಮತವಿರುತ್ತದೆ

೮ ಮೈಸೂರ ಸಂಸ್ಥಾನಕ್ಕೆ ಸೇರಿದ ಶಿಕಾರಪೂರ ತಾಲೂಕಿನ ರೈತರ ಬಡತನ ಮತ್ತು ಅವರಿಗೊದಗಿದ ಬರದ ಭವಣೆಗಾಗಿ ಕಮಿಟಿಯು ಸಹಾನುಭೂತಿಯುಳ್ಳದ್ದಾಗಿದೆ. ಮೈಸೂರ ಸರಕಾರದವರು ಪಟ್ಟಿ ವಸೂಲಿ ವಿಷಯಕವಾದ ಎಲ್ಲಾ ದಬ್ಬಾಳಿಕೆ ನಿಲ್ಲಿಸಿ, ಅವರ ಪೋಷಣದ ವ್ಯವಸ್ಥೆ ಮಾಡಬೇಕು

೯ ಕರ್ನಾಟಕ ಪ್ರಾಂತದಲ್ಲಾದ ಒಡಂಬಡಿಕೆಯ ಕರಾರುಗಳ ಮೇರೆಗೆ ಅಧಿಕಾರಸ್ಥರು ನಡೆದ ಎಲ್ಲಾ ಅಕ್ರಮಗಳನ್ನು ಕಾಂಗ್ರೆಸದ ವರ್ಕಿಂಗ ಕಮಿಟಿಯ ಮುಂದಿಡಲು ಶ್ರೀ. ದಿವಾಕರರಿಗೆ ವಿನಂತಿ ಮಾಡಿಕೊಂಡಿತು.

ಈ ನಿರ್ಣಯ ಪ್ರಕಾರ ಶ್ರೀ. ದಿವಾಕರರು ಮೊನ್ನಿನ ದಿವಸ ಮುಂಬಯಿಗೆ ಪ್ರಯಾಣ ಬೆಳೆಸಿದರು.

೧೦ ಬಾರಡೋಲಿಯಂತೆ ಕರ್ನಾಟಕದಲ್ಲಿ ಒಂದು ತಾಲೂಕ ನಿರ್ಮಾಣ ಮಾಡಲಿಕ್ಕಾಗಿ-ಶ್ರೀ. ೧ ಹ್ವಿ. ಹ್ವಿ. ಪಾಟೀಲ ೨ ದತ್ತಾತ್ರೆಯ ಕರಮರ ೩ ಡಾಕ್ಟರ ಕಬ್ಬೂರ ೪ ಬಳವಂತರಾವ ದಾತಾರ ೫ ಹಣಮಂತರಾವ ಕೌಜಲಗಿ ೬ ದಿವಾಕರ ಇವರದೊಂದು ಕಮಿಟಿ ನೇಮಿಸಿತು. ಈ ಕಮಿಟಿಯವರು ತಾವು ಗೊತ್ತುಪಡಿಸಿದ ತಾಲೂಕಿನ ಸಂಬಂಧವಾದ ವರದಿಯನ್ನು ಈ ತಿಂಗಳ ಕೊನೆಯೊಳಗಾಗಿ ಸಾದರಪಡಿಸತಕ್ಕದ್ದು.

———

ಶ್ರೀ

ದ್ಧ ಅಸಹ

ಕಾರ ... ರ ತಾಲೂಕನ್ನು

ಕಿರಿಕ್ಕೆ ... ಗಿಸುತ್ತಿದ್ದ ನಂದಗಡದ

ಶ್ರೀ. ಕ... ಯಕರು ಮೊನ್ನಿನ ದಿವಸ ಪ್ರಾತಃಕಾಲದಲ್ಲಿ ದಗಡದಲ್ಲಿ ಕ್ಷಯವಿಕಾರದಿಂದ ವೈಕುಂಠವಾಸಿಯಾದರೆಂದು ಬರೆಯುವದಕ್ಕೆ ಅತ್ಯಂತವಾಗಿ ವಿಷಾದಪಡುತ್ತೇವೆ ಶ್ರೀ ನಾಯಕರು ಸಧನರೂ ಸಂಪನ್ನರೂ ಆದ ಗೃಹಸ್ಥರು. ಅಸಹಕಾರ ಚಳವಳಿಯಲ್ಲಿ ರಣಭೇರಿ ಹೊಡೆದ ಕೂಡಲೆ, ಶ್ರೀಮಂತಿಕೆಯ ಸೌಖ್ಯದ ಎಲ್ಲ ಮಾನಸಿಕ ಕಲ್ಪನೆಗಳನ್ನು ಹಿಂದೂಡಿ, ಎರಡು ರೊಟ್ಟಿಯಲ್ಲಿ ಸಂತೋಷದಿಂದ ನಿರ್ವಾಹ ಮಾಡಲು - ಶ್ರೀ ಕೃಷ್ಣ ಜನ್ಮಸ್ಥಾನಕ್ಕೆ ಪ್ರಯಾಣ ಬೆಳೆಸಿದರು. ಕಾಯದೆಭಂಗದ ಚಳವಳಿಯಲ್ಲಿಯೂ ಧುಮುಕಿದರು. ತಂದೆಯ ಕೂಡ ಮಗನೂ ವೀರ ಅಭಿಮನ್ಯುವಿನಂತೆ ಇಂಗ್ರೇಜಿ ತುರಂಗದ ಚಕ್ರಕೋಟೆಯಲ್ಲಿ ಪ್ರವೇಶ ಮಾಡಿದನು ಅವರಿಗೆ ಅಕ್ಷಯೀ ಜಡ್ಡು ಹತ್ತಿತು. ಗಾಂಧಿ ಆಯರ್ವಿನ್ನ ಕರಾರ ಪ್ರಕಾರ ಅವರ ಬಿಡುಗಡೆಯಾಗದಿದ್ದರೆ - ಸರಕಾರದವರಿಗೆ ಇವರನ್ನು ಬಂಧಮುಕ್ತ ಮಾಡಲೇಬೇಕಾಗುತ್ತಿತ್ತು. ತುರಂಗದಿಂದ ಬಂದಮೇಲೆ [illegible] ಮಾಡತಕ್ಕ ಉಪಾಯಗಳನ್ನು ಮಾಡಿದರು. ಆದರೆ ದೇವರ ಇಚ್ಛೆಯು ಬೇರೆಯಾಗಿ, ಅವರ ಇಹಲೋಕದ ಯಾತ್ರೆ ಮುಗಿಯಿತು. ಅಳಿಯುವದು ದೇಹವು, ಉಳಿಯುವದು ಕೀರ್ತಿಯು ಎಂಬಂತೆ, ಇವರ ವ್ಯಾವಹಾರಿಕ ಮತ್ತು ರಾಷ್ಟ್ರೀಯ ಜೀವನವಾಗಿತ್ತು.

ಕುರುಡನಾದರೂ, ಕಾಂಗ್ರೆಸದ ಭಕ್ತನು

—(೦)—

ಪಟ್ಟಿಯ ವಿರುದ್ಧ ಚಳವಳಿಯು.

—(೦)—

ಅಲ್ಲಾಬಾದದಲ್ಲಿ ಶ್ರೀ. ಬಂದನೆಂಬ ಕುರುಡನು ಆತನು ಕರ ಕಂದಾಯ ಕೊಡಬಾರದೆಂದು ದೊಡ್ಡ ಚಳವಳಿ ಮಾಡುವನು. ಸರಕಾರದವರು ಈತನ ಬಾಯಿ ಬಂದಮಾಡಲು - ೧೦೮ನೆಯ ಕಲಮಿನನ್ವಯ ಈತನಮೇಲೆ ಕೇಸ ನಡಿಸಿದ್ದಾರೆ.

ರೌಂಡ ಟೇಬಲಿನ ಡೆಲಿಗೇಟರು ೧೫ನೆಯ ಆಗಸ್ಟದ ಹಡಗದಿಂದ ಪ್ರಯಾಣ ಮಾಡುವರು. ಪ್ರಮುಖರಿಗೆ ಮಾನಪತ್ರ ಕೊಡಬೇಕೆಂದು ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಠರಾವು ಬಂದಿದೆ.

ಒಂದು ಪ್ರಜಾಧ್ವನಿ ಸತ್ತು ಮತ್ತೊಂದು ಪ್ರಜಾಧ್ವನಿಯು ಜನ್ಮತಾಳಿತು.

ಕಾಯದೆಭಂಗದ ಚಳವಳಿಯನ್ನು ಮುರಿದು ಹಾಕಲಿಕ್ಕೆ ಉತ್ಸ್ಪ್ರಕದಂತೆ ಜನ್ಮತಾಳಿದ್ದ ಬೆಳಗಾವಿಯ ಪ್ರಜಾಧ್ವನಿಯು ಸತ್ತಬಳಿಕ, ಅಹಮದಾಬಾದಿನಲ್ಲಿ ಗುಜರಾಥಪತ್ರಕವೆಂಬ ಹೆಸರಿನಿಂದ ಮತ್ತೊಂದು ಪತ್ರವು ಜನ್ಮತಾಳಿದೆ. ಇದಕ್ಕೆ ಗವ್ಹರ್ನರರಾದ ಹಾಟಸನ್ನಸಾಹೇಬರು ದೀರ್ಘಾಯುಷ್ಯ ಚಿಂತಿಸಿದ್ದಾರೆ.

ಹಿಂದಕ್ಕೆ ಮುಂಬಯಿಯಲ್ಲಿಯೇ ಜಗದ್ಮಿತ್ರವೆಂಬ ಪತ್ರ ಹೊರಡುತ್ತಿತ್ತು. ಅದನ್ನು ಸರಕಾರದ ವೆಚ್ಚದಿಂದ ಗ್ರಾಮಸ್ಥರಿಗೆ ಕಳಿಸಿ ಕೊಡುತ್ತಿದ್ದರು. ಅದನ್ನು ಅವರು ಒಡೆದು ಸಹ ನೋಡುತ್ತಿದ್ದಿಲ್ಲ. ಹೀಗಾಗಿ ಅದು ಸತ್ತು ಹೋಯಿತು. ಫಿನಿಕ್ಸಪಕ್ಷಿಯು ತಾನಾಗಿ ಸುಟ್ಟುಕೊಂಡು ಸಾಯುತ್ತದೆ. ಮತ್ತು ತನ್ನ ಬೂದಿಯೊಳಗಿಂದಲೇ ಪುನಃ ಜನ್ಮ ತಾಳುತ್ತದೆಂದು ದಂತಕಥೆಯುಂಟು. ಆ ಪ್ರಕಾರ ೩೦ ವರ್ಷಗಳ ನಂತರ ಬೆಳಗಾವಿಯಲ್ಲಿ ಪ್ರಜಾಧ್ವನಿಯಾಯಿತು. ಆದರೆ ಇದಕ್ಕೆ ಸರಕಾರದಿಂದ ಪ್ರತ್ಯಕ್ಷ ದ್ರವ್ಯ ಬಲವಿರಲಿಲ್ಲ. ಜನ ಸಹಾಯವಂತೂ ಇರಲೇ ಇಲ್ಲ. ಆದ್ದರಿಂದ ಇದು ಆರೆಂಟು ತಿಂಗಳಲ್ಲಿ ಹುಟ್ಟಿದ ಹಬ್ಬ ಕೂಡ ಕಾಣದೆ ಕಣ್ಣುಮುಚ್ಚಿತು.

ಈ ಫಿನಿಕ್ಸವು ಈಗ ಗುಜರಾಥದಲ್ಲಿ ಅವತಾರಧಾರಣಮಾಡಿದೆ. ಅನಾಥ ಶಿಶುಗಳಿಗೆ ನಾಮಕರಣ ಮಾಡಿಸಲು ಯಾರಾದರನ್ನು ಕರೆಯುವ ಪದ್ಧತಿಯು ಕ್ರಿಶ್ಚನ್ನರಲ್ಲುಂಟು. ಆ ಪ್ರಕಾರ ಗುಜರಾಥ ಪತ್ರಿಕೆಯು ನಾಮದಾರ ಹಾಟಸನ್ನಸಾಹೇಬರ ಕೃಪೆಯಿಂದ ನಾಮಕರಣ ಹೊಂದಿತು. ಇದು ಪ್ರಜಾಶಕ್ತಿಯ ಕಾಲ. ಈ ಕಾಲದಲ್ಲಿ ಶಿಥಿಲವಾಗುತ್ತಿರುವ ರಾಜಶಕ್ತಿಯ ಉಪಯೋಗವೇನೂ ಆಗಲಾರದು. ಅರ್ಜುನನ ಗಾಂಡೀವವು ಕಟ್ಟಿಗೆಯಾಗಲಿಲ್ಲವೇ !

ದೋಣಿ ಮುಣುಗಿ ಕಿರ್ದ್ದ ಕರ್ಟನರು ಜಲ ಸಮಾಧಿ ಹೊಂದಿದರು.

—(೦)—

ಪೇಶಾವರ ಪ್ರಾಂತದ ಕಂಪಂಗಿಯ ಸ್ವಯಂಸೇವಕರು ಸಭೆ ಮುಗಿಸಿಕೊಂಡು ದೋಣಿಯಲ್ಲಿ ಕುಳಿತು ಕಹಾಳಂಮುವೆಂಬ ನದಿಯನ್ನು ದಾಟುತ್ತಿದ್ದಾಗ, ದೋಣಿ ಬೋರ್ಲು ಬಿದ್ದು ಹತ್ತು ಜನರು ಜಲಸಮಾಧಿ ಹೊಂದಿದರೆಂದು ದುಃಖದ ವರ್ತಮಾನ ಬಂದಿದೆ.

ಬೆಂಗಳೂರಲ್ಲಾದ ರಾಷ್ಟ್ರೀಯ ನಿಶಾನೆಯ ಅಪಮಾನದ ಮಾಸ ಕುಂಬಿ ತರುವಿಕೆ.

—(೦)—

ಬೆಂಗಳೂರಲ್ಲಿ ಮಧ್ಯರಾತ್ರಿಯ ಕಾಲದಲ್ಲಿ ನರಾಧಮರು ರಾಷ್ಟ್ರೀಯ ನಿಶಾನೆಯನ್ನು ಕೆಡವಿ, ಅದರ ಕಟ್ಟೆಯನ್ನೂ ಒಡೆದು ಹಾಕಿದರಷ್ಟೇ; ಪುನಃ ಇದೇ ಸ್ಥಳದಲ್ಲಿ (ಗಾಂಧಿನಗರ) ನಿಶಾನೆಯನ್ನು ನಿಲ್ಲಿಸಲು ಕಾಂಗ್ರೆಸಿನವರು ಕಾರ್ಯಪ್ರವೃತ್ತರಾಗಲು ಪೋಲೀಸರು ಅಡ್ಡ ಬಂದರು. ಈ ಕಟ್ಟೆಯನ್ನು ನೀವು ನೆಲಸಮ ಮಾಡಿರಿ. ಇಲ್ಲವಾದರೆ-ನಾವೇ ಹಾಗೆ ಮಾಡುತ್ತೇವೆಂದು ಪೋಲೀಸರೆಂದರು. ಇವರಿಗೇಕೆ ಇಂಥ ಕಸಿವಿಸಿಯಾಯಿತೋ ದೇವರೇ ಬಲ್ಲ. ಸತ್ಯಾಗ್ರಹ ಮಾಡಿ, ಕಾಯದೆಭಂಗ ಮಾಡುವದು ಯುದ್ಧ ತಹಕೂಬಿಯ ತತ್ವಕ್ಕೆ ವಿರುದ್ಧವಾದ್ದರಿಂದ ಕಾಂಗ್ರೆಸಿನವರು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರನ್ನು ಕಂಡು, ಅವರಿಗೆ ನಡೆದ ಸಂಗತಿ ತಿಳಿಸಿದರು. ಈ ವಿಷಯವಾಗಿ ಮಹಾತ್ಮರ ಅಭಿಪ್ರಾಯ ಕೇಳಬೇಕು. ಅವರ ಸೂಚನೆಯಂತೆ ಉಭಯತರು ನಡೆಯಬೇಕೆಂದು ಉಭಯತರ ನಡುವೆ ಗೊತ್ತಾಯಿತು. ಅಶಿಕ್ಷಿತ ಪೋಲಿಸ ಮತ್ತು ಸುಶಿಕ್ಷಿತ ಮ್ಯಾಜಿಸ್ಟ್ರೇಟರ ನಡುವೆ ಇಷ್ಟು ಅಂತರವಿರುತ್ತದೆ.

ಪಂಜಾಬದ ಸಿಕಂದರಾಬಾದಿನಲ್ಲಿ ಭಯಂಕರ ದಂಗೆ

....(೦)....

ಸಿಕಂದರಾಬಾದಿನಲ್ಲಿ ಹಿಂದೂ ಅಂಗಡಿಕಾರರು ಮುಸಲಮಾನ ಗಿರಾಕಿಗಳಿಗೆ ಬಾಕೀ ಬೇಡಿದ್ದೇ ತಪ್ಪು ಹಿಂದೂ ಮುಸಲಮಾನರಲ್ಲಿ ಬಾಯಿಗೆ ಬಾಯಿ ಹತ್ತಿ ದೊಡ್ಡ ಹೊಡದಾಟವೇ ಆಯಿತು. ಮುಸಲಮಾನರು ಹಿಂದೂ ಅಂಗಡಿಕಾರರ ಅಂಗಡಿಯೊಳಗಿನ ಕಲ್ಲೆಣ್ಣೆಯನ್ನು ತಕ್ಕೊಂಡು, ಉಗ್ಗಿ, ಉರೀ ಹಚ್ಚಿ, ಅನೇಕ ಅಂಗಡಿಗಳನ್ನು ಸುಟ್ಟರು. ಖಾತೆ ಕಿರ್ದಿಗಳು ಬೂದಿಯಾದವು ಹೊಡದಾಟದಲ್ಲಿ ಅನೇಕರು ಪೆಟ್ಟು ತಿಂದರು, ಯಾರೂ ಸಾಯಲಿಲ್ಲ.

ಕೋಟ್ಯಾಧೀಶರಾದ ತಂದೆ ಮಕ್ಕಳಿಗೆ ಶಿಕ್ಷೆ

—(೦)—

ಕಲಕತ್ತೆಯಲ್ಲಿ ಮಹೇಂದ್ರಲಾಲ ಮಲಿಕ ಮತ್ತು ಆತನ ಮಕ್ಕಳು ಸೇರಿ, ಕಲ್ಲೆಣ್ಣೆಯ ಏಜನ್ಸಿ ದೊರಕಿಸಿ ಕೊಡುತ್ತೇವೆಂದು ಒಬ್ಬನಿಂದ ಮೂರು ಸಾವಿರ ರೂಪಾಯಿಗಳನ್ನು ತಕ್ಕೊಂಡು ಅಪಹಾರ ಮಾಡಿದರೆಂಬ ಆರೋಪಕ್ಕಾಗಿ ತಂದೆ ಮಕ್ಕಳೀರ್ವರೂ ಕಠಿಣ ಶಿಕ್ಷೆಗೂ ದಂಡಕ್ಕೂ ಗುರಿಯಾದ್ದಾರೆ.

ಅಲಹಾಬಾದ ಇಲಾಖೆಯಲ್ಲಿ ಕರಕಂದಾಯ ನಿರೋಧ.

ಸರಕಾರಕ್ಕೆ ಮೂರು ಕೋಟಿಯ ಹಾನಿಯು.

~(೦)—

ಅಲಹಾಬಾದ ಇಲಾಖೆಯು ರೈತರಿಗೆ ಬಂದಷ್ಟು ದುಃಖದ ಭೋಗವು ಇನ್ನಾವ ಇಲಾಖೆಯಲ್ಲಿಯೂ ಬಂದಿಲ್ಲ. ಸರಕಾರದ ತೀರ್ವೆಯು ಮೂರು ಕೋಟಿಯ ತನಕ ವಸೂಲಾಗದೆ ನಿಂತಿದೆ. ರೈತ ಮತ್ತು ಜಮೀನದಾರರ ನಡುವೆ ಬೆಂಕಿ ಹಾದು ಹೋಗಿದೆ. ಜಮೀನದಾರರ ಕೊಲೆಗಳಂತೂ ಸಹಜವಾಗಿದೆ. ರೈತರ ಅತ್ಯಂತವಾದ ಶೋಚನೀಯ ಸ್ಥಿತಿಯನ್ನು ಕುರಿತು ಪಂಡಿತ ಜವಾಹರಲಾಲರು ಬೇಗನೆ ಒಂದು ಜಾಹೀರ ಪತ್ರಿಕೆಯನ್ನು ಪ್ರಸಿದ್ಧ ಮಾಡತಕ್ಕವರಿದ್ದಾರೆ.

ಬಿರುಗಾಳಿ ಬಿರುಮಳೆಯಿಂದ ಪೇಟೆಗೆ ಪೇಟೆಯೇ ಹಾಳಾಯಿತು.

—(೦)—

ಅಕೋಲೆಯಲ್ಲಿ ಹೋದ ರವಿವಾರ ದಿವಸ ಮಧ್ಯಾಹ್ನದಲ್ಲಿ ಪ್ರಚಂಡವಾದ ಗಾಳಿ ಬೀಸಲಿಕ್ಕೆ ಹತ್ತಿತು. ಗಾಳಿಯಿಂದ ಗಿಡಗಳು ಬೇರು ಸಹಿತ ಕಿತ್ತಿ ಬಿದ್ದವು. ಹಂಚುಗಳೂ, ತಗಡುಗಳೂ, ಅರಳು ಹಾರಿದಂತೆ ಹೋದವು. ಗುಡಿಸಲು ಪಟಗಳಂತೆ ಆಕಾಶಕ್ಕೆ ಹಾರಿದವು. ಅನಂತರ ಬಿರುಮಳೆಗೆ ಪ್ರಾರಂಭವಾಯಿತು. ಮುಗಿಲೇ ಹರಿದು ಬಿತ್ತೆಂದು ಜನರಿಗನಿಸಿತು. ತಾರಿನ ಕಂಬಗಳು ಕಿತ್ತಿ ಹೋದ್ದರಿಂದ, ಎತ್ತ ನೋಡಿದತ್ತ ನೀರೇ ನೀರಾದ್ದರಿಂದ, ಊರ ಹೊರಗಿನ ಎಲ್ಲ ವ್ಯವಹಾರವು ನಿಂತಿತು. ಪೇಟೆಯಲ್ಲಿ ಅನೇಕ ಅಂಗಡಿಗಳು ನಷ್ಟಕ್ಕೆ ಗುರಿಯಾದವು. ೫೦ ಸಾವಿರದ ಹಾನಿಯಾಗಿರಬೇಕೆಂದು ಅಂದಾಜಮಾಡಿದ್ದಾರೆ.

ಫೌಜದಾರರಿಗೆ ಕೊಂದು ಹಾಕುವೆವೆಂದು ಬೆದರಿಸುವಿಕೆ

—(೦)—

ಪುಣೆಯಲ್ಲಿ ಕ್ರಾಂತಿಕಾರಕರೆಂದು ಹನ್ನೆರಡು ಜನರನ್ನು ಹಿಡಿದಿದ್ದಾರೆ. ಈ ನಂತರ ದಸ್ತಗಿರಿಯ ಉದ್ಯೋಗ ಬಿಡಿರಿ. ಇಲ್ಲವಾದರೆ - ನಿಮ್ಮನ್ನು ಕೊಂದು ಹಾಕುವೆವೆಂದು ಈ ಪ್ರಕರಣದ ಸೂತ್ರಧಾರರಾದ ಫೌಜದಾರ ಎಂ. ಭೋಸಲೆಯವರಿಗೆ ಹೆದರಿಸುವ ಮೂಕಪತ್ರ ಕಳಿಸಿದ್ದಾರೆ ಮತ್ತು ಬುಧವಾರ ಕೋರ್ಟಿನಲ್ಲಿ ಕೆಂಪು ಕಾಗದದ ಕ್ರಾಂತಿ

ಲಾತ್ಕಾರದಿಂದ ಹೊಟ್ಟೆಯಲ್ಲಿ ಹಾಲು ಹಾಕುತ್ತಿದ್ದಾರೆ ಇವರ ಪ್ರಕೃತಿಯು ಬಹಳ ಕೆಡದಿದ್ದರೂ, ಹೆಚ್ಚು ಕೆಡುವ ಮಾರ್ಗ ಹಿಡಿದಿದೆ.

ಮಹಾತ್ಮರು ಲಂಡನದಲ್ಲಿ ಬಡವರ ಪರಿವಾರದಲ್ಲಿಳಿಯುವರು.

—(೦)—

ಕುಮಾರಿ ಲಿಸ್ಟರೆಂಬವಳು ಶ್ರೀಮಂತ ನಾರಿಯು ಈ ಲೇಖಕಳು ಐದು ವರ್ಷಗಳ ಹಿಂದೆಯೇ ಮಹಾತ್ಮರ ಗುರ್ತಿನವಳಾಗಿದ್ದಾಳೆ ಇವಳ ಆಮಂತ್ರಣದ ಪ್ರಕಾರ ಮಹಾತ್ಮರು ಇವಳ ವಾಸಸ್ಥಳದಲ್ಲಿಯೇ ಇಳಿದುಕೊಳ್ಳುವರು. ಇಲ್ಲಿ ಬೇರೆ ಬೇರೆ ದೇಶಗಳ ಧನದ ಬಡವರ ಕುಟುಂಬಗಳು ಭಾಗಗಳಿಂದ ಇಲ್ಲಿಗೆ ಬಂದು ವಾಸವಾಗಿದ್ದಾರೆ. ಬಡಜನದ ಬಳಗದಲ್ಲಿರುವದೇ ತಮಗೆ ಸಂತೋಷವೆಂದು ಮಹಾತ್ಮರು ಇವಳಿಗೆ ಪತ್ರ ಬರೆದಿದ್ದಾರೆ.

ಬಲಾತ್ಕಾರದಿಂದ ಕೈಬೆರಳುಗಳ ಗುರ್ತು ತೆಕ್ಕೊಂಡದ್ದಕ್ಕೆ ೧೫೦೦೦ ದ ದಾವೆಯು

—(೦)—

ನಾಗಪೂರ ಇಲಾಖೆಗೆ ಸೇರಿದ ರಾಯಪೂರ ನಿವಾಸಿಯಾದ ಪಂಡಿತ ರವಿಶಂಕರ ಶುಕ್ಲರವರು ಶಿವಮೋನಿಯ ತುರುಂಗದಲ್ಲಿದ್ದಾಗ ಪೋಲೀಸರು ಅವರ ಕೈಬೆರಳುಗಳ ಗುರ್ತುಗಳನ್ನು ಬಲಾತ್ಕಾರದಿಂದ ತೆಕ್ಕೊಂಡರು ಮನಸ್ಸಿನ ವಿರುದ್ಧ ಮತ್ತು ಬಲಾತ್ಕಾರ ಮಾಡಿದ ಬಗ್ಗೆ ಪಂಡಿತರು ಸರಕಾರದ ಮೇಲೆ ೧೫ ಸಾವಿರದ ದಾವೆ ಮಾಡುವರಿದ್ದಾರೆ.

ವಿವಿಧ ವರ್ತಮಾನಗಳು

ಹುಬ್ಬಳ್ಳಿಯ ಸ್ಟೇಶನದಲ್ಲಿ ಬಹುವಾಗಿ ಬದಲು ಮಾಡಿ, ಅದನ್ನು ಪುಣೆಯಂತೆ ದೊಡ್ಡದಾಗಿ ಕಟ್ಟುವಂತೆ ಕಂಪನಿಯವರು ನಕಾಶೆ ಮಾಡಿದ್ದಾರೆ. ಏಜಂಟರವರು ಅದನ್ನು ಬೇಗನೆ ಅಲೋಚನಾ ಕಮಿಟಿಯವರಿಗೆ ತೋರಿಸತಕ್ಕವರಿದ್ದಾರೆ.

ಪಂಜಾಬದಲ್ಲಿ ಮುಸಲಮಾನರ ಬಹು ಸಂಖ್ಯೆಯುಂಟು. ಅಲ್ಪಸಂಖ್ಯಾಕರಾದ ಹಿಂದೂ, ಶೀಖ ಮತ್ತು ಕ್ರಿಶ್ಚನರು ಸೇರಿ, ಸ್ವತಂತ್ರ ಚುನಾವಣೆ ಇರಬಾರದು. ಮಿಶ್ರ ಚುನಾವಣೆಯಾಗಬೇಕೆಂಬ ಠರಾವು ಮಾಡಿದರು.

ಸಿಂಧದ ಪೀರ ಪಗರಾವರು ಏಳು ವರ್ಷದ ಶಿಕ್ಷೆ ಅನುಭವಿಸುತ್ತಲಿದ್ದಾಗ್ಯೂ, ಈಗ ಇವರ ಗುರುಪೀಠಕ್ಕೆ ಬಾಧ್ಯಸ್ಥನಾದ ಪೀರ ಜಾಯಂದಳಹಾನನ್ನೂ ಕೊಂದರು.

ಧಾರವಾಡ

ಮೊನ್ನೆಯಿಂದ ಈ ಊರಲ್ಲಿ ಗಾರಿಕಾ ಪ್ರಾರಂಭವಾಗಿ, ನಾಲ್ವರು ಸತ್ತರೆಂದು ತಿಳಿಯುತ್ತದೆ.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

“ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ.”

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,
೬	ದುರ್ಗಸಿಂಹನ ಪಂಚತಂತ್ರ ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೀಯಶೋದಾ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,
೧೨	ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇಮಮಂದಿರ	೨	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹವ್ಯವಸ್ಥೆ	೮	,,
೧೭	ಸೋಹೋನಿ ಸಿಂದಕರ ಸಡಾವಳಿ	೮	,,
೪೦	ಕನ್ನಡ ಮಾತು ತಲೆಯೆತ್ತುವ ಬಗೆ	೯	,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರಂಬಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಳಿದಾಸ	೬	
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮ್ಮದ ಪೈಗಂಬರರ ಚರಿತ್ರೆ	೬	
೨೪	ಜೋಗಪ್ಪನ ಸಸುರು	೬	,
೨೫	ಅಮೇರಿಕೆದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಬೀಪನ್ನಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯ ಶಾಸನೀತಿಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	,,
೩೨	ಶೇರಸಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	ಪಂಚಪರಮ	೩	,
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಅಶೋಕನ ಚರಿತ್ರೆ	೩	,,
೩೮	ಸುಭದ್ರಾಹರಣ	೨	,,
೩೯	ಬಂಗಾರದ ಅರಿಯದ ರಾಧೆ	೨	,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪಾಣಿನಿ	೧೨	,,
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ ಜಿ ಹುಲಿಕವಿ, ಎಸ್. ಟೀ. ಸೀ] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ
ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು ಘ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ
ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ
೧—೪—೦

೪. ಶ್ರೀಹರ್ಷನೂ ಅವನ ನಾಟಕಗಳೂ [ನಾ. ವೆ ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು.
೦—೧೦—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

K. N. B. 1443.



ವಿಜಯ

ಸಾಪ್ತಾಹಿಕ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಗುರುವಾರ ತಾರೀಖು ೯ ನೇ ಜುಲೈ ೧೯೩೧ (ಸಂಚಿಕೆ ೧೫೫

The Asian Life Assurance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦, ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯು

ವಿಮೆಯು ರಕಮು ರೂ. ೧,೨೫,೦೦೦,೬೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರುಗಿ ಕೊಟ್ಟದ್ದು ೧೦,೮೦,೦೦೦

ಜಿಂದಗಿ ೨೩,೦೬,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು   ಕೆ. ವ್ಹಿ. ಹುಲಸೋಗಿ, ಬಿ ಎ.
ಕುಲಕರ್ಣಿ ಧಾರವಾಡದ ಏಜಂಟರು   ಕರ್ನಾಟಕದ ಬ್ರಾಂಚ ಮ್ಯಾನೇಜರ
ಬಿ. ಎಚ್. ಪಾಟೀಲ   ಹುಬ್ಬಳ್ಳಿಯ ಏಜಂಟರು-
ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಮ್. ಜೋಡ್ಡವಾಡ ಮತು
ಶ್ರೀ. ಬಿ, ಟಿ ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦೦ ರೂ. ಗಳನು ಕೊಡುವಂಥ **ಗೋಲ್ಡನ್** (ಸುವರ್ಣ) **ಪಾಲಿಸಿ**ಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂಥಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟಿಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಚಕಾಕಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿಗಳಿಗಾಗಿ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ಮಹಿಳಾ ವಿದ್ಯಾಲಯ ಧಾರವಾಡ
ಇದರ
ಸಂಕ್ಷಿಪ್ತ ವೃತ್ತಾಂತವು

ಸಧ್ಯದ ಮಟ್ಟಿಗಾದರೂ ಕರ್ನಾಟಕ ಮಹಿಳಾ ವಿದ್ಯಾಲಯವನ್ನು ಬಂದಿಡುವ ಪ್ರಸಂಗವು ಬಂದದ್ದಕ್ಕೆ ನನಗೆ ಬಹು ವಿಷಾದವೆನಿಸುತ್ತದೆ. ಆ ಸಂಸ್ಥೆಯ ಕಾರ್ಯದರ್ಶಿಯಾಗಿದ್ದದರಿಂದ ಈ ಪ್ರಕಾರ ಅನಿಷ್ಟ ಪ್ರಕಾರವು ಒದಗಿದ್ದರ ಬಗ್ಗೆ ಸಮಾಜಕ್ಕೆ ವಸ್ತುಸ್ಥಿತಿಯ ನಿವೇದನ ಮಾಡುವದು ನನ್ನ ಕರ್ತವ್ಯವಾಗಿರುತ್ತದೆ.

ಮೇಲಿನ ಸಂಸ್ಥೆಯನ್ನು ಬಂದು ಮಾಡುವಂಥ ಅಪರಿಹಾರ್ಯ ಅಡಚಣೆಗಳು ಹ್ಯಾಗೆ ಉದ್ಭವಿಸಿದವೆಂಬದನ್ನು ಚನ್ನಾಗಿ ತಿಳಿದುಕೊಳ್ಳಬೇಕಾದರೆ ಸದರೀ ವಿದ್ಯಾಲಯದ ಪೂರ್ವೇತಿಹಾಸ ಪರಿಚಯವನ್ನು ಮತ್ತು ಅದು ಹ್ಯಾಗೆ ನಡೆದಿತ್ತೆಂಬದರ ಬಗ್ಗೆ ಅಲ್ಪ ಸ್ವಲ್ಪ ಮಾಹಿತಿಯನ್ನು ಮೊದಲಿಗೆ ಮಾಡಿಕೊಡುವದು ಅವಶ್ಯವದೆ. ಸ್ವಲ್ಪದರಲ್ಲಿಯೇ ಹೇಳಬೇಕಾದರೆ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಆ ಸಂಸ್ಥೆಯು ಭಿನ್ನ ಭಿನ್ನ ಸ್ವರೂಪವನ್ನು ಧರಿಸಿದ್ದರೂ ಅದು ಒಂದೇ ವ್ಯಕ್ತಿಯ ಪ್ರಯತ್ನದ ಸಂಬಂಧದಲ್ಲಿ ಅದರ ಸಾಂಪತ್ತಿಕ ಸ್ಥಿತಿಯು ಕೂಡಾ ಅದೇ ವ್ಯಕ್ತಿಯ ಸಾಂಪತ್ತಿಕ ಸ್ಥಿತಿಯ ಮೇಲೆ ಅವಲಂಬಿಸಿತ್ತು. ಆದ್ದರಿಂದ ಅದರ ವ್ಯವಸ್ಥಾಪಕರ ಆರ್ಥಿಕ ಸ್ಥಿತಿಯು ಅನಿಷ್ಟವಾಗುತ್ತ ನಡೆದಂತೆ ಸಂಸ್ಥೆಯು ಕುಂದುತ್ತ ನಡೆಯಿತು. ಆ ಸಂಸ್ಥೆಯ ಉತ್ಪಾದಕರ ಮನಸ್ಸಿನಲ್ಲಿ ಅದನ್ನು ತಮ್ಮ ಅಂಕಿತದಲ್ಲಿಯೇ ಇಡೋಣ ವಿಚಾರವು ಎಂದೂ ಇದ್ದಿದ್ದಿಲ್ಲ. ಆದರೆ ಅದನ್ನು ಆದಷ್ಟು ತೀವ್ರವೇ ಎಲ್ಲ ಬಗೆಯಿಂದಲೂ ಸಾರ್ವಜನಿಕ ಸಂಸ್ಥೆಯನ್ನಾಗಿ ಮಾಡುವದು ಅವರ ಸಂಕಲ್ಪವಿತ್ತು. ದೈವ ದುರ್ಬಲತೆಯಿಂದ ಅವರ ಮನೋಗತವು ನೆರವೇರದೇ ಇದ್ದದ್ದಕ್ಕೆ ಅವರಿಗೆ ಬಹಳೇ ವ್ಯಸನವೆನಿಸುತ್ತದೆ. ಈ ತರದ ಪ್ರಸಂಗವು ಬರಬೇಕಾದರೆ - ಆ ಸಂಸ್ಥೆಯ ಉತ್ಪಾದಕರಲ್ಲಿ ತಮ್ಮ ಕಾರ್ಯದ ಬಗ್ಗೆ ಬಹು ಜನ ಸಮಾಜದ ಸಹಾನುಭೂತಿಯನ್ನು ಸಂಪಾದಿಸುವ ಗುಣವು ಇಲ್ಲದ್ದಕ್ಕಾಗಲೀ ಅಥವಾ ಅವರ ವಿಚಾರಗಳ ಸಮಾಜದ ಸಧ್ಯಸ್ಥಿತಿಯ ದೃಷ್ಟಿಯಿಂದ ಬಹಳೇ ಉಚ್ಚತರದ್ದಾಗಿ ಅವರ ಕಾರ್ಯವು ಸಮಾಜದಿಂದ ಸಾಕಷ್ಟು ಬೆಂಬಲವು ಸಿಗದೇ ಅವರ ಪ್ರಯತ್ನವು ನಿಷ್ಫಲವಾಗಿರಬಹುದು. ನಿಜವಾದ ಕಾರಣವು ಏನೇ ಇದ್ದರೂ ಕರ್ನಾಟಕ ಜನ ಸಮಾಜದಿಂದ ವಿದ್ಯಾಲಯಕ್ಕೆ ಸಾಕಷ್ಟು ಸಹಾಯವು ಸಿಗಲಿಲ್ಲವೆಂಬುದೂ ಮತ್ತು ಸದರೀ ಸಂಸ್ಥೆಯು ಬಂದಾಗಬೇಕಾದರೆ ಇದೇ ಮುಖ್ಯವಾಗಿ ಕಾರಣೀಭೂತವಾಗಿದೆಯೆಂದೂ ಬಹು ದುಃಖದಿಂದ ಹೇಳಬೇಕಾಗಿದೆ.

ವಿದ್ಯಾಲಯವು ೧೯೨೦ ನೇ ಇಸ್ವಿಯಲ್ಲಿ ಸ್ಥಾಪಿತವಾಯಿತು. ನಾನು ಆಗ ಹೊಸದಾಗಿ ವಿಶ್ವವಿದ್ಯಾಲಯದಿಂದ ಹೊರಬಿದ್ದ ಕಾರಣ ಎಳೆದ ಹೊಸ ಪದವೀಧರರಂತೆ ಬರೀ ಧ್ಯೇಯದವನಾಗಿದ್ದೆನು. ನನಗೆ ನಾನಾ ಪ್ರಕಾರದ ಕರ್ತವ್ಯ ಕರ್ಮಗಳ ಕಲ್ಪನೆಗಳು ಬಂದರೂ ಕರ್ನಾಟಕವು ಅಂದಿನಿಂದ ಇಂದಿನ ವರೆಗೆ ಸ್ತ್ರೀ ಶಿಕ್ಷಣದಲ್ಲಿ ನಿರಾಶೆಯಾಗುವಷ್ಟು ಹಿಂದೆ ಉಳಿದಿದ್ದರಿಂದ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವ ವಿಚಾರವು ನನಗೆ ಹೆಚ್ಚು ಮನೋವೇದನೆಯಾಗಿ ಪರಿಣಮಿಸಿತು. ಸ್ವಲ್ಪ ದಿವಸಗಳಲ್ಲಿಯೇ ವಿದ್ಯಾಲಯದ ಸ್ಥಾಪನೆಯಾಯಿತು.

ಮೊದಲಿನ ೭|೮ ತಿಂಗಳವರೆಗೆ ವಿದ್ಯಾಲಯದ ಎಲ್ಲ ಖರ್ಚನ್ನು ನಾನೇ ನನ್ನ ಸ್ವಂತ ದುಡ್ಡಿನಿಂದ ಮಾಡಿದೆನು. ಆ ಮೇಲೆ ಸಮಾಜದ ಸಹಾನುಭೂತಿಯು ಕೆಲಮಟ್ಟಿಗೆ ದೊರಕಹತ್ತಿತು. ಆರ್ಥಿಕಸಹಾಯವು ಅಗದೀ ಸ್ವಲ್ಪ ಸಿಗಹತ್ತಿತು. ಮುಂದೆ ಎರಡು ವರ್ಷಗಳ ವರೆಗೆ ಹಾಗೂ ಹೀಗೂ ಸಾಗಿಸಿ ಕಡೆಗೆ ಸದರೀ ಸಂಸ್ಥೆಯನ್ನು ಅದರ ದಾತೃ ಜನರ ಹಿತಚಿಂತಕ ಜನರ ನಿಯಾಮಕ ಮಂಡಲದ ತಾಬೆಕ್ಕೆ ಕೊಟ್ಟುಬಿಟ್ಟೆನು. ಸುದೈವದಿಂದ ವ್ಯವಸ್ಥಾಪಕ ಮಂಡಲದವರು ಕೈ ಡಾಕ್ಟರ ಆರ್. ಎಚ್ ಸಿರಹಟ್ಟಿ ಇಂಥವರ ಸಹಾಯವನ್ನು ಸಂಪಾದಿಸಿ, ಅವರನ್ನು ಮಂಡಲದ ಅಧ್ಯಕ್ಷರನ್ನಾಗಿ ಮಾಡಿಕೊಂಡರು. ಸನ್ ೧೯೨೩-೨೪ ಇಸ್ವಿಯ ಅವಧಿಯಲ್ಲಿ ಸಂಸ್ಥೆಯು ಕೆಲವು ಅಡಚಣೆಗಳನ್ನು ಸೋಸುವದಲ್ಲದೆ ಸಮಾಜದ ಉದಾಸೀನವೃತ್ತಿಯ ಮೂಲಕ ಬಹಳ ಕಷ್ಟಪಡಬೇಕಾಯಿತು. ಆದಾಗ್ಯೂ ನಾನು ಸಂಸ್ಥೆಯನ್ನು ನಡಿಸುವ ದೃಢನಿಶ್ಚಯವನ್ನು ಎಳ್ಳಷ್ಟಾದರೂ ಕಡಿಮೆ ಮಾಡಲಿಲ್ಲ. ಸನ್ ೧೯೨೪ ನೇ ಇಸ್ವಿಯಲ್ಲಿ ಒಂದು ವಸತಿಗೃಹವು ಜೋಡಿಸಲ್ಪಟ್ಟು ಅದರ ಖರ್ಚು ಸಹಾ ಎಂದಿನಂತೆ ನನ್ನ ಮೈಮೇಲೆಯೇ ಬಿತ್ತು.

ಸನ್ ೧೯೨೪ ಇಸ್ವಿಯಲ್ಲಿ ಕೈ. ದಿವಾಣ ಬಹದ್ದೂರ ಶ್ರೀ. ಕೋ. ರೊದ್ದರಾಯರು ನಿಯಾಮಕ ಮಂಡಲದ ಅಧ್ಯಕ್ಷರಾದರು. ಅವರ ವ್ಯಕ್ತಿಮಹಾತ್ಮ್ಯದ ಮೂಲಕ ಸಂಸ್ಥೆಯ ಕಾರ್ಯಗಳು ಬಹಳೇ ಅಪೇಕ್ಷಯುಕ್ತ ರೀತಿಯಿಂದ ಸಾಗಹತ್ತಿದವು. ಇಲ್ಲಿಯ ವರೆಗೆ ಸಂಸ್ಥೆಯ ಅಭ್ಯಾಸಕ್ರಮವು ಮತ್ತು ಅದರ ಅಂತರ್ಗತ ವ್ಯವಸ್ಥೆಯೂ ರಾಷ್ಟ್ರೀಯ ಶಿಕ್ಷಣ ಪದ್ಧ [illegible] ದ್ದವು. ಅದೇ ವರ್ಷ ವಿ[illegible] ರ ಶಿಕ್ಷಣದ ಬಗ್ಗೆ ಮುಖ್ಯವ[illegible] ಸ್ವರೂಪವನ್ನು ಹೊಂದಿತು. [illegible] ೭ನೇ ಇಯತ್ತೆಗಳ ವರ್ಗಗಳು [illegible]. ಇದಲ್ಲದೆ ಮೊದಲಿನಂತೆ ವಿದ್ಯಾ[illegible]ರಿಗೂ ಬಾಲಿಕೆಯರಿಗೂ ಸಂ[illegible]ನೀತಿ ವೇದಲಾದ ಉಪಯುಕ್ತ ಶಿಕ್ಷಣವನ್ನು ಕೊಡುವ ವ್ಯವಸ್ಥೆಯು ಇದ್ದೇ ಇತ್ತು. ಸರಕಾರಿ ಎ. ವ್ಹಿ. ಸ್ಕೂಲಿಗೂ ವಿದ್ಯಾಲಯಕ್ಕೂ ಪರಸ್ಪರ ವಿರೋಧವು ಬರಬಾರದೆಂಬ ಉದ್ದೇಶದಿಂದ ಮೊದಲಿನ ೪ ಇಯತ್ತೆಗಳನ್ನು ತೆಗೆಯಲಿಲ್ಲ. ಪ್ರಾಥಮಿಕ ಶಿಕ್ಷಣದ ಬಗ್ಗೆ ವರ್ಗಗಳು ವಿದ್ಯಾಲಯಕ್ಕೆ ಜೋಡಿಸಲ್ಪಟ್ಟವು. ಹಾಯಸ್ಕೂಲಿನ ಇಯತ್ತೆಗಳ ಬಗ್ಗೆ ವಿಶ್ವವಿದ್ಯಾಲಯದವರು ತಮ್ಮ ಮಂಜೂರಿಯನ್ನು ಕೊಟ್ಟಿದ್ದರು. ಈ ಪ್ರಕಾರ ವಿದ್ಯಾಲಯದ ಭಾವೀ ಸ್ಥಿತಿಯು ಎಲ್ಲ ಪ್ರಕಾರದಿಂದಲೂ ಭರಭರಾಟಿಯದಾಗಬಹುದೆಂದು ಮನೋರಾಜ್ಯವನ್ನು ಮಾಡುತ್ತಿರುವಷ್ಟರಲ್ಲಿಯೇ ದಿವಾಣ ಬಹದ್ದೂರ ರೊದ್ದರಾಯರಂಥ ಧುರಂಧರ ಕಾರ್ಯವಾಹಕರು ಕಾಲವಶರಾಗುವ ದುರ್ಧರ ಆಪತ್ತು ಸಂಭವಿಸಿತು.

ಹುಜೂರಡಿಪುಟಿ ಕೆಲಸವನ್ನು ಮಾಡಿ ಸೇವಾನಿವೃತ್ತರಾದ ಮಿ. ಕೆ ಜಿ. ಗುಂಜೀಕರ ಇವರು ದಿವಂಗತ ದಿವಾಣ ಬಹದ್ದೂರರವರ ಕೆಲಸವನ್ನು ಕೈಕೊಂಡರು. ಮಿ. ಗುಂಜೀಕರ ಇವರಿಗೆ ಈಗಿನಂತೆ ಆಗ್ಯೂ ಸಹಾ ಕರ್ನಾಟಕದ [illegible] ಶಿಕ್ಷಣದ ದೈನ್ಯಾವಸ್ಥೆಯ ಬಗ್ಗೆ ಅತ್ಯ[illegible]ಕಳ ಎನಿಸುತ್ತಿತ್ತು. ಮುಂದೆ ಸ್ವಲ್ಪವಿ[illegible] ಅವರಿಗೆ ವಿದ್ಯಾಲಯಕ್ಕೆ ಸ್ಥಿರಸ್ವರೂಪವ[illegible]ಡಬೇಕೆಂಬುವ ನಾದವು ಹತ್ತಿದಂತಾಯಿತು. ಅವರು ಧಾರವಾಡದ ನಾಗರಿಕರನ್ನು ಮತ್ತು ಅನ್ಯಸ್ಥಳದವರನ್ನು ಸಂಸ್ಥೆಗೆ ಸಹಾಯಾರ್ಥವಾಗಿ ಪರಿಪರಿಯಿಂದ ಕೇಳಿದರು. ಆದರೆ ಜನಸಹಾಯವು ಸಾಕಷ್ಟು ಸಿಗಲಿಲ್ಲ ಮತ್ತು ಅವರ ಪ್ರಯತ್ನವು ಫಲಪ್ರದವಾಗುವ ಮೊದಲೇ ಅವರು ಕೆಲವು ಕೌಟುಂಬಿಕ ಅಡಚಣೆಗಳ ಮೂಲಕ ರಾಮದುರ್ಗ ಸಂಸ್ಥಾನದಲ್ಲಿ ಕಾರಭಾರಿಯ ಕೆಲಸವನ್ನು ಕೈಕೊಳ್ಳಬೇಕಾಯಿತು. ಇದರಿಂದ ಸಂಸ್ಥೆಗೆ ಅಪರಿಮಿತ ಹಾನಿಯಾಯಿತೆಂಬದನ್ನು ಬೇರೆ ಹೇಳಬೇಕಾಗಿಲ್ಲ.

ಈ ಸಂಸ್ಥೆಯ ಸಾಂಪತ್ತಿಕ ಸ್ಥಿತಿಯು ಎಂದೂ ಸಮಾಧಾನಕಾರಕವಾಗಿದ್ದಿಲ್ಲ. [illegible]ಲದ ವರೆಗೆ ನಾನು ಸಂಸ್ಥೆಯ ಸಲುವಾಗಿ [illegible] ೫೨೦೦ ರೂಪಾಯಿಗಳನ್ನು [illegible]. ಇಲ್ಲಿಯ ವರೆಗೆ ಜನಸಮಾಜದಿಂದ [illegible] ಆಗುತ್ತಿದ್ದ

ಸಹಾಯವು ಮುಂದೆ ಮುಂದೆ ಕುಗ್ಗುತ್ತ ಬಂತು. ೧೯೩೯ನೇ ಇಸ್ವಿಯ ಕೊನೆಗೆ ವಿದ್ಯಾಲಕ್ಕೆ ಸುಮಾರು ೧೦೦೦ ರೂಪಾಯಿ ಕೊರತೆಯಾಯಿತು ಇದನ್ನು ನಾನು ಸ್ವಂತ ಜಾಮೀನಿನ ಮೇಲೆ ಸಾಲವನ್ನು ತೆಗೆದು ಭರ್ತಿ ಮಾಡಬೇಕಾಯಿತು.

ಕಟ್ಟ ಕಡೆಗೆ ನನ್ನ ಸ್ವಂತದ ಆರ್ಥಿಕ ಸ್ಥಿತಿಯು ಕುಗ್ಗುತ್ತ ಬಂತು ಜವಾಬ್ದಾರರ ಸ್ಥಿತಿಯು ಸಧ್ಯಕ್ಕೆ ಎಷ್ಟು ನಿಕೃಷ್ಟವಾಗುತ್ತಿದೆಂಬುದು ಎಲ್ಲ ಜನರಿಗೂ ಗೊತ್ತಿದ್ದ ಮಾತೇ ಸರಿ ಅದರಲ್ಲಿಯೂ ಈ ವರ್ಷವಂತೂ ಅತ್ಯಂತ ದುಸ್ಸಹವಾಗಿದೆ ಇಂಥ ಪರಿಸ್ಥಿತಿಯಲ್ಲಿ ನಾನೊಬ್ಬನೇ ಸಂಸ್ಥೆಯನ್ನು ನಿರ್ವಹಿಸಿಕೊಂಡು ಹೋಗುವದು ಅಸಾಧ್ಯವಾಗಿದ್ದರೆ, ಅದರಲ್ಲಿ ವಿನಯವಿಲ್ಲ ಸಾರ್ವಜನಿಕ ಸಹಾಯದ ಎಲ್ಲ ಮಾರ್ಗಗಳನ್ನು ಶೋಧಿಸಲಿಕ್ಕೆ ನಾನು ನಿಯಾಮಕ ಮಂಡಳದ ಸದಸ್ಯರಿಗೆ ವಿನಂತಿ ಮಾಡಿಕೊಂಡೆನು ಮತ್ತು ನಾ ಮಾಡಿದ ತಪ್ಪಿಂದ ಸಲ್ಲತಕ್ಕ ಹಣವನ್ನು ಸಂಸ್ಥೆಗೆ ಕೊಟ್ಟು ೯-೩ ವರ್ಷಗಳ ವರೆಗೆ ಕುಟುಂಬ ನಿರ್ವಾಹ ಮಾಡಿಕೊಂಡು ಹೋಗಲಿಕ್ಕೆ ನನಗೆ ಸಾಮರ್ಥ್ಯವನ್ನು ಹೆಚ್ಚು ಮಾಡುವ ಬಗ್ಗೆ ಅರಿಕೆ ಮಾಡಿಕೊಂಡೆನು ಆ ಪ್ರಕಾರ ಅವರು ನನ್ನ ವಿನಂತಿಯನ್ನು ಮನ್ನಿಸಿ ತಮ್ಮ ಪ್ರಯತ್ನವನ್ನು ಕೊಟ್ಟರೂ ಸಹಾ ಕೊಡಕೊಳ್ಳುವದ ಸ್ಥಿತಿ ಕಿರಿದಲಿಕ್ಕೆ ಸಾಕಾಗಲಿಲ್ಲ ಇನ್ನೂ ಹೆಚ್ಚು ಬೇಕಾಯಿತು ಮತ್ತು ಅದರ ಅಭಾವದ ಮೂಲಕ ಸಂಸ್ಥೆಯನ್ನು ಬಂದಿಡಬೇಕಾಗುವ ಪ್ರಸಂಗವು ಬಂತು

ಈ ಪ್ರಕಾರ ಸಂಸ್ಥೆಯನ್ನು ಬಂದಿಡುವ ಪ್ರಸಂಗ ಬಂದಕೂಡಲೆ ನಾನು ಎಷ್ಟು ಭಗ್ನಮನೋರಥ (ವಿಷಣ್ಣ ಮನಸ್ಕ)ನಾಗಿರಬಹುದೆಂಬುದು ಬೇರೆ ಹೇಳುವ ಕಾರಣವಿಲ್ಲ. ನನ್ನ ವೈಯಕ್ತಿಕ ಸುಖವು ಅತ್ಯಂತ ಹೃದಯವಿದಾರಕವಾಗಿದ್ದರೂ ಇದೇ ಸಂಸ್ಥೆಯ ಉನ್ನತಿಗೋಸ್ಕರ ಅವಿಶ್ರಾಂತ ಶ್ರಮಪಟ್ಟು ದಿವಂಗತಳಾದ ನನ್ನ ಪ್ರಿಯಪತ್ನಿಯ ಆತ್ಮಕ್ಕೆ ಎಂಥ ಪ್ರಸಂಗದಲ್ಲಿ ಎಷ್ಟು ಖೇದವಾಗಿದ್ದೀತೆಂಬ ಕಲ್ಪನೆಯು ಬಂದ ಕೂಡಲೆ ನನ್ನ ದುಃಖವು ಸಹಿಸಲಸಾಧ್ಯವಾಗುತ್ತದೆ ಆದರೆ ಸರ್ವಜಗನ್ನಿಯಾಮಕನಾದ ಪರಮೇಶ್ವರನ ಅಗಾಧವಾದ ಲೀಲೆಯ ಮುಂದೆ ನನ್ನಂಥವನು ಮಾಡತಕ್ಕದ್ದಾದರೂ ಏನು? ದೇವರೇ ಸರ್ವಜ್ಞನೆಂದು ಬಗೆದು ನಂದಿಲ್ಲೊ ಮಾ ಪ್ರಯತ್ನದಿಂದ ಸಮಾಧಾನವನ್ನು ತಾಳಿದಯೊರ್ತು ಗತ್ಯಂತರವೇ ಇಲ್ಲ ನನ್ನ ದೌರ್ಬಲ್ಯದ ಬಗ್ಗೆ ಕ್ಷಮಿಸಬೇಕೆಂದು ಬಹುಜನ ಸಮಾಜಕ್ಕೆ ವಿನಂತಿಯನ್ನು ಮಾಡಿಕೊಳ್ಳುವ

ನಮ್ರ ಸಮಾಜ ಸೇವಕನಾದ
ಕಾರ್ಯದರ್ಶಿ
ಕ [illegible] ವಿ ಧಾರವಾಡ

ಶಿರಸಿ-ಸಿದ್ಧಾಪುರಗಳಲ್ಲಿ ತಗಾವಿ
ತಹಕೂಬಿಯ ಫಾರ್ಸ

—(೦)—

ಶಿರಸಿ-ಸಿದ್ಧಾಪುರ ತಾಲೂಕುಗಳ ಬಡರೈತರ ಸಹಾಯಕ್ಕಾಗಿ ೨೫,೦೦೦ ರೂಪಾಯಿ ತಗಾವಿ ಮಂಜೂರು ಮಾಡಿರುತ್ತದಷ್ಟೆ ಅಡಿಕೆಯ ಗಿಡಗಳಿಗೆ ಕೊಟ್ಟೆ ಕಟ್ಟಿಸಿ ಕೊಳ್ಳಲಿಕ್ಕೆ ಹಣವಿಲ್ಲದ್ದರಿಂದ ತಗಾವಿ ಕೊಡಬೇಕೆಂದು ರೈತರ ವಿನಂತಿ ಅರ್ಜಿಗಳಾದರೆ ಅಧಿಕಾರಿಗಳು ತೀರ್ವೆಯಷ್ಟೇ ಹಣ ಮಂಜೂರ ಮಾಡುವದಲ್ಲದೆ ಆ ಹಣವನ್ನು ರೈತರ ವಶಕ್ಕೆ ಕೂಡ ಕೊಡದೆ, ತೀರ್ವೆ ಜಮೆ ಬರೆದುಕೊಳ್ಳುತ್ತಿರುವರು !! ಹೇಗಿದೆ ಸರಕಾರದ ತಗಾವಿ ಫಾರ್ಸ !! ಅಡಕೇ ಗಿಡಗಳಿಗೆ ಕೊಟ್ಟೆ ಕಟ್ಟುವದು ಬಹುಶ್ರಮದ ಕೆಲಸ ಎಲ್ಲರೂ ಅದನ್ನು ಮಾಡಲಾರರು. ಇದಕ್ಕಾಗಿ ಹಣಕೊಟ್ಟು ಘಟ್ಟದ ಕೆಳಗಿನ ಜನರನ್ನು ಕೂಲಿ ಹಚ್ಚಬೇಕಾಗುತ್ತದೆ. ತಗಾವಿ ಹಣ ಸಿಕ್ಕದಿದ್ದರೆ ಕೊಟ್ಟೆಗಿಲ್ಲದೆ ಬೆಳೆಯುವ ರೈತರಿಗೆ ಕೊಟ್ಟೆ ಕಟ್ಟಿಸುವದಕ್ಕೆ ಹಣವೆಲ್ಲಿಂದ ಬರಬೇಕು? ಅರ್ಥಾತ್ ಮುಂದಿನ ವರ್ಷದ ಅಡಿಕೇ ಬೆಳೆಯು ನಾಶವಾಗುವದು. ಈ ವರ್ಷದಂತೆ ಮುಂದಿನ ವರ್ಷವೂ ರೈತರ ಸ್ಥಿತಿಯು ಅತ್ಯಂತ ಹೀನವಾಗುವದು ಅಧಿಕಾರಿಗಳು ರೈತರ ವಿಪನ್ನ ಸ್ಥಿತಿಯ ಕಡೆಗೆ ಸಹಾನುಭೂತಿ ಪೂರ್ವಕ ವಿಚಾರ ಮಾಡಿ ಅವರಿಗೆ ತಗಾವೀ ಹಣಸಿಕ್ಕುವಂತೆ ಮಾಡುವರೋ ?

ಮೂರು ದಿವಸ ಸತತವಾಗಿ
ಈಸಿದ ತರುಣನು.

ಇಂಗ್ಲಿಷ ಸಮುದ್ರದಲ್ಲಿ ನ್ಯೂಯಾರ್ಕದ ಲೇಡಿ ಪೆಟಿ ಶಿಸೀವಲ್ಲಳೆಂಬವಳು ೭೩ ತಾಸುಗಳವರೆಗೆ ಹಗಲು ರಾತ್ರಿ ಸತತವಾಗಿ ಈಸಿದ್ದಾಳೆ. ಇವಳನ್ನು ಹಿಂದೆ ಹಾಕಬೇಕೆಂದು ಕಲಕತ್ತೆಯ ಶ್ರೀ ಬೋಸನೆಂಬ ತರುಣನು ಯತ್ನಿಸುತ್ತಿದ್ದಾನೆ ಹೋದ ವರ್ಷ ಈತನು ಭಾಗೀರಥೀ ನದಿಯಲ್ಲಿ ೭೭ ತಾಸು ೨೧ ಮಿನಿಟು ಈಸಿದನು. ಈ ವರ್ಷ ಅದಕ್ಕೂ ಹೆಚ್ಚು ಪ್ರಖ್ಯಾತಿ ಹೊಂದಬೇಕೆಂದು ಈಸತೊಡಗಿದನು. ಸಾವಿರಾರು ಜನರನ್ನು ನೋಡಲಿಕ್ಕೆ ಹೋಗಿದ್ದರೆಂಬುದು ದೊಡ್ಡ ಮಾತಲ್ಲ. ಸತತವಾಗಿ ನೀರಿನಲ್ಲಿರುವದರಿಂದ, ರಕ್ತಾಭಿಸರಣವು ನಿಂತು, ರಕ್ತ ಹೆಪ್ಪುಗಟ್ಟಬಾರದೆಂದು, ಆತನಲ್ಲಿ ಚೈತನ್ಯ - ಚಟುವಟಿಕೆಯುಳಿಯಬೇಕೆಂದು ವಾದ್ಯಗಳನ್ನು ಬಾರಿಸುವರು, ಒಂದೊಂದು ಬಾರಿಸುವದು ಕಡೆಗೆ ತೋಫ ಹಾರಿಸಿದರು ಈತ ನೀರಿನಲ್ಲಿದ್ದು ೭೭ ತಾಸುಗಳಾದ ಬಳಿಕ ನಾಡಿಗಳು ಸ್ತಬ್ಧವಾಗಿ, ನಿಶ್ಚೇತನ ಹೊಂದಿ, ನೀರಲ್ಲಿ ಮುಳುಗಿದನು. ಕೂಡಲೆ ಹೊರಗೆ ತಂದು ಡಾಕ್ಟರರು ಉಪಾಯಗಳನ್ನು ನಡೆಸಿದ್ದಾರೆ ಎಚ್ಚರಿಕೆ ಬಂದಂತೆ ಸುದ್ದಿ ಬಂದಿಲ್ಲ.

ಉಗಿ ಬಂಡಿ ಹೋಗುವಾಗಲೇ
ರಿವಾಲ್ವರ ತೋರಿಸಿ ದರೋಡೆ

—(೦)—

ಬಂಗಾಳದಲ್ಲಿ ಗ್ಯಾರಿಪೂರದಿಂದ ಭೈರಾಬವೆಂಬಲ್ಲಿಗೆ ಉಗಿಬಂಡಿಯು ಗೌರಿಪೂರದಿಂದ ಹೊರಟ ಕೂಡಲೆ - ಪ್ರಯಾಣಿಕರ ಸೋಗಿನಿಂದ ಕೂತಂಥ ಮೂವರು ಡ್ರೈವರಿಗೆ ಮತ್ತು ಒಬ್ಬ ಪ್ರಯಾಣಿಕನಿಗೆ ರಿವಾಲ್ವರದ ಭಯ ತೋರಿಸಿ, ಅವರಲ್ಲಿದ್ದ ೨೮೦೦ ರೂಪಾಯಿಗಳನ್ನು ತಕ್ಕೊಂಡು ಬಂಡಿಯು ಸಿಗ್ನಲ ಕಂಬ ದಾಟುವದರೊಳಗಾಗಿ ಹಾರಿ, ಪಲಾಯನ ಹೇಳಿಸಿದರು.

ಒಂಭತ್ತು ಲಕ್ಷ ಹೋಗಿ ೯೦ ಲಕ್ಷದ
ಕೊರತೆ ಕೂಡುವದು

—(೦)—

ಮದ್ರಾಸ ಸರಕಾರದವರು ತಮ್ಮ ವೆಚ್ಚಕ್ಕೆ ಕತ್ರಿ ಹಾಕಿ, ಈ ವರ್ಷದಲ್ಲಿ ಒಂಭತ್ತು ಲಕ್ಷದಷ್ಟು ಕೊರತೆಯಾಗುವದೆಂದು ಅಂದಾಜು ಮಾಡಿದ್ದರು ಅದು ೯೦ ಲಕ್ಷವಾಗುವದೆಂದು ಈಗಾಗಲೆ ಭಯದೋರಿದೆ ಈ ಬಗ್ಗೆ ವಿಚಾರ ಮಾಡಲು - ಗವ್ಹರ್ನರಸಾಹೇಬರು ಮಂತ್ರಿಗಳೊಂದಿಗೆ ಆಲೋಚನೆ ನಡೆಸಿದ್ದಾರೆ.

ಏಳೇ ದಿವಸಗಳಲ್ಲಿ ಪೃಥ್ವೀ ಪ್ರದಕ್ಷಿಣೆ

—(೦)—

ಅಮೇರಿಕೆಯ ಈರ್ವರು ವಿಮಾನ ಮಾರ್ಗವಾಗಿ ಪೃಥ್ವೀ ಪ್ರದಕ್ಷಿಣೆಗೆ ಹೊರಟು ಏಳೇ ದಿವಸ ಪೂರಾ ಮುಗಿಯುವದರೊಳಗಾಗಿ ನ್ಯೂಯಾರ್ಕ ಪಟ್ಟಣ ಸೇರಿದರು. ಇವರು ಭೂಮಿಗೆ ಇಳಿಯುವಾಗ ಲಕ್ಷಾವಧಿ ಜನರು ಸೇರಿ, ಅತ್ಯಂತ ಹರ್ಷದಿಂದ ಇವರ ಸ್ವಾಗತ ಮಾಡಿದರು.

ಶ್ರೀ. ಹರಿರಾಯರ ೫೫ ದಿವಸಗಳ
ಅನ್ನತ್ಯಾಗ

—(೦)—

ವಿಶಾಖಾಪಟ್ಟಣದ ಶ್ರೀ. ಹರಿರಾಯರು ಅಲ್ಲಿಯ ತುರಂಗದಲ್ಲಿ ತಮ್ಮನ್ನು ಚಳವಳಿ ರೀತಿಯಿಂದ ನಡೆಸಿಕೊಳ್ಳುವದಿಲ್ಲೆಂದು ಅನ್ನ ವರ್ಜಮಾಡಿ, ೫೫ ದಿವಸಗಳಾದರೂ ತುರಂಗದವರು ಇವರಿಗೆ ಬ

ಕರ್ನಾಟಕ ಮಹಿಳಾ ವಿದ್ಯಾಲಯದ ೧೯೩೦-೩೧ ನೇ ಇಸ್ವಿಯ ಘೋಷವಾರೆಯು

(ಜೂನ ೧೯೩೧ರ ವರೆಗೆ)

೧೨೫ |-| ಹೋದ ವರ್ಷದ ಶಿಲ್ಕು.
೧|||= ||| ಚಾಲತೀ ಖಾತೆ
೨೭೫೫ ||= || ವರ್ಗಣಿ ಖಾತೆ.
೫೦೩ ವಸತಿಗೃಹದ ಖಾತೆ. ೪೬ |||-|೧
೩೭೭೭॥|೨ ಸಾಲದ ಖಾತೆ.
೯೭೭ ಸ್ಕಾಲರಸಿಪ್ಪ ಖಾ
೧೦೧೭ |- ಫೀ ಖಾತೆ.
೩೭ ಡೆಡ್‌ಸ್ಟಾಕ್ ಖಾತೆ. ೯೯೭|= ||
ಪಗಾರ ಖಾತೆ. ೩೧ ೩||| |೧
ಸ್ಟೇಶನರಿ ಖಾತೆ. ೩ ||-
ಟಪಾಲ ಖಾತೆ. ೨೫ |.
ವಾಚನಾಲಯ ಖಾತೆ. ೧೧೭ ॥ ||.
ಸಾದಿಲವಾರ ಖಾತೆ ೨೨೯ ||-|.
ಸಾಲೀ ಬಾಡಗಿ ಖಾತೆ. ೬೦೦
ಮುದ್ರಣ ಖಾತೆ. ೧೨೫ ||-
ಬಡ್ಡೀ ಖಾತೆ. ೧೦೦
ಪ್ರಯೋಗಶಾಲೆಯ ಖಾತೆ. ೨ =
೪೯೮೧,= ||| ೨

೪೯೮೧ = ||| ೨

ದೇಣೆ

೧೦೦೦ ೧೯೨೮-೨೯ ರಲ್ಲಿ ಸಾಲಾ ತೆಗೆದದ್ದು.
೩೭೭ ||೨ ಇವತ್ತಿನ ವರಿಗಿನ ಸಾಲಾ.

೧೩೭೭ ||೨

ಲೇಣೆ

೮೫೦ ಫರ್ನೀಚರ
೭೫ ಕಿಂಕೋಳ
೧೦೦ ಲೆಬೊರೆಟರಿ
೩೦೦ ವಾಚನಾಲಯ.
೭೫ ವಸತಿಗೃಹದಲ್ಲಿಯ ಪಾತ್ರೆಗಳು.
೨೫ ಅಂಗಡಿಯಲ್ಲಿಯ ಸಾಮಾನು.

೧೪೨೫
೪೭||= ||೧ ಶಿಲ್ಕು.

೧೩೭೭ || ೨

ಕಾರ್ಯದರ್ಶಿ
ಕ. ಮ. ವಿ. ಧಾ;

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

" ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ. "

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾತ್ಮಬೋಧಸಾರ ಸಂಗ್ರಹ	೧	,
೬	ದುರ್ಗಸಿಂಹನ ಪಂಚತಂತ್ರ, ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೧	,,
೧೨	ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇಮಮಂದಿರ	೮	,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹವೈದ್ಯಕ	೮	,,
೧೭	ಮೋಹಿನೀ ಸಿಂದಕರ ನಡಾವಳಿ	೮	,,
೪೦	ಕನ್ನಡ ಮಾತು ತಲೆಯೆತ್ತುವ ಬಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಲಿದಾಸ	೬	,,
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೬	,,
೨೪	ಬೇಗಮ್ ಸಮರು	೬	,,
೨೫	ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	,,
೩೨	ಶೇರಷಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	ಮೊಹರಮ್	೩	,,
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	,,
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	,
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ.
ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಕ್ರ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ.
ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ
೧—೪—೦

೪. ಶ್ರೀಹರ್ಷನೂ ಅವನ ನಾಟಕಗಳೂ [ನಾ. ವೆ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು.
೦—೧೦—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ [illegible] ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. No B. 1443.

[illegible]



ವಿಜಯ

[illegible]

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಶುಕ್ರವಾರ ತಾರೀಖು ೧೦ ನೇ ಜುಲೈ ೧೯೩೧ (ಸಂಚಿಕೆ [illegible]

The Asian Life Assurnance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರುಗಿ ಕೊಟ್ಟಿದ್ದು ೧೦,೦೦,೦೦೦

ಜಿಂದಿಗಿ ೫೩,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ್ ರಾಯಬಾಗಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು

ಬಿ. ಎಚ್. ಪಾಟೀಲ ಹಾವೇರಿಯ ಚೀಫ ಏಜಂಟರು.

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಹುಬ್ಬಳಿಯ ಏಜಂಟರು- ಶ್ರೀ. ಎನ್. ಎಮ್. ದೊಡ್ಡವಾಡ ಮತು ಶ್ರೀ. ಬಿ. ಟಿ. ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦ ರೂ. ಗಳನು ಕೊಡುವಂಥ **ಗೋಲ್ಡನ್** (ಸುವರ್ಣ) **ಪಾಲಿಸಿ**ಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ್ಸ ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಕ್ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ದಿ. ಚಕ್ರಾಣಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿ ಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೧೦-೭-೧೯೩೧ನೇ ಇಸ್ವಿ

ಕಾನಪೂರದ ದಂಗೆಯು ಉರಿಯು ಆರಿಲ್ಲ.

ಕಾನಪೂರದಲ್ಲಿ ಹಿಂದೂ ಮುಸಲಮಾನ ದಂಗೆಯಾಯಿತು. ಸರಕಾರದವರು ಕಮೀಶನ ನೇಮಿಸಿ, ಕಲೆಕ್ಟರರಿಗೆ ವರ್ಗ ಮಾಡಿ, ದಂಗೆಯ ಅನರ್ಥಕ್ಕೆ ಇವರು ಕಾರಣರೆಂದು ಅಪ್ರತ್ಯಕ್ಷವಾಗಿ ಒಪ್ಪಿದರು. ಕಾಂಗ್ರೇಸ ಕಮಿಟಿಯ ರಿಪೋರ್ಟು ಇಷ್ಟರಲ್ಲಿ ಹೊರಬೀಳತಕ್ಕದ್ದಿದೆ.

ದೊಡ್ಡ ದಂಗೆಯಾದ ಬಳಿಕ ಒಂದೆರಡು ಮರಿ ದಂಗೆಗಳಾದವು ಈ ದಂಗೆಗಳು ದಂಗೆಯ ಬೆಂಕಿಯು ಬೂದಿ ಮುಚ್ಚಿದ್ದಾಗಿರುತ್ತದೆಂದು ವ್ಯಕ್ತಮಾಡಿತು. ಸರಕಾರದವರು ಶಾಂತತಾಭಂಗದ ೧೪೪ ಕಲಮನ್ನು ಜಾಹೀರಮಾಡಿ, ತಮ್ಮ ವಿಚಾರದಿಂದ ದಂಗೆಯಾಗದಂತೆ ಭದ್ರೋಪಾಯ ಕೈಕೊಂಡಿದ್ದಾರೆ.

ಮೋಹರಮ ಬಂತು. ಪಂಜಾಗಳ ಮೆರವಣಿಗೆಯಾಗಬೇಕಾಯಿತು. ಮುಖ್ಯ ಬೀದಿಯಲ್ಲಿ ಒಂದು ಅಂಗಡಿಯ ಮುಂದಿನ ಬೀದಿಯಲ್ಲಿ ಒಂದು ತುದಿಯಿಂದ ಮತ್ತೊಂದು ತುದಿಯತನಕ ಇಬ್ಬದಿಯಲ್ಲಿಯೂ ಗಾಂಧಿ ಸೇವಾ ಸಮಿತಿಯವರು ಮಹಾತ್ಮರ ಪಟಕಟ್ಟಿದ ಪ್ರಕಟನೆಯನ್ನು ಹಚ್ಚಿದ್ದಾರೆ. ಇದರ ಬುಡದಲ್ಲಿ ತಮ್ಮ ಪಂಜಾ ಹೋಗಲಾರವು. ಅದನ್ನು ತೆಗೆಯಬೇಕೆಂದು ಮುಸಲಮಾನರು ಆಗ್ರಹ ಹಿಡಿದರು. ಕಾಯದೆಯಿಂದ ಇದನ್ನು ತೆಗೆಯಲಿಕ್ಕಾಗುವದಿಲ್ಲವಾದ್ದರಿಂದ, ಸರಕಾರದ ಉಪಾಯ ಸಾಗದಾಯಿತು ಹೀಗಾಗಿ, ತಾಬೂತಗಳು ನೀರು ಕಾಣದೆ, ಇದ್ದಲ್ಲಿಯೇ ಇವೆ. ನಡುವೆ ಇವನ್ನು ಹೊಳೆಗಾಣಿಸಬೇಕೆಂದು ಮುಸಲಮಾನರು ಆಲೋಚನೆ ಮಾಡಿದರು. ಕೂಡಲೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಪುನಃ ಶಾಂತತಾಭಂಗದ ಜಾಹೀರನಾಮೆ ಹಚ್ಚಿ ಗಾಂಧಿಸೇವಾಸಮಿತಿಯ ಪಟ ದಾಟುವಾಗ ಸರ್ತಿಗೆ ಐವರಿಗಿಂತ ಹೆಚ್ಚು ಮುಸಲಮಾನರಿರಬಾರದೆಂದು ಹುಕುಮು ಮಾಡಿದರು. ಸಾಹೇಬರ ಹುಕುಮು ಮುಸಲಮಾನರಿಗೆ ಸಮ್ಮತವಾಗಲಿಲ್ಲ.

ಅಲ್ಲಿ ೨೧೭ ಪಂಜಾಗಳುಂಟು. ಇವನ್ನು ದಿನಾಲು ದೇಶ ಭೂಷಗಳಿಂದ ಕಾಯ್ದುಕೊಂಡಿರುವದು ಎಲ್ಲರಿಗೂ ಶಕ್ಯವಲ್ಲ. ಆದರೆ ಪ್ರಕರಣವು ಹಟಕ್ಕೆ ಬಿದ್ದದರಿಂದ, ತಮಗೆ ಅನುಕೂಲವಾಗಿ ಎಂದರೆ ಗಾಂಧೀ ಸೇವಾಸಮಿತಿಯವರು ಪಟ ತೆಗೆಯುವ ತನಕ, ತಾಬೂತಗಳನ್ನು ಎಬ್ಬಿಸಬಾರದೆಂಬ ಮನೋಭಿಪ್ರಾಯವುಳ್ಳವರಾದರು ಆ ವಿಚಾರವಾಗಿ ಏಳು ಸಾವಿರ ಮುಸಲಮಾನರು ಸಾರ್ವಜನಿಕ ಸಭೆ ಕೂಡಿ, ಪಂಜಾಗಳನ್ನು ಎಬ್ಬಿಸಬಾರದೆಂದು ಗೊತ್ತುವಳಿ ಮಾಡಿದರು.

ಪಂಜಾಗಳು ಎಷ್ಟೇ ದಿವಸ ಕೂತರೂ, ಕಾಯದೆಯಿಂದ ಅಶಕ್ಯವಾದ ಕೃತ್ಯ ಶಕ್ಯವಾಗಲಾರದು. ಹಿಂದೂ ಜನರು ಸಹಜವಾಗಿ ಜಗಳದ ಪಟವನ್ನು ತೆಗೆದು ಹಾಕಬಹುದಾಗಿತ್ತು. ಅದರಲ್ಲಿ ಮಹಾತ್ಮರ ದ್ವೇಷವೇ ಮುಖ್ಯ ಕಾರಣವಾದ್ದರಿಂದ, ಹಿಂದೂ ಜನರು ಅದನ್ನು ತೆಗೆಯದಾಗಿದ್ದಾರೆ. ಈ ರೀತಿಯಾಗಿ ಅಲ್ಲಿಯು ಹಿಂದೂ ಮುಸಲಮಾನ ಬೆಂಕಿಯು ಆರದಾಗಿದೆ.

ಕಾನಪೂರದಲ್ಲಿ ಸಿಯಾ ಸುನಿಗಳ ನಡುವೆ

ದಂಗೆ

ತಾಬೂತ ಇಡಬೇಕೆಂಬದಾಗಿ ಸಾರ್ವಜನಿಕ ಸಭೆಯಲ್ಲಿ ಠರಾವಾದ ನಂತರ-ಸಿಯಾ ಮುಸಲಮಾನರು ತಾಬೂತಗಳ ವಿಸರ್ಜನೆ ಮಾಡಬೇಕೆಂದು ಗೊತ್ತುಮಾಡಿದರು. ಆದರೆ ಸುನಿ ಜನರು ಇದನ್ನು ವಿರೋಧಿಸಿ, ತಾಬೂತಗಳು ಸ್ಥಳ ಬಿಟ್ಟು ಕದಲದಂತೆ ಪಿಕೆಟಿಂಗ ಪ್ರಾರಂಭಿಸಿದರ; ಆಗ ಹೊಡದಾಟ ಹತ್ತಿತ್ತು. ಪೋಲೀಸರು ಆಗಿಂದಾಗ ಪಿಕೆಟಿಂಗ ಮಾಡುವಂಥವರನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ನ್ಯಾಯನಿರ್ಣಯವು ಎವೆ ಮುಚ್ಚಿ, ಎವೆ ತೆಗೆಯುವದರೊಳಗಾಯಿತು. ಕೆಲವರಿಗೆ ದಂಡ, ಕೆಲವರಿಗೆ ಶಿಕ್ಷೆಯಾಯಿತು. ದಂಡವಾದವರು ದಂಡಕೊಡದೆ ತುರಂಗಕ್ಕೆ ಹೋದರು. ಹೊಡೆದಾಟದಲ್ಲಿ ಅನೇಕರು ಘಾಯವಾದರು. ಪೋಲಿಸ ಬಂದೋಬಸ್ತಿನಲ್ಲಿ ಸುನೀ ಮುಸಲಮಾನರ ತಾಬೂತಗಳು ವಿಸರ್ಜನೆ ಹೊಂದಿ ಬಂದವು.

ಹೈದರಾಬಾದಿನ ದಿವಾನ ಮಹಾರಾಜಾ ಕಿಶನಪ್ರಸಾದರ ಮುಸಲಮಾನ ಹೆಂಡತಿಯು ಪರಲೋಕವಾಸಿಯಾದಳು.

ಮೋರವಿ ಸಂಸ್ಥಾನದಲ್ಲಿ ಸ್ವರಾಜ್ಯ ಚಳವಳಿಯನ್ನು ಮುರಿಯುವ ದಬ್ಬಾಳಿಕೆ.

—(೦)—

ಈ ಸಂಸ್ಥಾನದ ಅರಸರು ಪ್ರಜಾಹಿತೈಷಿಗಳಾಗಿದ್ದರು. ಪ್ರಜರು ಸ್ವರಾಜ್ಯ ಬೆಂಕಿಹತ್ತಿದ ಕಾಡಲಿ: ನೀರೊಳಗೆ ಮುಣುಗುತ್ತಿದ್ದ ಮಂಗವು ಮರಿಯನ್ನೇ ಕೆಳಗೆ ಹಾಕುವಂತಾಗಿರುತ್ತದೆ. ಅರಸರ ಆಜ್ಞೆಯಿಂದ ಅಲ್ಲಿ ಅನೇಕ ಅತ್ಯಾಚಾರಗಳೂ, ಹಿಂಸೆಗಳೂ ನಡೆಯುತ್ತವೆ. ದಬ್ಬಾಳಿಕೆಯ ನಿಜಪ್ರಕಾರ ತಿಳಕೊಳ್ಳಲಿಕ್ಕೆ ಹೋದ ಟಾಯಿಮ್ಸದ ಪ್ರತಿನಿಧಿಯನ್ನು ಅರಮನೆಗೆ ಕರೆಕೊಂಡುಹೋದರು. ಫ್ರೀಪ್ರೆಸದ ಪ್ರತಿನಿಧಿಯ ಮೇಲೆ ನಜರಬಂದಿಯ ಕಾವಲವಿಟ್ಟರು. ಸ್ವರಾಜ್ಯದವರನ್ನು ಹಿಡಿಯುವದು, ತುರಂಗದಲ್ಲಿ ಹಾಕಿ ಅನ್ನನೀರು ಕೊಡದಿರುವದು, ಬೇರೆ ರೀತಿಯಿಂದ ಹಿಂಸಿಸುವದು ಮತ್ತು ಮುಂಬಯಿ ಪೋಲೀಸರಂತೆ ಅಡವಿಯಲ್ಲಿ ಬಿಡುವದು ನಿತ್ಯದ ಕ್ರಮ ಮತ್ತು ಸಾವಾಗಿರುತ್ತದೆ. ಮನೆಮನೆಗೆ ಹೋಗಿ ರಾಷ್ಟ್ರೀಯ ನಿಶಾನೆಗಳನ್ನೇ ಜಪ್ತ ಮಾಡುವರು. ಖಾದಿಯ ಮೇಲಂತೂ ಸಂಪೂರ್ಣ ವಕ್ರದೃಷ್ಟಿಯು. ಪರಸ್ಥಳದ ಓರ್ವ ಭಗಿನಿಯು ಖಾದಿಯುಟ್ಟು, ರೇಲ್ವೆಯಿಂದ ಅಲ್ಲಿಗೆ ಹೋದಳು ಸ್ಟೇಶನದಲ್ಲಿಯೇ ಪೋಲೀಸರು ಇವಳನ್ನು ಬೆತ್ತದಿಂದ ಹೊಡದು ಮತ್ತೊಂದು ಬಂಡಿಯಿಂದ ಇವಳನ್ನು ಸಂಸ್ಥಾನದ ಹದ್ದುದಾಟಿಸಿದರು.

ಮದ್ಯಪಾನಕ್ಕೆ ಮದ್ರಾಸದ ಮಂತ್ರಿಯು ಬೆಂಬಲ

ಮದ್ರಾಸ ಇಲಾಖೆಯ ವಿದ್ಯಾಖಾತೆಯ ಮಂತ್ರಿಯವರ ಅಧಿಕಾರದಲ್ಲಿಯೇ ಅಬಕಾರಿ ಖಾತೆಯುಂಟು. ೨೦ ವರ್ಷಗಳಲ್ಲಿ ಮದ್ಯಪಾನ ನಿಲ್ಲಿಸಬೇಕೆಂಬ ಸರಕಾರದ ಮಹತ್ವಪೂರ್ಣದ ಕಥೆಯಾಯಿತು ಈಗಂತೂ ಮಂತ್ರಿಯಾದ ದಿವಾನಬಹಾದ್ದೂರ ಕುಮಾರಸ್ವಾಮಿ ರಡ್ಡಿಯವರು ಬಲತ್ಕಾರ ಮಾಡಿ, ಜನರಿಗೆ ಕುಡಿಯಬೇಡಿರೆಂದು ಆಗ್ರಹಪಡಿಸುವದರಿಂದಾವ ಪರಿಣಾಮವಾಗುವದಿಲ್ಲ. ಶಿಕ್ಷಣದಿಂದಲೇ ಕುಡಿತವನ್ನು ನಿಲ್ಲಿಸಬೇಕೆಂಬ ಬಹು ದೊಡ್ಡ ಮಾತನ್ನು ಹೇಳಲಾರಂಭಿಸಿದ್ದಾರೆ ಅಮೇರಿಕೆಯು ಶಿಕ್ಷಣದ ಶಿಖರವೇರಿದೆ ಆದರೂ ಆ ಸರಕಾರದವರು ಕಾಯದೆ ಮಾಡಿದರು. ಹಿಂದುಸ್ಥಾನದಲ್ಲಿ ಲೋಕಶಿಕ್ಷಣಕ್ಕೆ ಪ್ರಾರಂಭವೇ ಆಗಿಲ್ಲ. ಈಗ ಪ್ರಾರಂಭವಾದರೂ ಮುಗಿಯಲಿಕ್ಕೆ ನೂರಾರು ವರ್ಷಗಳಾದರೂ ಬೇಕು: ಆ ಪರ್ಯಂತರ ಜನರು ಕುಡಿ ಕು

ಮ.ತ.. ಎಲ್ಲಿಯೂ ಶೆರೆ ಶೇಂದಿಯ ಮಾರಾಟವಾಗಬಾರದೆಂದು ಕಾಯಿದೆ ಮಾಡಿ, ಅಂಗಡಿಗಳ ಬಾಗಿಲಕ್ಕೆ ಮುಳ್ಳು ಬಡಿದರೆ – ಜನರಲ್ಲಿ ಕುಡಿಯುವರು; ಸಂತೆಯಲ್ಲಿ ಯಾವದೊಂದು ಪದಾರ್ಥವು ಮಾರಾಟಕ್ಕೆ ಬಂದರೇ ಜನರು ಕೊಳ್ಳುವರು. ಗಡಂಗವದೆಂದು ಕುಡುಕರು ಅತ್ತ ಹೋಗುವರು. ಅದರ ಬಾಗಿಲು ಹಾಕಿದ ಬಳಿಕ ಇಲ್ಲೇಕೆ ಹೋಗುವರು. ಕಳ್ಳ ಸಾಗಬಾರದೆಂದು ಪಿಸಲಕೋಡದಿರುವಂತೆ ಜನರು ವಿವೇಕಭ್ರಷ್ಟರಾಗಿ, ದರಿದ್ರರಾಗಬಾರದೆಂದು ಕಾಯಿದೆ ಇದೆ. ಹಿಂದೂ ಧರ್ಮವು ಈ ತರದ ಕಾಯಿದೆ ಮಾಡಿರುತ್ತದೆ.

ಧಾರವಾಡ ತಾ. ಕಾಂಗ್ರೆಸ ಕಮಿಟಿಯ
ಕಾರ್ಯಕಾರಿ ಮಂಡಳ ಸಭೆ

೩-೭-೩೧

ಮಹತ್ವದ ಗೊತ್ತುವಳಿಗಳು

“ಗದಗಿನ ಶ್ರೀ. ಬಾಬು ಮಣಕೋಜಿ ತಿರುಮಲೆ ಎಂಬ ಸ್ವಯಂಸೇವಕನು ಧಾರವಾಡಕ್ಕೆ ಪಿಕೇಟಿಂಗು ದಳಕ್ಕೆ ಬಂದ ಕಾಲಕ್ಕೆ ಗದಗಿನಲ್ಲಿ ಅವನ ತಾಯಿಗೆ ಮಾರಿಬೇನೆ ಬಂದ ಸುದ್ದಿಯನ್ನು ಕೇಳಿ ಅವನು ಅಲ್ಲಿಗೆ ವಾಪಸು ಹೋದ ಕಾಲಕ್ಕೆ ಆ ಮಾರೀ ಬೇನೆಗೆ ತುತ್ತಾದನು. ಹೀಗೆ ವೀರಸ್ವರ್ಗವನ್ನು ಪಡೆದ ಆ ವೀರಾತ್ಮನ ಆತ್ಮಕ್ಕೆ ಶಾಂತಿಯನ್ನೀಯಲೆಂದು ಈ ಕಮಿಟಿಯು ಪರಮಾತ್ಮನನ್ನು ಪ್ರಾರ್ಥಿಸುತ್ತದೆ."

ಅಲ್ಲಿ ಪಿಕೇಟಿಂಗು ನಡೆದ ಕಾಲಕ್ಕೆ ಬಟ್ಟೆ ವ್ಯಾಪಾರಿಗಳಿಂದ ನಿಮಂತ್ರಿತ ಪ್ರತಿಷ್ಠಿತ ನಾಗರಿಕರ ಸಭೆಯವರು ವ್ಯಾಪಾರಿಗಳ ಹಿತನಾಗಬೇಕು ಕಾಂಗ್ರೆಸ್ಸಿನ ಧ್ಯೇಯ ಸಾಧಿಸಬೇಕೆಂದು ನೇಮಿಸಿದ ಉಪಮಂಡಳದವರು ನಿರ್ಣಯವನ್ನು ೩-೭-೩೧ನೇ ದಿನವೇ ಕೊಡತಕ್ಕವರಿದ್ದರು. ಅವರು ಆವತ್ತು ಕೊಡಲಿಲ್ಲವಾದುದರಿಂದ ಅದಕ್ಕಾಗಿ ಮತ್ತೆ ೪-೭-೩೧ನೇ ದಿನ ಮೀಟಿಂಗು ಕೂಡಿತ್ತು.

ಗುಂಡಿನಿಂದ ಮಗನು ಸತ್ತದ್ದರ ದೆಸೆಯಿಂದ ಸರಕಾರದ ಮೇಲೆ ದಾವೆ.

—(೦)—

ಸೊಲ್ಲಾಪೂರದಲ್ಲಿ ಲಷ್ಕರೀ ಕಾಯದೆಯ ಅಮಲಿನ ಪ್ರಾರಂಭದಲ್ಲಿ ಉಪ್ಪರಿಗೆಯ ಮೇಲೆ ನಿಂತಿದ್ದ ತನ್ನ ಮಗನು ಗುಂಡು ಬಡಿದು ಸತ್ತನು. ಈತನ ಮರಣದ ಹಾನಿ ೫೨೦೦ ರೂಪಾಯಿಗಳನ್ನು ಸರಕಾರದಿಂದ ಕೊಡಿಸಬೇಕೆಂದು ಶ್ರೀ. ರಾನಡೆ ಎಂಬುವರು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ.

ಕರ್ನಾಟಕ ಮಹಿಳಾ ವಿದ್ಯಾಲಯ

ನಿಯಾಮಕ ಮಂಡಲದವರು ನಿರ್ಣಯಿಸಿರುವದೇನೆಂದರೆ –

(೧) ಲೆಕ್ಕಗಳು ಮಂಜೂರ ಮಾಡಲ್ಪಟ್ಟವೆ.

(೨) ಕೆಳಗೆ ಕಾಣಿಸಿದ ದೇಣಿಗೆಗಳನ್ನು ನಿಕಾಲಿ ಮಾಡತಕ್ಕದ್ದದೆ –

ರಾ. ಹುಬ್ಬಳ್ಳೀಕರರಿಗೆ ೨೫ ರೂಪಾಯಿ –
" ಹಲ್ಯಾಳಕರರಿಗೆ ೭೪ ರೂಪಾಯಿ – "

ಇದರ ಪೈಕಿ ೨೫ ರೂಪಾಯಿಗಳನ್ನು ಕೂಡಲೇ ಕೊಟ್ಟು ಬಿಡತಕ್ಕದ್ದು. ೭೪ ರೂಪಾಯಿ ದೇಣಿಯನ್ನು ಸಭೆಯ ಮುಂದೆ ಹಾಕತಕ್ಕದ್ದು. ಮತ್ತು ೧೯೩೨ ನೇ ಇಸ್ವಿಯ ಫೆಬ್ರುವರಿ ತಿಂಗಳ ಮೀಟಿಂಗಿನಲ್ಲಿ ಅದರ ಬಗ್ಗೆ ವಿಚಾರ ಮಾಡತಕ್ಕದ್ದು.

(೩) ಶ್ರೀ. ಕುಂಭಕೋಣರವರು ತಯಾರಿಸಿದ ರಿಪೋರ್ಟನ್ನು ಓದಿತು – ಅದನ್ನು ಲೆಕ್ಕಪತ್ರಗಳ ಮತ್ತು ಅಸ್ತಿ ಬೋಜಾಪತ್ರಿಕೆಗಳ ಸಂಗತಿ ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧ ಮಾಡತಕ್ಕದ್ದು ಮತ್ತು ಅಸ್ತಿ ಕಿಮತ್ತಿನ ಯಾದಿಯಲ್ಲಿ ಅದರ ಮೂಲ ಕಿಮತ್ತನ್ನು ತೋರಿಸತಕ್ಕದ್ದು –

(೪) ಕಾರ್ಯದರ್ಶಿಗಳಾದ ಶ್ರೀ. ಕುಂಭಕೋಣರವರು ದುಡ್ಡಿನ ಅಡಚಣೆಯ ಮೂಲಕ ವಿದ್ಯಾಲಯವನ್ನು ಬಂದ ಇಡಬೇಕೆಂದು ಆಲೋಚಿಸಿದ್ದಕ್ಕೆ ಮಂಡಲದವರು ಅತ್ಯಂತ ದುಃಖದಿಂದ ತಮ್ಮ ಅನುಮತಿಯನ್ನು ಕೊಟ್ಟಿರುವರು.

(೫) ಸಾಕಷ್ಟು ದುಡ್ಡಿನ ಸೌಕರ್ಯವಿಲ್ಲದ್ದರಿಂದ ಕಾಯಂ ವಿದ್ಯಾಲಯವನ್ನು ಒಂದು ವರ್ಷದ ಮುಟ್ಟಿಗೆ ಬಂದು ಇಡತಕ್ಕದ್ದು –

(೬) ಸದರೀ ಸಂಸ್ಥೆಯ ಮಿಳಕತ್ತನ್ನು ಮಾರಕೂಡದು. ಆದರೆ ಅದನ್ನು ನಿಯಾಮಕ ಮಂಡಲದವರು ಸಂಸ್ಥೆಯನ್ನು ಪುನಃ ಸುರುವು ಮಾಡುವ ಕಾಲಕ್ಕೆ ಬೇಡಿದರೆ ಕೊಡುವ ಕರಾರದಿಂದಾ ಶ್ರೀ. ಕುಂಭಕೋಣಯವರಿಗೆ ನಿಕ್ಷೇಪವೆಂದು ಒಪ್ಪಿಸತಕ್ಕದ್ದು.

(೭) ನಿಯಾಮಕ ಮಂಡಲದವರು ೧೯೩೨ನೆ ಇಸ್ವಿ ಫೆಬ್ರುವರಿ ತಿಂಗಳ ಮಧ್ಯಭಾಗದಲ್ಲಿ ಸಭೆಗೂಡಿ ಸದರೀ ಸಂಸ್ಥೆಯನ್ನು ಜೂನ ೧೯೩೨ರಿಂದ ಸುರುವು ಮಾಡುವದನ್ನು ಕುರಿತು ವಿಚಾರ ಮಾಡತಕ್ಕದ್ದು. ನಕ್ಕೀ ತಾರೀಖನ್ನು ಸೆಕ್ರೆಟರಿಯವರು ಚೇರಮನ್ನರ ಸಲಹೆಯ ಮೇರೆಗೆ ನಿಶ್ಚಯಿಸಬೇಕು:

(೮) ಈ ಠರಾವುಗಳನ್ನು ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧಪಡಿಸಿ – ಅವುಗಳ ಒಂದೊಂದು ಪ್ರತಿಯನ್ನು ಎಜ್ಯುಕೇಶನಲ್ ಇನ್ಸಪೆಕ್ಟರರಿಗೂ ಮತ್ತು ಮುಂಬಯಿ ವಿಶ್ವವಿದ್ಯಾಲಯದವರಿಗೂ ಕಳಿಸಿ ಕೊಡಲಿಕ್ಕೆ ಶ್ರೀ. ಕುಂಭಕೋಣ ಇವರಿಗೆ ಅಧಿಕಾರವನ್ನು ಕೊಟ್ಟದೆ.

ಕಾರ್ಯದರ್ಶಿ
ಕ. ಮ. ವಿ. ಧಾರವಾಡ –

ಒಬ್ಬ ಪ್ರಿನ್ಸಿಪಾಲರು ಗುಡಿ ಕಟ್ಟಿದರೆ ಇನ್ನೊಬ್ಬರು ತಿರುವಿಟ್ಟರು.

—(೦)—

ಕಾಯದೆಭಂಗದ ಚಳವಳಿಯಲ್ಲಿ ಸೇರುವದಿಲ್ಲೆಂದು ಮುಚ್ಚಳಿಕೆ ಬರೆಕೊಟ್ಟು ಕಾಲೇಜಕ್ಕೆ ಬರಬೇಕೆಂದು ಗುಜರಾಥ ಕಾಲೇಜದ ಪ್ರಿನ್ಸಿಪಾಲರಾದ ಮಿ. ಶಂಪಲೆ ಸಿರಾದಸಾಹೇಬರು ನೋಟೀಸು ತೆಗೆದಿದ್ದರಷ್ಟೆ; ಇವರ ತರುವಾಯ ಅಸಾವು ಕಾಲೇಜದ ಪ್ರಿನ್ಸಿಪಾಲರು ಕಾಲೇಜ ಸೇರುವಂಥವರು ಸಾದಾ ಮುಚ್ಚಳಿಕೆ ಬರೆಕೊಡಬೇಕೆಂದೂ; ಕಾಯದೆಭಂಗದಲ್ಲಿ ಶಿಕ್ಷೆಯಾದವರು ೫೦ ರಿಂದ ೧೦೦ ರೂಪಾಯಿ ತನಕ ನಗದು ಜಾಮೀನು ಕೊಡಬೇಕೆಂದೂ ಸರಕ್ಯುಲರ ತೆಗೆದಿದ್ದಾರೆ.

ವಿವಿಧ ವಿಷಯಗಳು

—(೦)—

ಪ್ರತಿಯೊಬ್ಬ ಮೆಂಬರರು ತಾವು ಕಳೆದ ಮೂರು. ನೂರುವರೀ ವರ್ಷಗಳಲ್ಲೇನು ಕೆಲಸ ಮಾಡಿದೆವೆಂಬದನ್ನು ಆತ್ಮನಿರೀಕ್ಷಣೆಯಿಂದಲೇ ತಿಳಕೊಳ್ಳಬೇಕು. ತಾವೇನು ಕೆಲಸ ಮಾಡಿದ್ದೆಂಬದನ್ನು ವಿಸ್ತಾರವಾಗಿರದಿದ್ದರೂ, ಸಂಕ್ಷಿಪ್ತವಾಗಿಯಾದರೂ ಬರೆದು, ಅದನ್ನು ಮುದ್ರಿಸಿ ಮತದಾರರ ಮುಂದಿಡಬೇಕು. ಚುನಾವಣೆಯ ಕಾಲದಲ್ಲಿ ಟಾಂಗ, ಮೋಟಾರ. ಮತ್ತು ತಮ್ಮ ಚಿನ್ಹವಾದ ಆನೆ ಕುದುರೆ ಮುಂತಾದವುಗಳ ದೆಸೆಯಿಂದ ನೀರಿನಂತೆ ದ್ರವ್ಯ ಹರಿಸುವರು. ತಾವು ಮಾಡಿದ ಕೆಲಸವು ಮತದಾರರಿಗೆ ಸ್ಪಷ್ಟವೆನಿಸಿದರೆ- ವಿನಹ್ಕಕಾರಣ ಕಾಸಿನ ವೆಚ್ಚವಿಲ್ಲದೆ ಚುನಾವಣೆಯಾಗುವದು. ಹೋದ ಆರಿಸುವಿಕೆಯಲ್ಲಿ ಹೀಗೊಬ್ಬರು ಆರಿಸಿಬಂದಿದ್ದಾರೆ. ತಾವು ಊರವರು; ಮತದಾರರು ತಮ್ಮನ್ನು ಬಲ್ಲರು. ಅಂದಬಳಿಕ ತಮ್ಮ ಪರಾಕ್ರಮದ ಪರಾಳನ್ನು ಪ್ರಕಟನೆಯಿಂದ ಅವರ ಮುಂದೇಕೆ ಹೊಗಳಿಕೊಳ್ಳಬಾರದು ?

ಹಳ್ಳ ಹಳ್ಳಿಯನ್ನು ಹಾಳು ಮಾಡಿತು.

ಶ್ರೀ. ಭುಜಂಗಸ್ವಾಮಿಯವರಿಂದ ಪ್ರಸಿದ್ಧವಾಗಿರುವ ಲೋಕಾಪೂರದಲ್ಲಿ ೧೫ ದಿವಸಗಳ ಹಿಂದೆಯಾದ ಮಳೆಯಿಂದ ಹಳ್ಳಕ್ಕೆ ದೊಡ್ಡ ತೆರೆವು ಒಂದು ಕೆರೆವಿನಿಂದ ಊರ ಹತ್ತರದ ಪೂಲು ಬಿತ್ತು. ಕೂಡಲೆ ಊರೊಳಗೆ ನೀರು ಹೊಕ್ಕು ೨೫೦ ಮನೆಗಳು ನೆಲಸಮವಾದವು. ದನಕರುಗಳೂ, ಇಬ್ಬರು ಸ್ತ್ರೀಯರೂ ಸತ್ತಂತೆ ವರ್ತಮಾನ ಬಂದಿದೆ.

ಮಹಾತ್ಮರು ಲಂಡನಕ್ಕೆ ಹೋಗುವರು.

ಹಿಂದುಸ್ಥಾನದಲ್ಲಿ ಸ್ಥಾನಿಕ ಅಧಿಕಾರಿಗಳು ಒಡಂಬಡಿಕೆಯ ಶರ್ತುಗಳ ವಿರುದ್ಧ ನಡೆದು, ಶಾಂತತಾಭಂಗವಾಗುವಂಥ ಅಪಕೃತ್ಯಗಳನ್ನು ನಡೆಸಿದರೆ-ಲಂಡನಕ್ಕೆ ಹೋಗುವದಿಲ್ಲೆಂದೂ, ಈ ಅನ್ಯಾಯ ಅಪಕೃತ್ಯಗಳ ವಿಚಾರ ಮಾಡಲು-ಪಂಚರನ್ನೊಳಗೊಂಡ ಕಮೀಟಿ ನೇಮಿಸಬೇಕೆಂದೂ, ಮಹಾತ್ಮರು ಲಾರ್ಡ ವಿಲಿಂಗಡನಸಾಹೇಬರಿಗೆ ಪತ್ರ ಬರೆದರು. ಸಾಹೇಬರು ಮಹಾತ್ಮರಿಗೆ ಸಮಾಧಾನವೆನಿಸುವಂಥ ಉತ್ತರ ಬರೆದಿದ್ದಾರೆ. ನಾವು ಪಂಚರನ್ನು ನೇಮಿಸುವದಿಲ್ಲ. ಆದರೆ ಒಡಂಬಡಿಕೆಯ ಕರಾರುಗಳನ್ನು ಶಬ್ದಶಃ ಪಾಲಿಸುವಂತೆ-ಸಾಹೇಬರು ಆಶ್ವಾಸನ ಕೊಟ್ಟಿದ್ದಾರೆ. ಅಧಿಕಾರಿಗಳು ಕೆಳ ಕೆಳಗಿನವರಾಗುವಂತೆ, ಅವರಲ್ಲಿ ಉದ್ಧಟತನವು ಹೆಚ್ಚೆಚ್ಚು ಆಗುತ್ತ ಹೋಗುತ್ತದೆ. ಲಾರ್ಡ ಸಾಹೇಬರು ಎಷ್ಟೇ ಸೌಜನ್ಯದ [illegible] ಹೇಳಲಿ ರೈತರ ಕೂಡ ಪ್ರತ್ಯಕ್ಷ ಸಂಬಂಧವಿದ್ದವರು ಕರಡಿಯಂತೆ ಕಟ್ಟಾಡಿಸುವದಕ್ಕೆ ಮನಸ್ವೆಚ್ಛ ಜನ ಲಜ್ಜೆಯ ಪರಿವೆ ಮಾಡುವದಿಲ್ಲ.

ಮಹಾತ್ಮರು ಲಾರ್ಡ ವಿಲಿಂಗಡನಸಾಹೇಬರನ್ನು ಕಾಣಲು ನೇಮಿಸಿದ ದಿವಸ ಸಿಮ್ಲಾಕ್ಕೆ ತಲ್ಪುವರು. ಅಲ್ಲಿ ಒಡಂಬಡಿಕೆ ಪಾಲನದ, ರಾವುಂಡಟೇಬಲಿನ ವಿಷಯವಾಗಿಯೂ ಸಾಹೇಬರ ಕೂಡ ಆಪ್ತಾಲೋಚನೆ ಮಾಡುವರು. ಆಗ ಈಗಿನವರನ್ನು ಹೊರ್ತುಪಡಿಸಿ, ಹೊಸದಾಗಿ ಯಾರಾರಿಗೆ ಆಮಂತ್ರಣ ಕೊಡಬೇಕೆಂಬದೂ ಗೊತ್ತಾಗುವದು, ನಂತರ ಆಮಂತ್ರಣ ಕೊಟ್ಟಂಥವರ ಹೆಸರುಗಳು ಪ್ರಸಿದ್ಧಮಾಡಲ್ಪಡುವವು.

ಕಾನಪೂರದ ಪೋಲಿಸರ ವಿಚಾರಣೆಯು

(೦)—

ಕಾನಪೂರದ ದಂಗೆಯ ಕಾಲದಲ್ಲಿ ಪೋಲಿಸರು ಕರ್ತವ್ಯಚ್ಯುತರಾದರು. ಕಣ್ಣೆದುರಿಗೆ ದಂಗೆಯಾಗಿ, ಸುಲಿಗೆ ಮತ್ತು ಕೊಲೆಯಾಗುತ್ತಿದ್ದರೂ, ಮೋಟ ಮರ, ಗಾಳಿಗೆ ಮಿಂಡರಂತೆ ನಿಂತುಕೊಂಡಿದ್ದರೆಂದು ಸರಕಾರ ಮತ್ತು ಕಾಂಗ್ರೆಸದ ಕಮೀಟಿಗಳ ಮುಂದೆ ಸಾಕ್ಷಿಗಳಾಗಿವೆ. ಪೋಲಿಸರ ಮೇಲೆ ಹೊರಿಸಲ್ಪಟ್ಟ ಆರೋಪಗಳ ವಿಚಾರಣೆ ಮಾಡಲು - ಅಲಾಹಾಬಾದ ಸರಕಾರದವರು ಕಮೀಟಿ ನೇಮಿಸಿದ್ದಾರೆ.

ಕನ್ನಡಿಗರ ದಿಗ್ವಿಜಯ.

ಮುಂಬಾಪುರಿಯ ರಂಗಭೂಮಿಯ ಮೇಲೆ ಕನ್ನಡ ನಾಟ್ಯದೇವತೆಯ ಅಭಿಯೋಗ

—(೦)—

ಮಹಾರಾಷ್ಟ್ರ ಮೊದಲಾದವರ ಪ್ರಾಂತಿಕ ನಾಟಕ ಮಂಡಳಿಗಳು ಕರ್ನಾಟಕವನ್ನು ಒಳಸುಗ್ಗಿ ಇಲ್ಲಿಂದ ಹೇರಳವಾದ ಹಣವನ್ನು ಹೊತ್ತುಕೊಂಡು ಹೋಗುತ್ತಿರುವ ಸಂಗತಿಯು ಯಾರಿಗೇನೂ ಹೊಸದಲ್ಲ. ಈ ಸಂದರ್ಭದಲ್ಲಿ ಹಲ ಕೆಲವು ಕಂಪನಿಗಳಂತೂ ಗಝಿನೀ ಮಹಮದೀಯ ಕಾರ್ಯಕವನ್ನೇ ನಡಿಸಿರುವದು ಎಲ್ಲರಿಗೂ ಮನದಟ್ಟಾದ ಮಾತು. ಒಂದಾದರೂ ಕರ್ನಾಟಕ ನಾಟಕ ಮಂಡಳಿಯು ಇಂದಿನ ವರೆಗೆ ಸಾಂಗಲಿಯ ಉತ್ತರಕ್ಕೆ ಹೆಜ್ಜೆ ಇಟ್ಟದ್ದನ್ನು ಯಾರೂ ಕಂಡು ಕೇಳಿ ಅರಿಯರು. ಇವುಗಳ ಹಾರ್ಯಾಟ ಚಿರ್ರ್ಯಾಟವೆಲ್ಲ ಭೀಮಾ ಕಾವೇರಿಯ ಮಧ್ಯದೇಶದಲ್ಲಿಯೇ ನಡೆದ್ದುಂಟು. ಈಗ ಶ್ರೀ. ದತ್ತಾತ್ರೇಯ ನಾಟಕ ಮಂಡಳಿಯವರು ಮುಂಬಾಪುರಿಯನ್ನು ಒಳಸುಗ್ಗಿ ಅಲ್ಲಿಯ ರಂಗಭೂಮಿಯನ್ನು ಆಕ್ರಮಿಸಿ ಕನ್ನಡ ನಾಟ್ಯದೇವತೆಯ ಧ್ವಜವನ್ನು ಅಲ್ಲಿ ಊರುವ ಸಾಹಸಕ್ಕೆ ಕೈಯಿಕ್ಕಿರುವದಾಗಿ ವಿಶ್ವಸನೀಯವಾದ ಮಾರ್ಗದಿಂದ ನಮಗೆ ವರ್ತಮಾನ ಬಂದಿದೆ. ಶ್ರೀ ಗರುಡ ಸದಾಶಿವರಾಯರು. ಸಾಹಸಿಗರೆನಿಸಿಕೊಳ್ಳುವರೆ? ಕರ್ನಾಟಕದ ಗಡಿ ದುರ್ಗಂಗಳಾದ ಸೊಲ್ಲಾಪುರ ಹೈದರಾಬಾದ ಅನಂತಪುರ ಮೊದಲಾದ ಕಡೆಯ ಕನ್ನಡಿಗರಿಗೆ ಕನ್ನಡ ನಾಟಕಗಳ ಸೋಗಿನ ಸೊಬಗನ್ನು ಬೀರಿ ಅವರಲ್ಲಿ ತಾಯಿ ನುಡಿಯ ಅಭಿಮಾನವನ್ನು ಹುಟ್ಟಿಸುವ ಸತ್ಕಾರ್ಯವನ್ನು ಇವರೇ ಮೊದಲು ಮಾಡಿದವರು. ಈಗಂತೂ ಮುಂಬಯಿಗೆ ಹೋಗಿ, ಬರುವ ೨೫ ನೇ ತಾರೀಖಿನ ಶನಿವಾರ ದಿನ ಅಲ್ಲಿಯ ಗ್ರಾಂಟ ರೋಡಿನ ವಿಕ್ಟೋರಿಯಾ ನಾಟಕ ಶಾಲೆಯಲ್ಲಿ ಮೊದಲನೆಯ ಪ್ರಯೋಗವನ್ನು ಮಾಡುವ ಅದ್ಭುತ ಕಾರ್ಯವನ್ನು ನಿಶ್ಚಯಿಸಿ ದಿಗ್ವಿಜಯ ಪ್ರಸ್ಥಾನವನ್ನು ಬೆಳೆಸತಕ್ಕವರಿದ್ದಾರೆ. ಮುಂಬಯಿಯಲ್ಲಿ ಪ್ರಚಂಡ ಸಂಖ್ಯೆಯ ಕನ್ನಡಿಗರಿದ್ದರೂ ಕನ್ನಡದ ನಾಟಕಗಳನ್ನು ನೋಡುವ ಯೋಗ ಅವರಿಗೆ ಇಲ್ಲವೆನ್ನಬಹುದು. ಶ್ರೀ ದತ್ತಾತ್ರೇಯ ಕಂಪನಿಯ ಈ ಸಾಹಸಕ್ಕೆ ಅವರೆಲ್ಲರೂ ಚನ್ನಾಗಿ ಆಶ್ರಯ ಕೊಟ್ಟು ಸೇವಾಗಿ ಮುಂಬಯಿಯ ಸಾರ್ವಜನಿಕ ಜನಜೀವನದಲ್ಲಿ ಕನ್ನಡ ಭಾಷೆಗೂ ಒಂದು ಸ್ಥಾನವಿರಬೇಕೆಂಬ ಭಾವನೆಯ ಬೀಜಾರೋಪಣೆಗೆ [illegible] ಮಾಡಬೇಕೆಂದು ಬಯಸುತ್ತೇವೆ. ಶ್ರೀ ಭುವನೇಶ್ವರೀ ಮಾತೆಯು ಶ್ರೀ ದತ್ತಾತ್ರೇಯ ಕಂಪನಿಗೆ ಎಲ್ಲ ಬ [illegible]

ನಿರಾಹಾರದಿಂದ ಶಿಕ್ಷಣಕ್ಕಾಗಿ ಫಂಡು ಎತ್ತಿದ ಮಹಿಳೆ

—(೦)—

ಗುಂಟೂರದಲ್ಲಿರುವ ಶ್ರೀ ಮತಿ ಕಾಲಿಂಗಿ ಶೇಬಮ್ಮನೆಂಬವಳು ಕಾಯದೆಭಂಗದ ಚಳವಳಿಯಲ್ಲಿ ತುರಂಗದ ಅನುಭವ ತಕ್ಕೊಂಡು ಬಂದಿದ್ದಾಳೆ. ಇವಳು ಅಲ್ಲಿಂದು ಬಾಲಿಕಾ ಪಾಠಶಾಲೆಯನ್ನಿಟ್ಟಿದ್ದಾಳೆ. ಈ ಶಾಲೆಗೆ ದುಡ್ಡಿನ ಕೊರತೆಯಾಯಿತು. ಮನೆ ಮನೆಗೆ ಹೋಗಿ ಕೇಳಿದರೆ - ಯಾರೂ ಹಚ್ಚಿಕೊಳ್ಳಲಿಲ್ಲ. ಆಗ ಇವಳು ನಿರಾಹಾರ ಪ್ರಾರಂಭಿಸಿದಳು. ಐದು ದಿವಸಗಳ ತನಕ ಇವಳು ನಿರಾಹಾರ ಮಾಡಿದಳು. ಮುಂದೆಯೂ ಮುರಿಯುವ ಲಕ್ಷಣ ತೋರಲಿಲ್ಲ; ಆಗ ವೈಶ್ಯರೆಲ್ಲರೂ ಸೇರಿ, ದ್ರವ್ಯಾನುಕೂಲತೆ ಮಾಡಿಕೊಡುತ್ತೇವೆಂದು ನಂಬಿಗೆ ಹೇಳಲು - ಪಾರಣೆ ಮಾಡಿದಳು.

ಮಹಾತ್ಮರಿಗೆ ಲಂಡನದ ಹಿಂದೂ ಜನರ ಆಮಂತ್ರಣ

—(೦)—

ಮಹಾತ್ಮರು ಲಂಡನಕ್ಕೆ ಹೋದ ಬಳಿಕ, ದರಿದ್ರ ನಾರಾಯಣರು ವಾಸವಾಗಿರುವಂಥ ಪಟ್ಟಣದ ಪಶ್ಚಿಮ ಭಾಗದಲ್ಲಿಳಕೊಳ್ಳುವರೆಂದು ಈಗೊಂದು ಸುದ್ದಿಯು ಪ್ರಸಿದ್ಧವಾಗಿದಷ್ಟೇ. ನೀವು ಅಲ್ಲಿಳಿಯಬಾರದು. ಹಿಂದೂಜನರು ವಾಸವಾಗಿರುವಂಥ ಬೀದಿಯಲ್ಲಿಳಿಯಬೇಕೆಂದು ಶ್ರೀ ನಿರೂಳಕರರು ತಾರಿನಿಂದ ಆಮಂತ್ರಣ ಕೊಟ್ಟಿದ್ದಾರೆ.

ಲಂಡನದ ಕಾಂಗ್ರೆಸ ಕಮಿಟಿಗೆ ಬಂದ ಸಂಕ್ರಾಂತಿಯು

—(೦)—

ಲಂಡನದಲ್ಲಿರುವ ಕಾಂಗ್ರೆಸ ಕಮಿಟಿಯಲ್ಲಿ ಇಬ್ಬಣವಾಗಿದೆ. ಬೊಲ್ಸೆವಿಕ ಪದ್ಧತಿ ಪ್ರಕಾರ ಹಿಂದುಸ್ಥಾನವು ಸ್ವತಂತ್ರವಾಗಬೇಕೆಂದೂ, ಮಹಾತ್ಮರ ತತ್ವದ ಪ್ರಕಾರ ಸ್ವರಾಜ್ಯ ಸ್ವಾತಂತ್ರ್ಯಗಳಿಸಬೇಕೆಂದೂ ಹೀಗೆ ಎರಡು ಬಣಗಳಾಗಿದ್ದು, ಇವು ೩೬ ಅಂಕಿಯಂತೆ ನಡೆಸಲಾರಂಭಿಸಿವೆ. ಆದ್ದರಿಂದ ಈ ಕಮಿಟಿ ಮುರಿಯುವ ಹೊತ್ತು ಬಂದಿದೆ.

ಬ್ರಹ್ಮದೇಶದಲ್ಲಿ ಕೆಲ ಬಂಡುಗಾರರ ದಂಡಗಳನ್ನು ಧಡದಿಂದ ಬೇರೆ ಮಾಡಿದ್ದರಷ್ಟೇ; ಈ ಕೃತ್ಯವು ತಮಗೆ ಸಮ್ಮತವಾಗಲಿಲ್ಲೆಂದು ಬ್ರಹ್ಮೀ ಸಂಕಾಲದವರು ಹೇಳುತ್ತಾರೆ.

ಬ್ರಹ್ಮದೇಶದ ಬಂಡಾಯ ಮುರಿಯಲು ಪುಣೆಯಲ್ಲಿಯ ಮರಾಠಾ ಕಾಲ್ಬಲವನ್ನು ಕಳಿಸುವ ವಿಚಾರವಾಗಿದ್ದು, ತಿಳಿಸಿದ ಆ ತಾಸುಗಳಲ್ಲಿ ಹೊರಡಲು ಸಿದ್ಧರಾಗಿರಬೇಕೆಂದು ಮೇಲಧಿಕಾರಿಗಳಿಂದ ತಿಳಿಸಲ್ಪಟ್ಟಿದೆ.

ಲಾಹೋರದಲ್ಲಿರುವ ಜಮೀನದಾರ ಪತ್ರದ ಮೇಲೆ ಸರಕಾರದವರು ಪತ್ರಾಸ್ತ್ರಗಳ ದೆಸೆಯಿಂದ ತೆಗೆದ ಆರ್ಡಿನನ್ಸದ ಪ್ರಕಾರ ಜಪ್ತಿ ಮಾಡಿದ್ದಾರೆ.

ಧಾರವಾಡ

....(೦)....

ಈ ವಾರದಲ್ಲಿ ಬಿತ್ತಿಗೆ ಸಾಕೆನ್ನುವಷ್ಟು ಹಸಿಮಳೆಯಾಗಿದೆ. ಸೋನಿನ ಮಳೆಯು ಜೋರಾಗಿದೆ.

ಈ ವಾರದಲ್ಲಿ ರಾಣೆಬಿನ್ನೂರಲ್ಲಿ ಪರದೇಶಿ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಪ್ರಾರಂಭವಾಗುವದು.

ಇದೇ ತಿಂಗಳ ೨೨ ನೆಯ ತಾರೀಖಿನ ದಿವಸ ಪುಣೆಯಲ್ಲಿ ಮುಂಬಯಿ ಕೌನ್ಸಿಲ ಸಭೆಗೆ ಪ್ರಾರಂಭವಾಗುವದು. ಎಲ್ಲಾ ಗ್ರೇಡಿನ ಸರಕಾರೀ ನೌಕರರ ದರಸಂಬಳವನ್ನು ಕಡಿಮೆ ಮಾಡಬೇಕೆಂದು ಶ್ರೀ ಜೋಗ ವಿಶ್ವನಾಥರಾಯರೂ ಸರಬರಾಯಿ ತಕ್ಕೊಳ್ಳುವಂಥ ಅಂದರೆ ಹಾಲು ಮೊಸರು ಮೊದಲಾದ ಜಿನಸು ತಕ್ಕೊಂಡು ಕಿಮ್ಮತ್ತು ಕೊಡದಂಥ ನೌಕರರಿಗೆ ದಂಡ ಮಾಡಬೇಕೆಂದು ಮಿ. ಸಯ್ಯದ ಎ ರಾನ ಕಹಾಸಾಹೇಬರೂ ಠರಾವು ತರತಕ್ಕವರಿದ್ದಾರೆ.

ಈ ಊರ ಮುನಸಿಪಾಲಟಿಯ ಚುನಾವಣೆಗಾಗಿ ಒಬ್ಬ ಹೆಣ್ಣು ಮಗಳು ಉಮೇದವಾರಳಾಗಿ ನಿಲ್ಲುವಳೆಂದು ದಟ್ಟ ವರ್ತಮಾನವುಂಟು.

ಹುಬ್ಬಳ್ಳಿಯಲ್ಲಿ ಮಾರಿಕಾದ ಕಸವು ಹಿಮ್ಮೆಟ್ಟದ್ದು, ದಿನಾಲು ಹತ್ತಾರು ಜನರ ಮರಣಗಳಾಗುತ್ತಿವೆ.

ನೋಟಿಸಿನ ಉತ್ತರ

—(೨)—

ತುಳಸಿ ಕೋಂ ಮಲ್ಲಪ್ಪಾ ಕಲ್ಲೂರ ಶೆಟ್ಟರ ಸವಲೂಂ ಈತಗೆ

ಕೆಳಗೆ ಹೆಬ್ಬಟ್ಟಿನ ಗುರ್ತ ಮಾಡುವ ಲ್ಲಪ್ಪಾ ಬಿನ್ನ ಹೊನ್ನಪ್ಪಾ ಕಲ್ಲೂರ ಈತನು ಗೆ ಈ ನೋಟೀಸಿನಿಂದ ತಿಳುವದೇನಂದರೆ- ನು ಧಾರವಾಡ ರಾಜಹಂಸ ಪತ್ರದಲ್ಲಿ ತಾ|| ೧ನೇ ಲೈದ ದಿವಸ ನನಗೆ ಕೊಟ್ಟ ನೋಟೀಸು ಮು ಟು. ಅದರಲ್ಲಿ ಬರೆದ ಯಾವತ್ತು ಮಜಕೂರು ಳ್ಳು ಇರುತ್ತದೆ. ನೀನು ದುರಾಚಾರಿಯಾದ್ದರಿಂದ ನ್ನ ಮನೀ ಬಿಟ್ಟು ಹೊರಗೆ ಹಾಕಬೇಕೆನ್ನು ವದರೊಳಗಾಗಿ. ನೀನೇ ನನ್ನ ಮನೆ ಒಳಗಿದ್ದ ದಾಗೀನೆ ಸ್ತು ಅರಿವೆ ತಕ್ಕೊಂಡು ಓಡಿ ಹೋದಿ. ಮತ್ತು ಕವರ ಮನೆಯಲ್ಲಿ ಕರ್ತ ಸ್ವೇಚ್ಛೆಯಿಂದ ಯಲಿಕ್ಕೆ ಹತ್ತಿದಿ. ಅದ್ದರಿಂದ ನಾನು ಎರಡ ನೆವರನ್ನು ಮದಿವೆ ಮಾಡಿಕೊಂಡು, ನಿನ್ನ ಲು ಹರಕೊಂಡು ಬಿಟ್ಟೆನು. ಆಮಾತಿಗೆ ಐದಾ ವರ್ಷವಾಯಿತು. ನಿನಗೆ ಹುಟ್ಟಿದ ಗಂಡು ಮಗ ವ್ಯಭಿಚಾರದ್ದಿರುತ್ತದೆ. ಅವರ ಹಕ್ಕು ಅಥವಾ ಹಕ್ಕು ನನ್ನ ಮೇಲೆ ಮತ್ತು ನನ್ನ ಸ್ಥಾವ ಜಂಗಮ ಆಸ್ತಿಯ ಮೇಲೆ ಬಿಲಕೂಲ ನಡೆಯು ದಿಲ್ಲ. ನೀನು ತೀರ ಸಂಭಾವಿತಳಿದ್ದೇನೆಂದು ತಿಳಿಸಿ, ನನ್ನ ಆಸ್ತಿಯಲ್ಲಿ ಮಗನ ನೆವನದಿಂದ ಸೇರಿಕೊಳ್ಳಬೇಕೆಂಬ ಮತಲಬದಿಂದ ಈ ನೋಟೀ ಮಾಡಿರುತ್ತೀದಿ. ನಾನು ನಿನ್ನ ನೋಟೀಸಿಗೆ ಯಾವ ರೀತಿಯಿಂದಲೂ ಬಾಂಧಯಿಸುವದಿಲ್ಲ. ನಗೆ ಅಥವಾ ನಿನ್ನ ಹೊಟ್ಟೆಯಿಂದ ಹುಟ್ಟಿದ ೂಸಿಗೆ ನಾನು ಹೊಟ್ಟೆಗೆ ಹಾಕಲು ಯಾವ ಸಂ ಬಂಧ ಉಳಿದಿರುವದಿಲ್ಲ. ನೀನು ಹಿಂದಿನಂತೆ ಮುಂ ದಾದರೂ ನಿನ್ನ ಮನಸಿಗೆ ಬಂದಂತೆ ಸ್ವೇಚ್ಛಾ ನಡೆ ಯಬೇಕು. ನಾನು ಎರಡನೇ ಮದಿವೆ ಮಾಡಿಕೊಂ ಡಿದ್ದು, ಆ ಹೆಂಡತಿ ಮತ್ತು ಆಕೆಯ ಹೊಟ್ಟೆಯಿಂ ದಾಗುವ ಸಂತತಿಯೇ ನನ್ನ ಯಾವತ್ತು ಸ್ಥಾವರ ಜಂಗಮ ಇಸ್ಟೇಟಿಗೆ ಬಾಧ್ಯರಾಗುವರು ಅಂತಾ ನಿನಗೆ ತಿಳಿಸಿದ ನೋಟೀಸು ತಾ|| ೧೪ ಜುಲೈ ೧೯೩೧ ನೇ ಇಸವಿ—

ಈ ಎಡಗೈ ಹೆಬ್ಬಟ್ಟಿನ ಗುರ್ತ ಮಲ್ಲಪ್ಪಾ ಬಿನ್ನ ಹೊನ್ನಪ್ಪಾ ಕಲ್ಲೂರ ಸಾ|| ಉಗ್ಗಿನಕೇರಿ ತಾಲೂಕ ಕಲಘಟಗಿ ಈತನ ಕೈದು ಇರುತ್ತದೆ.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

" ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯು ಮಂಜೂರಾಗಿವೆ. "

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸರ್ಗ ಸಂಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,,
೬	ದುರ್ಗಸಿಂಹನ ಪಂಚತಂತ್ರ, ಸಾ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,,
೧೨	ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇಮಮಂದಿರ	೮	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹಸ್ಥವೃಕ್ಷ	೮	,,
೧೭	ಮೋಹಿನೀ ನಿಂದಕರ ನಡಾವಳಿ	೮	,,
೪೦	ಕನ್ನಡ ಮಾತು ತಲೆ ಯೆತ್ತುವ ಬಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಲಿದಾಸ	೬	.
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೭	,,
೨೪	ಬೇಗಮ್ ಸಮರು	೬	,,
೨೫	ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	,,
೩೨	ಶೇರಷಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	ಮೊಹರಮ್	೩	.
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	,,
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ.
ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಘ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ.
ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ
೧—೪—೦

೪. ಶ್ರೀಹರ್ಷನೂ ಆತನ ನಾಟಕಗಳೂ [ನಾ. ವೆ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು.
೦—೧೦—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿಯ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿಪ್ರಸಿದ್ಧ ಮಾಡಿದರು.

R. N. B. 1443.

[illegible]

ವಿಜಯ

[illegible]

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨ ಧಾರವಾಡ ಗುರುವಾರ ತಾರೀಖು ೧೬ ನೇ ಜುಲೈ ೧೯೩೧ (ಸಂಚಿಕೆ ೧೬೧

The Asian Life Assurnance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦, ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೨೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೨೪,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರ ಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕೆ. ವ್ಹಿ. ಹೊಲಸೋಗಿ, ಬಿ. ಎ.
ಕುಲಕರ್ಣಿ, ಧಾರವಾಡದ ಏಜಂಟರು ಕರ್ನಾಟಕದ ಬ್ರ್ಯಾಂಚ ಮ್ಯಾನೇಜರ
ಸಿ. ಎಚ್. ಪಾಟೀಲ ಹುಬಳಿಯ ಏಜಂಟರು—
ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಮ್. ದೊಡ್ಡವಾಡ ಮತ್ತು
ಶ್ರೀ. ಬಿ. ಟಿ. ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೩೭೫೦ ರೂ. ಗಳನು ಕೊಡುವಂಥ **ಗೋಲ್ಡನ್** (ಸುವರ್ಣ) **ಪಾಲಿಸಿ**ಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧ್ವರಾವ ಬಿ. ಬಳಾರಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨/೮-೦
೬ ,,	೭-೦-೦
೩ ,,	೪-೮-೦
ಏಕ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೧೬-೭-೧೯೩೧ನೇ ಇಸ್ವಿ

ಟ್ರೇನಿಂಗ ಕಾಲೇಜ ಬಂದಾದ್ದರ ಚರ್ಚೆಗೆ ಪ್ರಾರಂಭವಾಯಿತು.

(೦)

ರ್‍ಯಾಂಗಲರ ಪರಾಂಜಪೆಸಾಹೇಬರು ಮಹಾರಾಷ್ಟ್ರ ದೇಶದ ಟ್ರೇನಿಂಗ ಕಾಲೇಜಗಳನ್ನಿಟ್ಟು, ಧಾರವಾಡದ ಟ್ರೇನಿಂಗ ಕಾಲೇಜ ಮುರಿದು, ಕರ್ನಾಟಕದ ಅಪರಿಮಿತ ಹಾನಿಮಾಡಿದರು ಈ ಹಾನಿಯು ತುಂಬಿ ಬರುವದು ಎಷ್ಟೋ ವರ್ಷಗಳ ತನಕ ಶಕ್ಯಸಂಭವವಿಲ್ಲ ಸರಕಾರಕ್ಕೆ ದುಡ್ಡಿನ ಅಡಚಣಿಯು ಅಷ್ಟಿಷ್ಟು ಇರುವದಿಲ್ಲ. ಮೇಲಾಗಿ ಪ್ರಾಥಮಿಕ ಶಾಲೆಗಳು ಲೋಕಲಬೋರ್ಡಿನ ವಶಕ್ಕೆ ಹೋದ್ದರಿಂದ, ಬೋರ್ಡಿಗೆ ಬೇಕಾದಂಥ ಶಿಕ್ಷಕರನ್ನೊದಗಿಸಿ ಕೊಡಲಿಕ್ಕೆ ಸರಕಾರವು ಜವಾಬದಾರವಲ್ಲೆಂದು ಹೇಳುವದಕ್ಕೆ ಅನಾಯಾಸವಾಗಿ ಒಂದು ತೋಟಕವಾಗಿರುತ್ತದೆ.

ಈ ಕಾಲೇಜ ಒಂದಾನೊಂದಾಗ ಅವಶ್ಯಕ್ಕಿಂತ ಹೆಚ್ಚು ಜನ ಶಿಕ್ಷಕರಿದ್ದಾರೆಂದು ರ್‍ಯಾಂಗಲಸಾಹೇಬರು ನೆಪನ ಹೇಳಿದರು. ಅದಕ್ಕೆ ಕೌನ್ಸಿಲ ಮೆಂಬರರು ಗೋಣು ಹಾಕಿದರು. ಒಬ್ಬನು ಹೊಟ್ಟೆತುಂಬಿದೆ. ಈ ನಂತರ ಹಸಿವೆಯಾಗುವದಿಲ್ಲ ಖಣಜ ಕಿತ್ತೆಂದು ತನ್ನ ಹೆಂಡತಿಗೆ ಹೇಳಿದಂತೆ ರ್‍ಯಾಂಗಲರಸಾಹೇಬರ ಕೃತಿಯಾಗಿರುತ್ತದೆ.

ಕೆರೆಯು ತುಂಬಿದ್ದು ನಿಜ. ಮಳೆಗಾಲದಲ್ಲಿ ಅದಕ್ಕೆ ನೀರು ಬರುವ ಕಾಲುವೆಯನ್ನು ಬಂದು ಮಾಡಿದರೆ ಕೆಲವು ವರ್ಷಗಳಲ್ಲಿ ಕೆರೆಯು ಬಣಗಿ ಹನಿ ನೀರು ಬರದಂತಾಗುತ್ತದೆ. ಅದೇ ಪ್ರಕಾರ ಟ್ರೇನಿಂಗ ಕಾಲೇಜ ಬಂದಾದ್ದರಿಂದ, ಎರಡನೆಯ ಮತ್ತು ಮೂರನೆಯ ವರ್ಷದ ಟ್ರೇನ್ಡ ಶಿಕ್ಷಕರ ವಿಚಾರವಾಗಿದೆ.

ಕಳೆದ ಹತ್ತು ವರ್ಷಗಳಲ್ಲಿ ಈ ಎರಡೂ ವರ್ಗಗಳ ಶಿಕ್ಷಕರಲ್ಲಿ ಅನೇಕರು ಪೆನಶನ ಪಡೆದರು ಕೆಲವರು ಸತ್ತರು ಹೀಗೆ ಪ್ರತಿ ವರ್ಷ ಇವರ ಸಂಖ್ಯೆಯು ಕಡಿಮೆಯಾಗುತ್ತಾ ಬಂದಿದೆ. ಇನ್ನು ಹತ್ತು ವರ್ಷಗಳಲ್ಲಿ ಮೂರನೆಯ ವರ್ಷದ ಟ್ರೇನ್ಡರು ಒಂದೊಂದು ವರ್ಷದಲ್ಲಿ ಹತ್ತು ಜನರಾದರೂ ಉಳಿಯುವರೋ ಎಂಬ ಭಯವುಂಟಾಗಿರುತ್ತದೆ.

ಮ್ಯುನಿಸಿಪಾಲಿಟಿಯ ಶಾಲೆಗಳಲ್ಲಂತೂ ಈಗಿನಿಂದಲೇ ಇವರ ಅಡಚಣಿ ತೋರಹತ್ತಿದೆ ಸಾಕಷ್ಟು ಅಥವಾ ವಿಪುಲ ಶಿಕ್ಷಕರಿದ್ದದರಿಂದ, ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡಿನವರು ಶಿಕ್ಷಕರನ್ನು ಅದಲುಬದಲು ಮಾಡಿಕೊಳ್ಳುತ್ತಿದ್ದರು. ಮ್ಯುನಿಸಿಪಾಲಿಟಿಗಳು ಸ್ವತಂತ್ರವಾಗಿರುವದರಿಂದ ಬೋರ್ಡಿನಿಂದ ಶಿಕ್ಷಕರು ದೊರೆಯರು. ಮತ್ತು ಬೋರ್ಡುಗಳಿಗೇ ಅವರ ಕೊರತೆಯಾಗುವದರಿಂದ, ಅವರು ತಮ್ಮವರನ್ನು ಮ್ಯುನಿಸಿಪಾಲಿಟಿಗೆ ಕೊಡರು.

ಮೂರನೆಯ ಮತ್ತು ಎರಡನೆಯ ವರ್ಷದ ಟ್ರೇನ್ಡ ಶಿಕ್ಷಕರು ಮುಲಕೀ ಪರೀಕ್ಷೆಯ ವರ್ಗಗಳ ದೆಸೆಯಿಂದ ಬೇಕಾಗುತ್ತಾರೆ ಇವರ ಕೊರತೆಯಾದರೆ - ಮುಲಕೀ ಪರೀಕ್ಷೆಯ ಕ್ಲಾಸುಗಳನ್ನೇ ಬಂದು ಮಾಡುವ ಹೊತ್ತು ಬರುತ್ತದೆ.

ಈ ವರ್ಷದ ಮುಲಕೀ ಪರೀಕ್ಷೆಯಲ್ಲಾದ ಕೊಲೆಯಾದವರಿಂದ ಮತ್ತು ಹೊಸದಾಗಿ ಏಳನೆಯ ಇಯತ್ತೆಗೆ ಬಂದವರಿಂದ ಧಾರವಾಡದ ಸೆಂಟ್ರಲ ಸ್ಕೂಲಿನಲ್ಲಿ ೧೦೦ ವಿದ್ಯಾರ್ಥಿಗಳಾಗಿದ್ದಾರೆ ಇವರಿಗೆ ಕಲಿಸುವಷ್ಟು ಶಿಕ್ಷಕರು ಅಂತೂ ಇಂತೂ ಧಾರವಾಡದಲ್ಲಿರುವದು ನಿಜ ಆದರೆ ಈ ಶಿಕ್ಷಕರನ್ನು ಸೆಂಟ್ರಲಸ್ಕೂಲಿನಲ್ಲಿಯೇ ಹಾಕಿದರೆ - ಬೇರೆ ಶಾಲೆಗಳಿಗೆ ಧಕ್ಕೆ ಒದಗುವಂತಾಗಿರುತ್ತದೆ. ಬೋರ್ಡಿನವರು ಹಾಗೂ ಹೀಗೂ ಮಾಡಿ, ಏನೇನೋ ವ್ಯವಸ್ಥೆ ಮಾಡಿಕೊಂಡಿದ್ದಾರೆ ಇದು ದಾರಿಕಾರರು ಗಿಡದ ಬುಡದಲ್ಲಿ ರಾತ್ರಿ ಕಳೆದಂತಾಗಿರುತ್ತದೆ ವರ್ಷ ವರ್ಷಕ್ಕೂ ಶಿಕ್ಷಕರ ಕೊರತೆಯಾಗಿ, ಧಾರವಾಡ ಮಾತ್ರವಲ್ಲ. ಕರ್ನಾಟಕದಲ್ಲಿಯೇ ಮುಲಕೀ ಪರೀಕ್ಷೆಯ ಕ್ಲಾಸುಗಳನ್ನು ಬಂದು ಮಾಡುವ ಹೊತ್ತು ಬರುವದು ಕರ್ನಾಟಕದ ನಾಲ್ಕು ಜಿಲ್ಲೆಯವರು ಈಗಿನಿಂದಲೇ ಕಾಲೇಜವನ್ನು ಪುನಃ ಪ್ರಾರಂಭಿಸಬೇಕೆಂದು ಸರಕಾರದ ಬಾಗಿಲವನ್ನು ಬಡಿಯುವದಾದರೆ - ಸರಕಾರವು ಎಂದೋ ಒಂದು ದಿವಸ ಕಣ್ಣು ತೆಗೆಯಬಹುದಾಗಿದೆ ಕಣ್ಣುತೆರೆಯುವತನಕ ಧಡ ಧಡ ಬಾಗಿಲ ಬಡಿಯಿರೆಂದು ಇಂಗ್ಲಿಷ ಜನರೇ ಹೇಳುತ್ತಾರೆ

ಮಹಾತ್ಮರು ಬಂಧವಾದ ದಿವಸ [illegible] ತಲ್ಪುವರು

ವಿರತ ಪ್ರಕರಣದಲ್ಲಿ ಜಾಮೀನದ ಮೇಲಿದ್ದ ಮಿ. ಸಿಂಬಕರರ ಜಾಮೀನು ರದ್ದುಮಾಡಿದರು. ಹಚಿನಸನ್ನ ಸಾಹೇಬರಿಗೆ ತಾಕೀದು ಕೊಟ್ಟು, ಅವರ ಜಾಮೀನು ಕಾಯಮ ಮಾಡಿದರು.

ಹಾವೇರಿ ಮ್ಯುನಿಸಿಪಾಲಿಟಿಯ ಚುನಾವಣೆಯು

* * *

ಹಾವೇರಿ ಮ್ಯುನಿಸಿಪಾಲಿಟಿಯ ಚುನಾವಣೆಯು [illegible] ನೇಲಾವಿಟಲ್ಲದೆ, ಒಬ್ಬರ ಕಾಸು ವೆಚ್ಚವಾಗದೆ, ಸರ್ವಸಮ್ಮತವಾಗಬೇಕೆಂದೂ, ಒರೇ ಬಿರಾದರೀ ಮೆಂಬರರಾಗಿರೆ, ತರುಣರೂ, ಉತ್ಸಾಹಿಗಳೂ ಮೆಂಬರರಾಗಬೇಕೆಂದೂ, ವಿಜಯದಲ್ಲಿ ಪ್ರಕಟವಾದ ಶ್ರೀ ರಿತ್ತಿಯವರ ಲೇಖದ ಒಗ್ಗೆ ಅಲ್ಲಿಯ ಪತ್ರವಾದ ಬಸವರಾಜವು ತಿಳಿಸಿದ ಸ್ಪಷ್ಟವಾಗಿರುತ್ತದೆ. ಶ್ರೀ ರಿತ್ತಿಯವರು ಹೆಚ್ಚಿಗೇನೂ ಹೇಳಿಲ್ಲ. ಮೂವರು ಪಂಚರಿಗೆ ಸಹಾಯವಾಗಿ ಇನ್ನಿಬ್ಬರನ್ನು ಕೊಡಿರೆಂದು ವಿನಯದಿಂದ ಹೇಳಿದರು ಇದರಲ್ಲಿ ಅವರು ಮಾಡಿದ ತಪ್ಪೇನು, ಅವರ ಯಥಾರ್ಥವಾದ ಸೂಚನೆಗೆ ಉತ್ತರ ಕೊಡುವಾಗ, ಬಸವರಾಜವು ಮಹಾಪವಾದ ಮಾಡಿದೆ ಇದು ಅಕ್ಷಮ್ಯವಾದದ್ದಾಗಿದೆ ಮೂವರಿಗಿಂತ ಹೆಚ್ಚು ಜನರು ಪಂಚರಾದರೆ - ಹವಿನೆಂಟು ಜನರು ಸೇರಿ ಹದಗೆಡಿಸಿದಂತಾಗುತ್ತದೆಂಬ ಶಕುನಿನೀತಿಯನ್ನು ಹೇಳಿರುತ್ತದೆ. ಶ್ರೀ ರಿತ್ತಿಯವರು ಸೂಚಿಸಿದಂಥವರು ಹದಗೆಡಿಸುವಂಥವರಾಗಿದ್ದಾರೆಂದು ಇಡೀ ಹಾವೇರಿಯಲ್ಲಿ ಯಾವ ಜನರಾದರೂ ಹೇಳಲಾರರು ಶ್ರೀ ಮೋರೋಪಂತರೂ, ಶ್ರೀ ಹೊಸಮನಿ ಸಿದ್ದಪ್ಪನವರೂ, ಸರ್ವಮಾನ್ಯ ಗೃಹಸ್ಥರಾಗಿದ್ದು ಇವರು ತಮಗೆ ಒಪ್ಪಿಸಿದ ಕೆಲಸವನ್ನು ಹದಗೆಡಿಸುವರೆಂದು ಆರೋಪಿಸುವದೆಂದರೆ- ಅವರ ತರುಣರೂ, ಬುದ್ಧಿಗೇಡಿಗಳೂ ಹಾವೇರಿಯ ಅಭಿಮಾನವಿಲ್ಲದವರೂ, ಶಾಂತಿಯ ಬದಲಾಗಿ ಅಶಾಂತಿಯನ್ನು ಒಯಿಸುವಂಥವರೂ ಜಗಳಕ್ಕೆ ಉತ್ತೇಜನ ಕೊಡುವಂಥವರೂ, ಉಮೇದವಾರರು ತಂತಮ್ಮೊಳಗೆ ಹೊಡದಾಡಿ, ಹಣ ಹಾಳುಮಾಡಿಕೊಳ್ಳುವ [illegible] ನೋಡಿ, ಆನಂದಪಡತಕ್ಕವರೂ, ಆಗಿದ್ದಾರೆಂದು ಬಸವರಾಜವು ಹೇಳಿದಂತಾಗುತ್ತದೆ

ಮರಾಠಿಯಲ್ಲಿ ಪಾಂಚಾಮುಖಿ ಪರಮೇಶ್ವರನೆಂದು ಹೇಳಿದ್ದೊಂದು ನುಡಿಯುಂಟು ಆ ಪ್ರಕಾರ ಮೂವರ ಬದಲಾಗಿ ಐವರನ್ನು ಪಂಚ ಮಾಡಿರೆಂದು ಶ್ರೀ ರಿತ್ತಿಯವರು ಹೇಳಿದ್ದು, ಹಾವೇರಿಯ ಮುಖಂಡರಿಗೆ ಸಮ್ಮತವಾಗಿರುತ್ತದೆಂದು ಧಾರವಾಡಕ್ಕೆ ಬಂದು ಹೋದ ಹಾವೇರಿಯ ಕೆಲ ಸದ್ಗೃಹಸ್ಥರಿಂದಲೂ, ಹಾವೇರಿಯವರಾಗಿ ಈ ಊರಲ್ಲಿ ವಾಸವಾಗಿರುವಂಥ ಕೆಲ ಜನರಿಂದಲೂ ನಮಗೆ ತಿಳಿದು ಬಂದಿದೆ ಬಸವರಾಜವಾಗಲಿ, ಮೂವರನ್ನೇ ಪಂಚರಾಗಿ ನೇಮಿಸಿದವರಾಗಲಿ, ತಮ್ಮ ದುರಾಗ್ರಹ ನಡಿಸದೆ, ಶ್ರೀ ರಿತ್ತಿಯವರ

ಸೂಚಿಸಿದಂಥ ಇಬ್ಬರನ್ನು ಪಂಚರನ್ನಾಗಿ ನೇಮಿಸಿಕೊಂಡು, ಆ ಸಾವಣೆಯು ಸರ್ವ ಮಾನ್ಯವಾಗುವಂತೆ ನಡೆಯುತ್ತಿದ್ದರೆ - ಜಗಳಕ್ಕೂ, ಬಣಕ್ಕೂ ತಮ್ಮ ಹಟದಿಂದ ಉತ್ತೇಜನ ಕೊಟ್ಟಂತಾಗುತ್ತದೆ ಜಗಳದ ಖಂಡ ಬಿತ್ತಿ, ಆನಂದಪಡುತ್ತಾ ಹೋದರೆ - ಕಯ್ಯಲ್ಲಿ ಗುಡಗುಂಟ ಬರುವದೇ ನಿಜ

ಶಿದ್ದಾಪುರಲ್ಲಿ ಜಪ್ತಿಯ ಹಾವಳಿ

—(೦)—

ಶಿದ್ದಾಪುರ ತಾಲೂಕದ ಮಾಮಲೇದಾರರು ಸ್ವತಃ ಪೇಟೆಗಿಗೆ ಹೋಗಿ ಜಪ್ತೀ ಮಾಡಿಸ ಹತ್ತಿರುವರು. ಒಬ್ಬರ ಮನೆಯ ಕರ್ವೆಗೆ ಇನ್ಸ್ಪೆಕ್ಟರ ಸಾಮಾನುಗಳನ್ನು ಜಪ್ತಮಾಡಿಸುವದು, ಎಮ್ಮೆ ಬಂಡಿ, ಭತ್ತ ಇವುಗಳನ್ನು ಹಠದಿಂದ ಜಪ್ತಿಗೆ ಹಿಡಿಸುವದು ನಡಿಸಿದೆ. ಇನ್ನು ಇದೇ ಸಮೂನೆ ಹಾವಳಿ ನಡೆದರೆ ಹಿಂದಕ್ಕೆ ಬಾರ್ಡೋಲಿಯವರಂತೆ ಇಲ್ಲಿಯ ರೈತರೂ ಊರುಬಿಟ್ಟು ಹೋಗಬಹುದು

೫ ನೇ ತಾ|| ದಿನ ಕಾಲಾರದ ಶ್ರೀ. ಗಣೇಶ ಹೆಗಡೆಯವರು ೨ ನೇ ಹಪ್ತೆ, ಬಾಕಿ ಇದ್ದ ೨೦೦ ರೂಪಾಯಿಗಳ ಸಲುವಾಗಿ ೩ ಕೊಪ್ಪರಿಗೆ, ೨ ಹಂಡೆ, ಗಿಂಡ್ಲಿ (ಅಡಿಕೆ ಬೇಯಿಸುವ ಪಾತ್ರೆ) ಮತ್ತು ೨ ಬಂದೂಕು ಜಪ್ತ ಮಾಡಿದರು. ಆದರೆ ಹಿಂದುಗಡೆ ಜಪ್ತ ಮಾಡಿದ ಬಂದೂಕು ತಿರುಗಿಕೊಟ್ಟು ಮತ್ತೆ ಕೆಲವು ಪಾತ್ರೆ ಜಪ್ತ ಮಾಡಿಕೊಂಡು ಬಂದ್ದರು.

ಅದೇ ದಿನ ಕಿಬ್ಬಳ್ಳಿ ಗ್ರಾಮದ ಶಿಂಗೆಶೀಬೈಲದ ಶ್ರೀ. ವಿಘ್ನೇಶ್ವರ ನಾಗಪ್ಪಾ ಹೆಗಡೆ ಇವರಲ್ಲಿ ೪ ಚೀಲ ಅಕ್ಕಿ ಜಪ್ತಮಾಡಿದರು. ಮತ್ತು ಅದೇ ಊರಿನ ಮಂಜಪ್ಪನವರ ೧ ತಾಮ್ರದ ಹಂಡೆ ಜಪ್ತ ಮಾಡಿದರು.

ತಾಲೂಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ಸೀತಾರಾಮ ವೆಂಕಣ್ಣಾ ಹೆಗಡೆಯವರ ೨ನೇ ಹಪ್ತೆ ಕೇಳಲು ನನಗೆ ರೂಪಾಯಿ ಬರತಕ್ಕವವೆ. ನಾಳೆಗೆ ಬೇಳಗ್ಗೆ ತಂದು ಮುಟ್ಟಿಸುವೆನು ಎಂದು ಹೇಳಿದರು. ಆದರೆ ಅಧಿಕಾರಿಗಳು ಕೇಳದೆ ಮನೆಯೊಳಗೆ ನುಗ್ಗಿ ಹಂಡೆ, ದಳ್ಳಿ, ತಪ್ಪೇಲಿ ಮತ್ತು ಕೊಟ್ಟಿಗೆಯೊಳಗಿದ್ದ ೮೦ ರೂ. ಯ ಎಮ್ಮೆ ಜಪ್ತಮಾಡಿದರು. ಜಪ್ತಿಯ ಕಾಲಕ್ಕೆ ಎಮ್ಮೆಗೆ ೨೦ ರೂ. ಬೆಲೆ ಕಟ್ಟಿರುವರು ಆದರಂತೆ ಉಳಿದ ಮಾಲಿನ ಕಡಿಮೆ ಅಂದಾಜು ಕಟ್ಟಿರುವರು.

ಹಾಗಲವಾಡಿಯ ದರ್ಬಾರ

ಬೀಳಗಿ ಉಪೇಂದ್ರ ಶಿರ್ಶಿಭಟ್ಟ ಇವರಲ್ಲಿ ೨ ನೇ ಹಪ್ತೆ, ೧೪ ರೂ. ಕೇಳಿದರು ಈಗ ನನ್ನಲ್ಲಿ ಹಣವಿಲ್ಲ ತಗಾದೀ ಕೊಡಿಸಿರಿ ಕೊಡುವೆನು ಎಂದು ಭಟ್ಟರು ಹೇಳಲು ಗೌಡರು ೯ ರೂಪಾಯಿ ಕೊಡಿರಿ ೨೫ ರೂಪಾಯಿ ತಗಾದಿ ಕೊಡಿಸುತ್ತೇನೆ ಎಂದು ಅರ್ಭಟಿಸಿದರು. ಅದಕ್ಕೆ ಭಟ್ಟರು ಈಗ ಸದ್ಯಕ್ಕೆ ನನ್ನಲ್ಲಿ ಹಣವಿಲ್ಲ ನಾಳೆ ಕೊಡುವೆನು" ಎಂದು ಹೇಳಿದರು ಆದರೆ ಅಧಿಕಾರಿಗಳು ಕೇಳದೆ ೨ ಒಟ್ಟಿಲು, ಹರಿವಾಣ, ೧ ಕಡಬಿನ ತಪ್ಪೇಲಿ, ೨ ಚರಿಗೆ, ೧ ತಪ್ಪೇಲಿ ಜಪ್ತ ಮಾಡಿದರು. ಇದಲ್ಲದೆ ಇವರ ಮನೆಯಲ್ಲಿ ಬಾಡಿಗೆ ಇದ್ದ ಸಾಂತಪ್ಪಾ ಬಲೀರ ಎಂಬುವರಲ್ಲಿಯ ೧ ಚರಿಗೆ, ೧ ತಪ್ಪೇಲಿ, ೧ ಕಡಬಿನ ತಪ್ಪೇಲಿ ೧ ಕೊಡಪಾನ ಜಪ್ತಮಾಡಿದರು. ಪಾಪ! ಸಾಂತಪ್ಪನವರು ಆ ಮನೆ ಬಾಡಿಗೆ ಹಿಡಿದ್ದೇ ತಪ್ಪೇ? ಸಾಂತಪ್ಪನವರು ಮಾಮಲೇದಾರರ ಕಡೆಗೆ ಹೋಗಲು ನಿಮ್ಮ ಮಾಲಿನ ವಿಚಾರವಿಲ್ಲ. ಬಿಟ್ಟುಕೊಡಲು ಬರುವದಿಲ್ಲ ಎಂದು ಮಾಮಲೇದಾರರು ಹೇಳಿದರು. ಹೀಗೆಯೇ ಹಾಗಲವಾಡಿಯ ದರ್ಬಾರ ನಡಿದಿದೆ!!

ಸವಾಲಿನ ಕಾಲದ ಪಿಕೆಟಿಂಗಕ್ಕೆ ವಿಘ್ನ

—(೦)—

ಶಿರಸಿಯ ಗುತ್ತಿಗೆಗಳ ಸವಾಲುಗಳಾಗ ಕಾಂಗ್ರೆಸದವರು ಪಿಕೆಟಿಂಗ ಮಾಡಿ, ಸವಾಲು ಮಾಡದಂತೆ ಗುತ್ತೆದಾರರ ಮನವೊಲಿಸುವರಷ್ಟೇ; ಈ ಪ್ರಕಾರ ಸವಾಲಿನ ಕಚೇರಿಗಳ ಮುಂದೆ ಪಿಕೆಟಿಂಗ ಮಾಡುವದು ಗಾಂಧಿ-ಆಯರ್ವಿನ ಕರಾರಿನ ಭಾಗವಾಗುವದಿಲ್ಲ. ಅವರಿಗೆ ಅಲ್ಲಿ ಪಿಕೆಟಿಂಗ ಮಾಡುವ ಅಧಿಕಾರ ಬರುವದಿಲ್ಲ. ಇದು ಕುಡಿಯುವ ಸ್ಥಳವಲ್ಲ. ಆದ್ದರಿಂದ ಇಲ್ಲಿ ಪಿಕೆಟಿಂಗವಾಗದಂತೆ ಛದೆಸ್ತ್ರೀಪಾಯ ಕೈಕೊಳ್ಳಬೇಕೆಂದು ಮುದ್ರಾಸ ಇಲಾಖೆಯ ಅಬಕಾರಿ ಖಾತೆಯ ಇನ್ಸಪೇಕ್ಟರ ಜನರಲ ಸಾಹೇಬರು ಒಂದು ಸರಕ್ಯೂಲರ ತೆಗೆದು, ಅದನ್ನು ಜಿಲ್ಲಾ ಕಲೆಕ್ಟರರ ಕಡೆಗೆ ಕಳಿಸಿದ್ದಾರೆ.

ಗಡಂಗಗಳ ಮುಂದೆ ವಕೀಲರ ಪಿಕೆಟಿಂಗ

....(೦)....

ಚಿಕ್ಕಮಗಳೂರು ಜಿಲ್ಹೆಯ ಸ್ಥಳ - ಅಲ್ಲಿಯ ವಕೀಲರು ಸ್ವಯಂಸೇವಕರಾಗಿ ಗಡಂಗಗಳ ಮುಂದೆ ಪಿಕೆಟಿಂಗ ನಡೆಸಿದರು. ಮೂರೇ ದಿವಸಗಳಲ್ಲಿ ಗಡಂಗಗಳ ಮುಂದೆ ನೊಣ ಹೋಗದಂತಾಯಿತು. ಅಧಿಕಾರಿಗಳು ಎಚ್ಚರಾಗಿ, ವಕೀಲರು ಪಿಕೆಟಿಂಗ ಮಾಡಬಾರದೆಂದು ೧೪೪ ನೆಯ ಕಲಮಿನ ಶಾಂತತಾಭಂಗದ ನೋಟೀಸು ತೆಗೆದಿದ್ದಾರೆ. ಅಧಿಕಾರಿಗಳು ಒಡಂಬಡಿಕೆಯ ಶರ್ತುಗಳನ್ನು ಹೇಗೆ ಮುರಿಯುತ್ತಾರೆಂಬದಕ್ಕೆ ಇದಕ್ಕೂ ಹೆಚ್ಚಿನ ದೃಷ್ಟಾಂತ ಯಾವದು ಬೇಕು?

ಶ್ರೀ ನಗರದಲ್ಲಿ ಭಯಂಕರ ದಂಗೆ

....(೦)....

ಕಾಶ್ಮೀರದ ರಾಜಧಾನಿಯಾದ ಶ್ರೀ ನಗರದಲ್ಲಿ ಮುಸಲಮಾನರು ಹಿಂದೂ ಜನರ ವಿರುದ್ಧ ದಂಗೆ ಮಾಡಿದರು. ದಂಗೆಯನ್ನು ಶಾಂತಮಾಡಲು- ದಂಡಿನವರು ಗುಂಡು ಹಾರಿಸಲು ಒಂಬತ್ತು ಜನ ಮುಸಲಮಾನರು ಸತ್ತರು. ಬಳಿಕ ದಂಗೆ ಶಾಂತವಾಯಿತು.

ವಿವಿಧ ವರ್ತಮಾನಗಳು

—(೦)—

ಪುಣೆಯಲ್ಲಿ ಶ್ರೀ. ಗಾಡಗೀಳರೆಂಬವರು ತಮ್ಮ ಮನೆಯ ಬೀಳ ಸ್ಥಳವನ್ನು ಬೇಕಾಯದೇಶೀರವಾದ ಕಾಂಗ್ರೆಸ ಕಚೇರಿಗೆ ಕೊಟ್ಟರು. ಕಾಂಗ್ರೆಸದವರು ಅಲ್ಲಿ ಧ್ವಜ ಹಾಕಿದರು. ಪರವಾನಗಿಯಿಲ್ಲದೆ ಕಟ್ಟಿದ್ದನ್ನೇ ಕಿತ್ತಬೇಕೆಂದು ಕಲೆಕ್ಟರರು ಇವರ ಮೇಲೆ ನೋಟೀಸು ತೆಗೆದರು. ಇದು ಇನಾಮು ಭೂಮಿಯು ನಿಮಗೆ ಅಧಿಕಾರವಿಲ್ಲೆಂದು ಶ್ರೀ. ಗಾಡಗೀಳರು ಹೇಳಲು- ಸಾಹೇಬರ ಬಾಯಿ ಬಂದಾಯಿತು.

ಸಾತಾರೆಯ ವೆಸ್ಟರ್ನ ಇಂಡಿಯಾ ಲಾಯಿಫ ಅಸ್ಯುರನ್ಸ ಕಂಪನಿಯ ಮುಖ್ಯ ಎಜಂಟರು ಕೆಲಸದಿಂದ ನಿವೃತ್ತರಾದರು- ಕಂಪನಿಯನ್ನು ಒಳ್ಳೇ ಬೆಳಗಿಗೆ ತಂದದ್ದರ ಉಪಕಾರವೆಂದು ಕಂಪನಿಯವರು ಇವರಿಗೆ ೧೫ ಸಾವಿರ ರೂಪಾಯಿಗಳ ಥೈಲಿಯನ್ನು ಬಹುಮಾನವಾಗಿ ಕೊಟ್ಟರು.

ಹೈದರಾಬಾದಿನ ಕಾಲೇಜದಲ್ಲಿ ಪ್ರೊಫೇಸರ ಫಜಲು ರಹಿಮಾನನೆಂಬವನು ರಾಷ್ಟ್ರೀಯ ವೃತ್ತಿಯವನಾಗಿದ್ದರಿಂದ ನಿಜಾಮ ಸರಕಾರದಿಂದ ಇವನಿಗೆ ಮನೆಗೆ ಅಪ್ಪಣೆಯಾಯಿತು.

ಹೈದರಾಬಾದ ಪ್ರಜಾಪರಿಷತ್ತನ್ನು ವರ್ಹಾಡದಲ್ಲಿ ಸೇರಿಸಿ, ತಮ್ಮ ಮಹತ್ವಾಕಾಂಕ್ಷೆಗಳನ್ನು ರಾವುಂಡ ಟೇಬಲಿಗೆ ತಿಳಿಸುವ ಠರಾವುಗಳನ್ನು ಮಾಡುವರು.

ಕಾಶಿಯ ವಿದ್ಯಾಪೀಠದಲ್ಲಿ ಒಕ್ಕಲತನದ ಶಿಕ್ಷಣದ ಬೆಳವಣಿಗೆಗಾಗಿ ಜೋಧಪೂರದ ಮಹಾರಾಜರು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಗೋವೆಯ ಹಾಯಕೋರ್ಟಿನ ಮುಖ್ಯ ಜಡ್ಜರಾದ ಮಿ. ಅಂತೋನಿಯೋ ಸೋರೋನಾ ಸಾ [illegible]

ಎರಡನೆಯ ನೋಟೀಸು

—(೦)—

ಬಾಳಪ್ಪಾ ಚೆನ್ನಪ್ಪಾ ಗುಳನಕೊಪ್ಪನವರ ಸಾ॥ ಲೋಕೂರ ತಾಲೂಕ ಧಾರವಾಡ ಇವರಿಗೆ—

ಕೆಳಗೆ ಹೆಬ್ಬೆಳಿನ ಗುರ್ತ ಮಾಡಿದ ಬಸವ್ವಾ ಕೋಮ ಬಾಳಪ್ಪಾ ಗೂಳನಕೊಪ್ಪದವರ ಇವಳು ನಿನಗೆ ಈ ನೋಟೀಸಿನಿಂದ ತಿಳಿಸುವದೇನೆಂದರೆ—

ನಾನು ನಿನಗೆ [illegible] ರಾಜಹಂಸ ಪತ್ರದಲ್ಲಿ ಒಂದು ನೋಟೀಸು ಕೊಟ್ಟಿದ್ದೆನು. ಆ ನೋಟೀಸು ಮುಟ್ಟಿದ ನಂತರ ನಿನ್ನ ತರ್ಫೆಯಿಂದಾ ನಾಲ್ಕು ಜನ ಕುಂಟರು ಒಂದು ಬಲಜಬರಿಯಿಂದ ನನ್ನನ್ನು ಅಮಾತ ಕರಕೊಂಡು, ನಿನ್ನ ಮನೆಗೆ ಕರೆತಂದರು. ನೀನು [illegible]ನಿದ್ದೀದಿ. ನಿನ್ನ ಫುಸಲತ್ತಿನಿಂದ ನಿನ್ನ ಮುದಿ ಈ ಹೆಂಡತಿಯು ಮಗಾ ಮತ್ತು ಬೇರೆ ಜನರು ನನ್ನನ್ನು ಪುನಃ ಪರಿಪರಿ ಉರಸಿಗೊಳ್ಳಲಿಕ್ಕೆ ಹತ್ತಿದರು. ಆ ತ್ರಾಸ ತಾಳಲಾರದೆ. ನಾನು ಪುನಃ ನಿನ್ನ ಮನೀ ಬಿಟ್ಟು, ಬಂದಿರುತ್ತೇನೆ. ನಿನ್ನ ತರ್ಫೆ ಜನರು ಮೊದಲಿನಂತೆ ನಾನಿದ್ದಲ್ಲಿಗೆ ಬಂದು ನನ್ನ ಮೇಲೆ ಬಲಾತ್ಕಾರ ನಡಿಸುವ ಸಂಭವವುಂಟು. ನಾನು ನಿರಾಧಾರಿ ಹೆಣ್ಣುಮಗಳಿದ್ದೇನೆ ನನಗೆ ಯಾರೂ ಹಿತಕರ್ತರೂ, ಸಂಬಂಧಿಕರೂ ಇರುವದಿಲ್ಲ. ಅದ್ದರಿಂದ ನಿನ್ನ ತರ್ಫೆ ಜನರು ನನ್ನಲ್ಲಿಗೆ ಬಂದು, ನನ್ನ ಮೇಲೆ ಜುಲುಮೆ ಮಾಡಿದರೆ- ನಾನು ಅವರ ಮೇಲೆ ಕಾಯದೇಶೀರ ಇಲಾಜ ಮಾಡಬೇಕಾದೀತು. ಅದ್ದರಿಂದ ನೀನು ಬುದ್ಧಿಪೂರ್ವಕವಾಗಲಿ, ಅಥವಾ ನಿನಗೆ ತಿಳಿಯದೆಯಾಗಲಿ, ಯಾರಾದರೂ ಬಂದು, ನನ್ನನ್ನು ಹಿಡಿದು ಎಳಕೊಂಡು ಹೋಗುವಂಥ ಜುಲುಮೆಯ ಕೃತ್ಯ ನಡೆಸಿದರೆ, ನಾನು ನನಗೆ ಯೋಗ್ಯರೀತಿ ತೋರಿದ ಪ್ರಕಾರ ಅವರ ಮೇಲೆ ಫೌಜದಾರಿಯಲ್ಲಿ ಫಿರ್ಯಾದಿ ಮಾಡುವೆನು. ಅದ್ದರಿಂದ ನೀನು ಈ ವಿಷಯವಾಗಿ ಮುಂದಾಗಿಯೇ ವಿಚಾರ ಮಾಡಬೇಕು. ನನ್ನ ಮೈಗೆ [illegible] ಕೈ ಹಚ್ಚಿದರೆ- ಅದರ ಪರಿಣಾಮ ನೆಟ್ಟಗಾಗಲಾರದೆಂದು ತಿಳಿಯಬೇಕೆಂದು ಕೊಟ್ಟ- ನೋಟೀಸು ತಾ॥ ೧೫ ಜುಲೈ ೧೯೩೧ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಬಸವ್ವಾ ಕೋಮ ಬಾಳಪ್ಪಾ ಗುಳನಕೊಪ್ಪನವರ ಈಕಿಯದು ಇರುತ್ತದೆ.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

“ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು [illegible] ಮಂಜೂರಾಗಿವೆ.”

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,
೬	ದುರ್ಗಸಿಂಹನ ಪಂಚತಂತ್ರ ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,,
೧೨	ಸತ್ಕಥಾ [illegible] ಮಂಜರಿ IV)	೧೦	,,
೧೩	ಪ್ರೇಮ[illegible]ರ	೮	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹಪ[illegible]	೮	,,
೧೭	ಮೋ[illegible] ಬಿಂದಕರ ನಡಾವ	೮	,,
೪೦	ಕನ್ನಡ [illegible] ತಲೆಯೆತ್ತು[illegible]ಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಲಿದಾಸ	೬	,,
೨೦	ಕರ್ನಾಟಕ ಸ್ವಪ್ನ ವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೬	,,
೨೪	ಬೇಗಮ್ ಸಮರು	೬	,,
೨೫	ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಜರ್ಮನರ ಶಿಕ್ಷಣಪದ್ಧತಿ	೪	,,
೩೨	ಶೇರಷಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	[illegible]	೩	
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	,,
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ. ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಪ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ. ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ ೧—೪—೦

೪. ಶ್ರೀಹರ್ಷನೂ ಆತನ ನಾಟಕಗಳೂ [ನಾ. ಪ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು. ೦—೧೦—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1445.

[illegible]

ವಿಜಯ

[illegible]

ಸಂಪಾದಕರು:- ಅಚ್ಯುತಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೩ ಧಾರವಾಡ ಶುಕ್ರವಾರ ತಾರೀಖು ೧೭ ನೇ ಜುಲೈ ೧೯೩೧ (ಸಂಚಿಕೆ ೧೬೩

The Asian Life Assurance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್ ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯು

ವಿಮೆಯ ರಕಮು ರೂ. ೧,೨೫,೦೦೦,೦೦ ಕಂಚದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರುಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೩೪,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರ ಬರೆಯಿರಿ.

ಮೆಸರ್ಸ ರಾಮಚಂದ್ರ ದತ್ತೊ ಕುಲಕರ್ಣಿ, ಧಾರವಾಡದ ಏಜಂಟರು.
ಬಿ. ಎಚ್. ಪಾಟೀಲ
ಹಾವೇರಿಯ ಜಿಲ್ಹ ಏಜಂಟರು.

ಕೆ. ಪ್ಲಿ. ಹುಲಸೋಗಿ, ಬಿ. ಎ.
ಕರ್ನಾಟಕದ ಜನ್ರಲ ಮ್ಯಾನೇಜರ
ಹುಬಳಿಯ ಏಜಂಟರು-
ಶ್ರೀ ಎಸ್. ಎನ್. ದೊಡ್ಡವಾಡ ಶಾಸ್ತ್ರಿ
ಶ್ರೀ. ಬಿ. ಟಿ. ಶಿರೋಳಕರ.

ಅನುಸ್ರು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦೦ ರೂ. ಗಳನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಹಂತುಗಳ ಹಣ ತೀರ ಸ್ವಲ್ಪ. ಕಂಪನಿಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂಥಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಏಳು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರಗವು ಮಾಡಲ್ಪಡುವವು. ಕಾಯಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಪಟಾಳೆ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೨-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ.

ವಿಜಯ.

ತಾರೀಖು ೧೭-೭-೧೯೩೧ನೇ ಇಸ್ವಿ

ಶ್ರೀನಗರದಲ್ಲಾದ ಮುಸಲ್ಮಾನರ ಭಯಂಕರ ದಂಗೆ

ಕಾಶ್ಮೀರದ ರಾಜಧಾನಿಯಾದ ಶ್ರೀನಗರದಲ್ಲಿ ಮುಸಲ್ಮಾನರು ಭಯಂಕರ ದಂಗೆ ಮಾಡಿದರು. ಕೆಲವು ದಿವಸಗಳ ಹಿಂದೆ ಒಬ್ಬ ಹಿಂದೂ ಪೋಲೀಸ ಕಾಮದಾರನಿಗೂ, ಆತನ ಕೈಕೆಳಗಿನ ಮುಸಲ್ಮಾನ ಸಿಪಾಯಿಗೂ ಬಾಯಿಗೆ ಬಾಯಿ ಹತ್ತಿತು. ಹಿಂದೂ ಕಾಮದಾರನು ಆ ಸಿಪಾಯಿಯ ಕಯ್ಯಲ್ಲಿಯ ಕುರಾಣ ಕಸಕೊಂಡು, ಬಿರಕಾಸಿ ಒಗೆದದ್ದೇ ದಂಗೆಗೆ ಮೂಲವಾಯಿತೆಂದು ಹೇಳುವರು. ಸಿಪಾಯಿಯು ತನ್ನ ಅಮಲದಾರನ ಉದ್ಧಟತನದ ವಿರುದ್ಧ ವರಿಷ್ಠ ಅಮಲದಾರರ ಕಡೆಗೆ ಫಿರ್ಯಾದಿ ಮಾಡದೆ, ನಮಾಜ ಕಾಲದಲ್ಲಿ ದೂರಿಕೊಂಡನು. ಆಗ ಮುಸಲ್ಮಾನರು ಸಂತಾಪಗೊಂಡು, ಮುಲ್ತಾನದಿಂದ ಒಬ್ಬ ಮುಸಲ್ಮಾನ ಪ್ರಚಾರಕನನ್ನು ತಂದರು. ಆತನು ಮಸೀದೆಯಲ್ಲಿ ಹಿಂದೂ ಜನರ ವಿರುದ್ಧ ಮುಸಲ್ಮಾನರನ್ನು ಆದಷ್ಟು ರೇಗಿಸಿದನು. ಈ ಪ್ರಚಾರಕನು ಶಾಂತತಾಭಂಗಕ್ಕೆ ಉತ್ತೇಜನ ಕೊಡುತ್ತಾನೆಂದು ಪೋಲೀಸರು ಈತನ ಮೇಲೆ ಫೌಜದಾರಿಯಲ್ಲಿ ಕೆಲಸ ನಡಿಸಿದರು. ಅದರ ನಿರ್ಣಯವು ಬುಧವಾರ ದಿವಸವಾಗತಕ್ಕದ್ದಿತ್ತು. ಆದರೆ ಕೋಪಪರವಶರಾದಂಥ ಮುಸಲ್ಮಾನರು ಪ್ರಚಾರಕನನ್ನು ಇಟ್ಟಂಥ ತುರಂಗದ ಮೇಲೆ ಅಭಿಯೋಗ ಮಾಡಿ, ಆತನನ್ನು ಬಿಡಿಸಿ ತರುವದಕ್ಕಾಗಿ ತುರಂಗಕ್ಕೆ ಹೋಗಿ, ತುರಂಗ ಮತ್ತು ಅರಮನೆಯ ನಡುವಿನ ಟೆಲಿಫೋನಿನ ತಂತಿ ಕತ್ತರಿಸಿ, ತುರಂಗದ ಪೋಲೀಸರ ಮೇಲೆ ಕಲ್ಲು ಮತ್ತು ಬಡಿಗೆಗಳ ಮಳೆ ಸುರಿಸಿದರು. ಪೋಲೀಸರು ನಿರುಪಾಯರಾಗಿ, ದಂಗೆಗಾರರ ಮೇಲೆ ಗುಂಡು ಹಾಕಲು ೧೦ ಜನ ಮುಸಲ್ಮಾನರು ಗುಂಡು ತಾಕಿ ಸತ್ತು ಬಿದ್ದರು. ೬೦ ಜನರು ಘಾಯವಾಗಿದ್ದಾರೆ.

ಅಲ್ಲಿ ತಮ್ಮ ಕಾರ್ಯ ಸಾಗದಾಗಲು ಮುಸಲ್ಮಾನರು ಊರೊಳಗೆ ಬಂದು, ಗುಪ್ತರೀತಿಯಿಂದ ಹಿಂದೂ ಜನರನ್ನು ಹೊಡೆದರು. ಅವರ ಅಂಗಡಿಗಳಲ್ಲಿ ಲೂಟಿ ಮಾಡಿದರು. ಕೆಲವು ಅಂಗಡಿಗಳಿಗೆ ಬೆಂಕಿ ಹಚ್ಚಿದರು. ದಂಗೆಯ ಆಟೋಪ ಮೀರುವದನ್ನು ಕಂಡು, ದಂಡು ತಂದು ದಂಗೆಯನ್ನು ಶಾಂತಪಡಿಸಿದರು.

ಮುಂಬಯಿಯಲ್ಲಿ
ರಾಷ್ಟ್ರೀಯ ನಿಶಾನೆಯ ವ್ಯಾಜ.!

—(೦)—

ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ರಾಷ್ಟ್ರೀಯ ನಿಶಾಣನ್ನೇರಿಸುವ ವಿಷಯ ಹೊರಟಿತು. ಆಗ ಅನೇಕ ಸ್ವಯಂಸೇವಿಕೆಯರು ನಾಡಗುಡಿ ಹಿಡಕೊಂಡು, ವಿಷಯದ ವಾದ ವಿವಾದ ನೋಡಲಿಕ್ಕೆ ಹೋಗಿದ್ದರು. ಮಹಾತ್ಮರಿಗೆ ಹಿಂದೀ ಕಲಿಯುವ ಉಪದೇಶ ಮಾಡಿದ ಮಿ. ಜೋಸ.ನ ಬೆಹರಾಮಸಾಹೇಬರು ಅಧ್ಯಕ್ಷರಾಗಿದ್ದಾರೆ. ಇವರು ಸ್ವಯಂಸೇವಿಕೆಯರಿಗೆ ಎದ್ದು ಹೋಗಿರಿ. ಇಲ್ಲವಾದರೆ-ನಿಶಾನೆಗಳನ್ನು ಕೆಳಗಿಡಿರೆಂದು ಹುಕುಮು ಮಾಡಿದರು. ಆಗ ಶ್ರೀ. ನರೀಮನ್ನರು- ಇಲ್ಲಿಂದ ಯಾರೂ ದೇಶಸೇವಿಕೆಯರನ್ನು ಹೊರಗೆ ಹಾಕಲಾರರು. ಹಾಗೆ ಯಾರಾದರೂ ಮಾಡಿದ್ದಾದರೆ-ಪರಿಣಾಮ ನೆಟ್ಟಗಾಗಲಾರದೆಂದು ಗುಡುಗು ಹಾಕಿದರು. ಅಧ್ಯಕ್ಷರು ಹೆದರಿಕೊಂಡು ಸೇವಿಕೆಯರು ಇರಲಿಕ್ಕೆ ಅಡ್ಡಿಯಿಲ್ಲ. ಆದರೆ ಅವರು ನಿಶಾನೆಯನ್ನು ಮಾತ್ರ ಕೆಳಗಿಡಬೇಕೆಂದು ಆಗ್ರಹ ಹಿಡಿದರು. ಕೂಡಲೆ ಶ್ರೀ ನರಿಮನ್ನರು ಸೇವಿಕೆಯರ ಕಯ್ಯಲ್ಲಿದ್ದ ನಿಶಾನೆ ಇಸಕೊಂಡು, ಅದನ್ನು ತಮ್ಮ ಮೇಜಿನ ಮೇಲೆ ನಿಲ್ಲಿಸಿದರು. ಬೇರೆ ಮೂವರು ಮೆಂಬರರು ಇವರನ್ನನುಕರಿಸಿದರು. ಈ ಗದ್ದಲ ನಡೆದಾಗ ಒಬ್ಬ ಗುಪ್ತ ಪೋಲೀಸ ಅಮಲದಾರನು ಬಂದು ಕೂತದ್ದನ್ನು ಕಂಡರು. ಆತನನ್ನು ಹೊರಗೆ ಹಾಕಬೇಕೆಂದು ಗೊಂದಲವೆದ್ದಿತು. ಅಧ್ಯಕ್ಷರು ಹುಕುಮು ಮಾಡಲು- ಆತನು ಎದ್ದು ಹೋದನು. ನಂತರ ಮುಂದಿನ ಪ್ರಶ್ನೋತ್ತರಗಳು ನಡೆದವು.

ಡಾಕ್ಟರ ಕಾಲೆಕರ- ರಾಷ್ಟ್ರೀಯ ನಿಶಾನೆ ಎಂದರೇನೆಂಬದು ನನಗೆ ತಿಳಿಯುವದೇ ಇಲ್ಲ. ಇದರಿಂದ ಮ್ಯುನಿಸಿಪಾಲಿಟಿಯ ಕೆಲಸದಲ್ಲಿ ಏನಾದರೂ ಸಿಸ್ತು ಹುಟ್ಟುವದೋ?

ಶ್ರೀ ನರಿಮನ್ನ- ಯುನಿಯನ್ನ ಜಾಕದಿಂದ ಸಿಸ್ತು ಹುಟ್ಟುತ್ತದೆ.

ಡಾಕ್ಟರ ಕಾಲಿಕರ-ಹೌದು ಸಿಸ್ತು ಹುಟ್ಟುತ್ತದೆ,

ಆಗ ಪ್ರೇಕ್ಷಕರು ಇವರ ಮೇಲೆ ಶೇಮ ಶೇಮ ಶಬ್ದಗಳ ಸುರಿಮಳೆಗರೆದರು.

ಬಳಿಕ ರಾವುಂಡಟೇಬಲಿನಲ್ಲಿ ಹಿಂದೀ ಸ್ವರಾಜ್ಯ ಪ್ರಶ್ನೆಯ ನಿರ್ಣಯವಾಗುವ ತನಕ ಈ ವಿಚಾರವನ್ನು ತಹಕೂಬ ಮಾಡಬೇಕೆಂದು ಬಹುಮತವಾಗಿ ವಾದವಿವಾದವು ಮುಂದೆ ಹಾಕಲ್ಪಟ್ಟಿತು. ಇಷ್ಟರಲ್ಲಿ ಕೆಲವರು ಉಪ್ಪರಿಗೆಯ ಮೇಲೆ ಹೋಗಿ ನಿಶಾನೆಯನ್ನೇರಿಸಿ ಬಿಟ್ಟರು.

ಬೆಳಗಾವಿಯಲ್ಲಿ ನಾಮದಾರ ಬೆಳವಿಯವರು ಸ್ವತಃ ಪಿಕೆಟಿಂಗ ಮಾಡುವರು.

—(೦)—

ಬೆಳಗಾವಿಯಲ್ಲಿ ಪರದೇಶೀ ಬಟ್ಟೆಗಳ ಅಂಗಡಿಗಳ ಮುಂದೆ ಅಷ್ಟು ಕಟ್ಟಾಗಿ ವ್ಯವಸ್ಥೆ ಮಾಡಲು ಶ್ರೀ. ದೇಶಪಾಂಡೆ ಗಂಗಾಧರರಾಯರು, ಶ್ರೀ. ಗೋಖಲೆ ಮೊದಲಾದವರು ಒಂದು ಸಭೆ ಮಾಡಿ, ಪಿಕೆಟಿಂಗವನ್ನು ಯಶಸ್ವಿಯಾಗಿ ಮಾಡುವಂತೆ ಪೂರ್ವೋಪಾಯಗಳನ್ನು ಮಾಡಿದರು. ಪುರುಷರಿಗಿಂತ ಸ್ತ್ರೀಯರಿಂದ ಈ ಕಾರ್ಯವು ತೀವ್ರವೇ ಯಶಸ್ವಿಯಾಗುವದೆಂದು ನಾಲ್ಕೂಕಡೆಗೆ ಅನುಭವಕ್ಕೆ ಬಂದದ್ದರಿಂದ, ಸ್ತ್ರೀಯರದೊಂದು ಪಥಕ ಕಟ್ಟುವಂತೆ ಸಭೆಯಲ್ಲಿ ನಿರ್ಣಯಮಾಡಿದ್ದಾರೆ. ಪಿಕೆಟಿಂಗ ವಿಷಯವಾಗಿ ನಾಮದಾರ ಬೆಳವಿಯವರು ಹುರುಪುಗೊಂಡಿದ್ದು, ಸ್ವತಃ ಪಿಕೆಟಿಂಗ ಪ್ರಾರಂಭಿಸಿದ್ದಾರೆ. ನಾಮದಾರ ಬೆಳವಿಯವರಂತೆ ಪ್ರತಿಯೊಂದು ಊರಿನ ಮುಖಂಡರು ಪಿಕೆಟಿಂಗಕ್ಕೆ ನಿಂತರೆ - ಗುಂಡು ಹೊಡೆದಂತೆ ಪಿಕೆಟಿಂಗಕ್ಕೆ ಜಯಬರುವದುಂಟು.

ಹುಬ್ಬಳ್ಳಿಯ ಮಾರಿಕಾ !!

—(೦)—

ಹುಬ್ಬಳ್ಳಿಯಲ್ಲಿ ಹೃದಯದ್ರಾವಕವಾಗಿ ಹಾಹಾಕಾರವನ್ನುಂಟು ಮಾಡಿದ ಮಾರಿಕಾ ಬೇನೆಯ ಜಿಸೆಯಿಂದ ಮುಂಬಯಿಯ ವರ್ತಮಾನಪತ್ರಗಳಲ್ಲಿ ಈ ಕೆಳಗಿನ ಟೀಕೆಯು ಪ್ರಸಿದ್ಧವಾಗಿರುತ್ತದೆ.

ಒಂದು ತಿಂಗಳಾಯಿತು. ಬೇನೆಯು ಉಗ್ರಸ್ವರೂಪಧಾರಣಮಾಡಿ ಹಬ್ಬುತ್ತಲಿದೆ. ಮ್ಯುನಿಸಿಪಾಲಿಟಿಯು ಬೇನೆಯನ್ನು ನಿಲ್ಲಿಸುವದಕ್ಕಾಗಿ ಸಾಕಷ್ಟು ಉಪಾಯಗಳನ್ನು ಕೈಕೊಂಡಿಲ್ಲ. ಖಾಸಗೀ ಡಾಕ್ಟರರಿಗೆ ಮಾರಿಕಾ ವ್ಯಾಧಿಯ ಲಸಿಕೆಯು ದೊರೆಯದ್ದರಿಂದ ಅವರು ಇನೋಕ್ಯುಲೇಶನ ಮಾಡಲು ಯತ್ನ ಮೀರಿದ್ದಾರೆ. ಸರಕಾರೀ ಮತ್ತು ಬೇರೆ ಡಾಕ್ಟರರು ಅದರ ಗುತ್ತಿಗೆ ಹೊಕ್ಕಂತಾಗಿರುತ್ತದೆ. ಪರಮ್ಯಾಂಗನೇಟ ಗುಳಿಗೆಗಳು ಸಹ ಸುಸೂತ್ರ ಸಿಗುವದಿಲ್ಲ. ಬೇನೆಯನ್ನು ಹತ್ತಿಕ್ಕಲು ಮ್ಯುನಿಸಿಪಾಲಿಟಿಯು ಬೇರೆ ಖಾಸಗಿ ಸಂಸ್ಥೆಗಳ ಕೂಡ ಸಹಕಾರ ಮಾಡುವದಿಲ್ಲ.

ಬ್ಯಾರಿಸ್ಟರ ನಾರ್ಟನಸಾಹೇಬರ ಮೃತ್ಯು

—(೦)—

ಸುಪ್ರಸಿದ್ಧ ಬ್ಯಾರಿಸ್ಟರರಾಗಿದ್ದ ಮಿ. ನಾರ್ಟನಸಾಹೇಬರು ಇಂಗ್ಲಂಡದಲ್ಲಿ ಪರಲೋಕವಾಸಿಯಾದರೆಂದು ಬಂದ ತಾರಿನ ವರ್ತಮಾನವನ್ನು ಪ್ರಸಿದ್ಧ ಮಾಡುವದಕ್ಕೆ ವಿಷಾದಿಸುತ್ತೇವೆ.

ಸಾಹೇಬರು ಈ ಪ್ರಾಂತದಲ್ಲಿ ಹೆಸರಾದ ಬ್ಯಾರಿಸ್ಟರರಾಗಿದ್ದರು. ದಿನಾಲು ಸಾವಿರೆರಡು ಸಾವಿರ ರೂಪಾಯಿ ತಕ್ಕೊಂಡು ಕೆಲಸ ಹಿಡಿಯುವರು. ಫೌಜದಾರಿ ಪ್ರಕರಣಗಳಲ್ಲಿ ನಿಷ್ಣಾತರು, ಸರಕಾರದವರು ಕೂಡ ಅವರನ್ನು ತಮ್ಮ ಪತಿಯಿಂದ ನೇಮಿಸುವರು. ಇವರು ಧಾರವಾಡ ಸೆಶನ ಕೋರ್ಟಿನಲ್ಲಿ ಎರಡು ಫೌಜದಾರಿ ಪ್ರಕರಣಗಳನ್ನು ನಡಿಸಲಿಕ್ಕೆ ಬಂದಿದ್ದರು. ಆದರೆ ಇವರಿಗೆ ಇತ್ತೀಚೆಗಲ್ಲಿಯೂ ಯಶ ಬರಲಿಲ್ಲ.

ಹೆಸರಾದ ವಕೀಲರಾಗಿದ್ದಂತೆ ಕಾಂಗ್ರೆಸದ ಭಕ್ತರೂ ಆಗಿದ್ದರು ಇವರ ಮರಣದ ವರ್ತಮಾನ ಕೇಳಿ, ಯಾರಿಗಾದರೂ ವಿಷಾದವೆನಿಸಬಹುದು.

ಇಂಗ್ಲಂಡದ ಜವಳೀ ವ್ಯಾಪಾರವು ಎಷ್ಟು ಮುಗ್ಗಿತು?

—(೦)—

೧೯೩೦ ನೇ ಇಸವಿಯು ಜೂನ ತಿಂಗಳಿಗೆ ಮುಗಿಯುವ ಮೊದಲಿನ ಆರು ತಿಂಗಳಲ್ಲಿ ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ಹದಿನಾರು ಕೋಟಿಯ ಅರಿವೆ ಬಂದಿತ್ತು. ನಡೆಯುವ ೧೯೩೧ ನೆಯ ಇಸವಿಯ ಆರು ತಿಂಗಳಲ್ಲಿ ನಾಲ್ಕು ಕೋಟಿಯ ಅರಿವೆ ಬಂದಿದೆ. ಪಿಕೆಟಿಂಗ ಹೆಚ್ಚಾದಂತೆ ಮುಂದಿನ ಆರು ತಿಂಗಳಲ್ಲಿ ಈ ಸಂಖ್ಯೆಯೂ ಎಷ್ಟೋ ಕಡಿಮೆಯಾಗುವದು.

ಇಂಗ್ಲಿಷರು ಹಿಂದುಸ್ಥಾನವನ್ನೆಂದಿಗೂ ಬಿಡರು.

—(೦)—

ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯಕೊಡಬೇಕೆಂಬ ಆಸೆಯು ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾರೆ. ಇಂಗ್ಲಿಷ ಜನರು ಹಿಂದುಸ್ಥಾನದಲ್ಲಿ ಹೇರಳವಾಗಿ ಹಣ ಹಾಕಿದ್ದಾರೆ. ಅವರೆಂದಿಗೂ ಅದರ ಮೇಲೆ ನೀರು ಬಿಡಲಾರರು. ಇಂಗ್ಲಂಡವು ಎಂದೆಂದಿಗೂ ಹಿಂದುಸ್ಥಾನವನ್ನು ಬಿಟ್ಟು ಕೊಡಲಾರದು. ಮತ್ತು ವಸಾಹತಿನ ಸ್ವರಾಜ್ಯವೆಂಬದಕ್ಕೆ ಎಂದಿಗೂ ಒಪ್ಪಿಗೆ ಕೊಡಲಾರೆವೆಂದು ಲಾರ್ಡ [illegible] ಸಾಹೇಬರು ಹೇಳುತ್ತಾರೆ. ಲಾರ್ಡ ಸಾಹೇಬರ ಮಾತು ಬಲಿರಾಜನು ದಾನ ಕೊಡುವಾಗ ಶುಕ್ರಾಚಾರ್ಯನು ಅಡ್ಡ ಬಂದಂತಾಗುವದೇ ಸೈ.

ವಿವಿಧ ವಿಷಯಗಳು.

ಆಸಾಮದ ವಿದ್ಯಾಖಾತೆಯ ಡಾಯರೆಕ್ಟರರು ಕಾಯದೆಭಂಗದಲ್ಲಿ ಈನಂತರ ಸೇರುವದಿಲ್ಲೆಂದು ವಿದ್ಯಾರ್ಥಿಗಳಿಂದ ಜಾಮೀನು ಬೇಡಿದ್ದಾರಷ್ಟೇ; ಈ ವಿಷಯವಾಗಿ ಗವ್ಹರ್ನರಸಾಹೇಬರನ್ನು ಸಮಕ್ಷಮ ಕಂಡು ಕೇಳಲು- ತಾವು ಇದರಲ್ಲಿ ಕೈ ಹಾಕುವದಿಲ್ಲೆಂದು ಸಾಹೇಬರು ಉತ್ತರ ಕೊಟ್ಟರು. ಇದೂ ಸಾಹೇಬರಿಗೆ ಬೇಕಾದ ಮಾತಲ್ಲವೇ ?

ಮುಂಬಯಿಯ ಸುಪ್ರಸಿದ್ಧ ಮತ್ತು ದಾನಶೂರ ಗೃಹಸ್ಥರಾದ ಶ್ರೀ ಕೆ. ಬಿ ಗೋಖಲೆಯವರು ಪುಣೆಯಲ್ಲಿ ರೌಪ್ಯತುಲಾಭಾರ ಮಾಡಿಸಿಕೊಂಡರು. ಇದರಿಂದ ಬರುವ ಮೂರೂವರೆ ಸಾವಿರ ರೂಪಾಯಿಗಳನ್ನು ಅಲ್ಲಿ ಕಟ್ಟುತ್ತಿರುವ ಅನಾಥ ವಿದ್ಯಾರ್ಥಿಗೃಹದ ಶ್ರೀರಾಮಮಂದಿರಕ್ಕಾಗಿ ವ್ಯಯ ಮಾಡುವರು.

ಹುಬ್ಬಳ್ಳಿಯಲ್ಲಿ ಮಾರಕ ಬೇನೆಯು ಭಯಂಕರವಾಗಿದೆ ಹಳೇ ಹುಬ್ಬಳ್ಳಿ ಬಿಟ್ಟು, ಹೊಸ ಹುಬ್ಬಳ್ಳಿಗೆ ಬಂದಿದೆ. ಬೇನೆಯ ಹಾಹಾಕಾರದ ದೆಸೆಯಿಂದ ನ್ಯೂಇಂಗ್ಲಿಷ ಶಾಲೆಯನ್ನು ಒಂದು ವಾರ ಬಂದಿಟ್ಟಿದ್ದಾರೆ

ಹುಬ್ಬಳ್ಳಿಯ ವರ್ಕಶಾಪಿನಲ್ಲಿ ಕೆಲಸ ಮಾಡುತ್ತಿರುವಂಥ ೩೫ ಜನ ಉಮೇದವಾರರಿಗೆ ಕಂಪನಿಯವರು ನೋಟೀಸು ಕೊಟ್ಟದ್ದರಿಂದ ಕೆಲಸಗಾರರಲ್ಲಿ ದೊಡ್ಡ ಚಳವಳಿಯುಂಟಾಗಿದೆ.

ಡಾಕ್ಟರ ಕಿಚಲುಸಾಹೇಬರು ದಿಲ್ಲಿಯ ಒಳಸಂಚಿನ ಪ್ರಕರಣದಲ್ಲಿ ಆರೋಪಿಗಳ ಪತಿಯಿಂದ ಕೆಲಸ ನಡಿಸುವರು.

ಮುಂಬಯಿಯಲ್ಲಿ ತಾಡಿನ ಗಿಡಗಳಿಗೆ ಕಚ್ಚು ಹಾಕಲು ಗುತ್ತೆ ಕೊಡಬಾರದೆಂಬ ಠರಾವು ಬಹುಮತದಿಂದ ಪಾಸಾಯಿತು.

ಮೌಲಾನಾ ಶೌಕತಲ್ಲಿಯವರು ಶ್ರೀರಂಗಪಟ್ಟಣಕ್ಕೆ ಹೋಗಿ, ಟೀಪೂವಿನ ಗೋರಿಯ ಮುಂದೆ ನಮಾಜ ಮಾಡಿದರು.

ಸ್ವಾಮಿ ಗೋವಿಂದಾನಂದರು ಕಾಂಗ್ರೆಸದಲ್ಲಿ ಡೆಮೋಕ್ರ್ಯಾಟಿಕವೆಂಬ ಬಣವನ್ನು ಕಟ್ಟುವ ವಿಚಾರದಲ್ಲಿದ್ದಾರೆ.

ಪುಣೆಯ ಫರಗ್ಯುಸನ್ನ ಕಾಲೇಜದಲ್ಲಿ ೧೩೦೦ ವಿದ್ಯಾರ್ಥಿಗಳಾದರು. ಈ ಆನಂದದ ದೆಸೆಯಿಂದ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಗೆ ಮನೋಪಹಾರ ಮಾಡಿಸಿದರು.

ಸಪ್ಟಂಬರ ತಿಂಗಳ ೧೩ ನೇಯ ತಾರೀಖಿನ ದಿವಸ ಅಸೆಂಬ್ಲಿ ಕೂಡುವದು. ಆ [illegible] ಲಾರ್ಡ ವಿಲಿಂಗಡನ್ನಸಾಹೇಬರು ಭಾಷಣಮಾಡುವರು.

ಕೊಪ್ಪಳದ ತರುಣ ಮಿ. ನ. ರಾ. ಹಂಪಿ ಇವರಿಗೆ

ರೂ||೫೦| ರ ಸ್ಕಾಲರಸಿಪ!

—(೦)—

ಇಲ್ಲಿಯ ಮುಸಲಮಾನ ಬಂಧುಗಳು ಮಿ. ನರಸಿಂಹ ರಾಮರಾವ ಹಂಪಿಯವರ ಮೇಲ್ತರದ ಶಿಕ್ಷಣಕ್ಕಾಗಿ, . ನವಾಬ ಸಾಲಾರಜಂಗ ಬಹಾದ್ದೂರರ ಕಡೆಗೆ ಅರ್ಜಿಮಾಡಿ, ತಿಂಗಳಿಗೆ ೫೦ ರೂ ಗಳ ಮಂಜೂರಿ ಮಾಡಿಸಿ, ಕೀರ್ತಿ ಪಡೆದರು.

ಮಿ. ಹಂಪಿಯವರು ಬ್ರಾಹ್ಮಣರು. ತರುಣರು. ಮಹಾ ಧೈರ್ಯಶಾಲಿಗಳು. ದೇಶದ ಹಿತಚಿಂತಕರು. ವಿದ್ಯಾಪ್ರಿಯರು. ಕಥೆ, ಕಾದಂಬರಿ, ಕವಿತೆಗಳನ್ನು ಬರೆದವರು. "ದಿ ನ್ಯೂ ಸಾಲಾರಜಂಗ ಸ್ಕೂಲ" ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಹಿಂದುಳಿದ ವರ್ಗದ ಬಡ ವಿದ್ಯಾರ್ಥಿಗಳಿಗೆ, ಪುಸ್ತಕಗಳನ್ನು ಕೂಡ ಕೊಡಿಸಿ, ಪುಕ್ಕಟೆಯಾಗಿ ವಿದ್ಯಾದಾನ ಮಾಡಿದರು. ಇವರು ಈ ಶಾಲೆಗಾಗಿ ತಮ್ಮ ದೇಹವನ್ನು ಸವಿಸಿದರು. ಆ ಕಷ್ಟದ ಫಲವೇ, ಈ ಐವತ್ತು ರೂಪಾಯಿಗಳ ಸ್ಕಾಲರಸಿಪ್, ಎಂದು ಹೇಳಬಹುದು.

ಮಾಸ್ತರ ಜನರೂ, ನಾಗರಿಕರೂ. ಮಿ|| ಹಂಪಿಯವರಿಗೆ 'ಫೇರವೆಲ್ಲ ಪಾರ್ಟಿ' ಕೊಟ್ಟರು- ಇಂಗ್ಲೀಷ ಮಿಡ್ಲ ಸ್ಕೂಲಿನ ಹೆಡ್ಡಮಾಸ್ತರ- ಮಿ|| ಸೈಯದ ಅಖತರ ಅಲಿಸಾಹೇಬ ಬಿ. ಎ. ಇವರು 'ಫೇರವೆಲ್ಲ ಪಾರ್ಟಿ' ಯಲ್ಲಿ ಹಂಪಿಯವರ ಸಹಾಸ, ಧೈರ್ಯವನ್ನು ಕುರಿತು ಒಳ್ಳೇ ಸ್ಫೂರ್ತಿದಾಯಕ ಭಾಷಣವನ್ನು ಮಾಡಿದರು. ಮಿ|| ಹಂಪಿಯವರು ನಾಳೆ ಶಾಂತಿನಿಕೇತನಕ್ಕೆ ತಮ್ಮ ಮುಂದಿನ ಅಭ್ಯಾಸಕ್ಕಾಗಿ ಹೋಗುವರು.

ಓರ್ವ
ಕೊಪ್ಪಳ ಮುಸಲಮಾನ ತರುಣನು.
೧೨-೭-೩೧

THE ANKALIGI BANK LTD.

Head Office
Kamankatta Dharwar
Branches
Ranebennur & Hirekerur
5%
Interest allowed on
ANNA SAVINGS BANK
DEPOSIT

Dharwar 3—1—1927 } K B. ANKALIGI Managing Director

[illegible]! ಪತ್ತಲ!! ರಿಬನ!!!

ಶ್ರೀ ದತ್ತವೀವಿಂಗ ಮಿಲ್ ಹುಬ್ಬಳ್ಳಿ.

ಕರ್ನಾಟಕದಲ್ಲಿ ಇದೇ ಮೊದಲನೆಯ ಶೀರೆಯ ಮಿಲ್ಲು.

ಇದೇ ಮಿಲ್ಲಿನಲ್ಲಿ ಪಕ್ಕಾ ಬಣ್ಣದ ಸರ್ವಾಂಗ ಸುಂದರ ಶೀರೆಗಳು ಹಾಗೂ ಪತ್ತಲಗಳು ತಯಾರಾಗುತ್ತವೆ. ಮತ್ತು ಯೋಗ್ಯದರದಿಂದ ಸಿಗುತ್ತವೆ. ನಕಶಿ ಮಾಡಿ, ನಿಮಗೆ ಬೇಕಾದ ಮಾಲು ತರಿಸಿಕೊಂಡು, ಖಾತ್ರಿ ಮಾಡಿಕೊಳ್ಳಿರಿ.

ಬಣ್ಣ ಪಕ್ಕಾ. ಬಣ್ಣ ಹೋದರೆ - ಮಾಲು ತಿರುಗಿ ತಕ್ಕೊಳ್ಳುವೆವು.

ನೋಟೀಸಿನ ದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂವರೆ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಉತಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ದೊಡ್ಡ ಕಾಲಮಿನ ಪಳಿಗೆ "ಇನ್ನಾದಿ ಚಾರ್ಜ ಕಾಯಂ ಜಾಹಿರಾತುಗಳನ್ನು ಕೊಡುವವರು [illegible] ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

* ಈ ಕೆಳಗೆ ಬರೆದ ೫೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯು [illegible] ಮಂಜೂರಾಗಿವೆ. *

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,,
೬	ದುರ್ಗಸಿಂಹನ ಪಂಚತಂತ್ರ ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,,
೧೨	ಸತ್ಕಥಾ ಕುಸುಮ ಮಂಜರಿ (IV)	೧೮	,,
೧೩	ಪ್ರೇಮಮಂದಿರ	೮	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹವೈದ್ಯಕ	೮	,,
೧೭	ಮೋಹಿನೀ ನಿಂದಕರ ನಡಾವಳಿ	೮	,,
೪೦	ಕನ್ನಡ ಮಾತು ತಲೆ ಯೆತ್ತುವ ಬಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೯	,,
೪೨	ಕರ್ನಾಟಕ ಕವಿಚರಿತ್ರೆ ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರಾಜಾ [illegible] ದೇಶದ ಯಾತ್ರೆ ಭಾ[illegible]	೮	ಆಣೆ
೧೯	ಕಾಳಿದಾಸ	೬	,,
೨೦	ಕರ್ನಾಟಕ [illegible]	೬	,,
೨೧	ಅಭಿಷೇಕ	೬	,,
೨೨	ಕಥಾಸರಿತ್	೬	,,
೨೩	ಹಜರತ ಪೈಗಂಬರ	೬	,,
೨೪	ಬೇಗಮ್	೬	,,
೨೫	ಅಮೇರಿ[illegible]ದ ವಿದ್ಯಾರ್ಥಿ	೫	,,
೨೬	ಭೀಷ್ಮ	೫	,,
೨೭	ಪೇಣೀಬಂ	೪	,,
೨೮	ಪಂಡಿತ ರಾ[illegible]	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	,,
೩೨	ಶೇರಷಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	ವೆಹರಮ್	೩	
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ.
ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಷ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ.
ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ
೧—೪—೦

೪. ಶ್ರೀಹರ್ಷನೂ ಅವನ ನಾಟಕಗಳೂ [ನಾ. ವೆ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು.
೦—೧೦—೮

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

[illegible]

[illegible]

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹ. ಕೇರಿ.

ವರ್ಷ ೧೨ | ಧಾರವಾಡ ಶನಿವಾರ ತಾರೀಖು ೧೪ ನೇ ಜುಲೈ ೧೯೩೧ (ಸಂಚಿಕೆ ೩೬೩

The Asian Life Assurnance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೨೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೨೫,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಸ್. ಪಾಟೀಲ ಹುಬಳ್ಳಿಯ ಏಜಂಟರು-

[illegible]ಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು

ಶ್ರೀ. ಬಿ. ಟಿ. ಶಿರೋಳಕರ.

ಅನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯವು

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦ ರೂ. ಗಳನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂಥಹ ಪಾಲಿಸಿಯನ್ನು ಕೊಡುವ ಕಂಪನಿಯೊಂದೆಂದರೆ

ಧಾರವಾಡ ಅರ್ಬನ ಕೋ-ಅಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ-ಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ,

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. [illegible],
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨/೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳ ಕೊಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ತಾರೀಖು ೧೮-೭-೧೯೩೧ನೇ ಇಸ್ವಿ

ಕಾಬೂಲದಲ್ಲಿ ಪಾರ್ಲಮೆಂಟ ಸಭೆಯ ಸ್ಥಾಪನೆ.

ಅಮೀರ ನಾದಿರಶಾಹರ ಮಹತ್ವದ ಭಾಷಣ

—(o)—

ಅಮೀರನಾದಿರಶಹರು ವಿಲಾಯತಿಯಲ್ಲಿ ಪುಷ್ಕಳ ವರ್ಷಗಳನ್ನು ಕಳೆದಿದ್ದಾರೆ. ಫ್ರಾನ್ಸವನ್ನು ಜನ್ಮಭೂಮಿಗೆ ಸರಿ ಮಾಡಿಕೊಂಡಿದ್ದರು. ಒರ್ರೇ ಸುಲ್ತಾನಶಾಹಿಯಿಂದ ರಾಜ್ಯವಾಳಿದರೆ- ಆಗಾಗ್ಗೆ ದಂಗೆ, ಬಂಡಾಯಗಳಾಗಿ ಅನಿಶ್ಚಿತಗಳು ಬಹಮೇಲಾಗುವದರಿಂದ, ಪಾಶ್ಚಿಮಾತ್ಯ ಪದ್ಧತಿಯು ದೊರೆತನ ಸಲಿಸಿ, ಪ್ರಜರಿಗೂ ರಾಜಕೀಯ ಸ್ವಾತಂತ್ರ್ಯ ಕೊಡುವದರಿಂದ, ತಮ್ಮ ಕಿರೀಟ ಕುಂಡಲಗಳು ಚಿರಸ್ಥಿರವಾಗುವವೆಂದು ಮನಸಾ ಬಯಿಸಿ, ಆ ಪ್ರಕಾರ ಪಾರ್ಲಮೆಂಟ ಸಭೆಯನ್ನು ಸ್ಥಾಪಿಸುವ ವ್ಯವಸ್ಥೆ ಮಾಡಿ, ಬೇರೆ ಬೇರೆ ಪ್ರಾಂತಗಳಿಂದ ಪ್ರತಿನಿಧಿಗಳನ್ನು ಕರೆಸಿ, ಸಭೆಯನ್ನು ತೆರೆಯುವ ಮುಹೂರ್ತ ಮಾಡಿದರು ಈ ಸಾರೆ ಬಂದವರು ಅಮೀರ ನಾದಿರಶಹರ ಆಮಂತ್ರಣದಿಂದ ಬಂದಿದ್ದರೂ, ಮುಂದೆ ಎಲ್ಲ ಮೆಂಬರರು ಚುನಾಯಿಸಲ್ಪಟ್ಟವರೇ ಆಗುವರು. ನಾಮನಿರ್ದೇಶನವು ಇಲ್ಲವೇ ಇಲ್ಲ. ಹೀಗೆ ಇವರು ಪಾರ್ಲಮೆಂಟಿನ ಚುನಾವಣೆಯಲ್ಲಿ ಹಿಂದೂಸ್ಥಾನ ಸರಕಾರಕ್ಕಿಂತ ಒಂದೇ ಪೆಟ್ಟಿಗೆ ಎಷ್ಟೋ ಮುಂದೆ ಹೋಗಿದ್ದಾರೆ. ಸಭೆಯ ಪ್ರಾರಂಭದಲ್ಲಿ ಇವರು ಮಾಡಿದ ಭಾಷಣದ ಸಾರಾಂಶವು -

ನಾನು ಅಮಾನುಲ್ಲನ ವಿರುದ್ಧವೆದ್ದ ಬಂಡಿನ ಕಾಲದಲ್ಲಿ ಫ್ರಾನ್ಸದಿಂದ ಬಂದ ಬಳಿಕ, ನಾನು ಅಮಾನುಲ್ಲನಿಗೆ ಯಾವ ಪ್ರಕಾರದ ವಚನ ಕೊಟ್ಟಿದ್ದಿಲ್ಲ. ಬಚ್ಚಾ-ಇಸಾಕುವಿನನ್ನು ನಿರ್ಮೂಲಿಸುವದಕ್ಕೆ ನನಗೆ ಇಂಗ್ಲಿಷರು ಸಹಾಯ ಮಾಡಬೇಕು; ನಾನು ಪ್ರತ್ಯುಪಕಾರವಾಗಿ ಅವರಿಗೆ ಯಾವದಾದರೂ ಹಕ್ಕುಗಳನ್ನು ಕೊಡಬೇಕೆಂದು ಪರಸ್ಪರ ಕರಾರು ಮಾಡಿಕೊಂಡಿಲ್ಲ. ನಾನು ದೇವರ ಹಾಗು ರಘೋಕ್ಷೀಲರ ಸಹಾಯದಿಂದಲೇ ಈ ಪದವಿಗೆ ಬಂದಿದ್ದೇನೆ ನಾನು ರಾಜ್ಯಾರೋಹಣ ಮಾಡಿದ ಬಳಿಕ ಪದ್ಧತಿ ಪ್ರಕಾರ ಬೇರೆ ಬೇರೆ ರಾಷ್ಟ್ರಗಳ ಕೂಡ ಒಡಂಬಡಿಕೆ ಮಾಡಿಕೊಂಡೆನು. ಕೆಲ ದರಬಾರಗಳು ನನಗೆ ಸಹಾಯ ಮಾಡಲಿಚ್ಛಿಸಿದವು. ಇಂಗ್ಲಿಷ ಸರಕಾರದವರು ಬಡ್ಡಿಯಿಲ್ಲದೆ ೫೦ ಲಕ್ಷ ರೂಪಾಯಿ, ೧೦ ಸಾವಿರ ರಾಯಫಲ ಬಂದೂಕು, ೫೦ ಲಕ್ಷ ಕಾಡತೂಸುಗಳನ್ನೂ ; ಫ್ರೆಂಚ ಸರಕಾರದವರು ೧೮೦೦೦ ರಾಯಫಲ ಬಂದೂಕ, ಮತ್ತು ಒಂದ ಕೋಟಿ ೮೦ ಲಕ್ಷ ಕಾಡತೂಸುಗಳನ್ನೂ ಕೊಟ್ಟಿದ್ದಾರೆ. ಜರ್ಮನ ಸರಕಾರದವರು ಅಮಾನುಲ್ಲನ ಕಾಲದಲ್ಲಿಯೇ ಸಾಲಕೊಟ್ಟಿದ್ದರು. ಆ ಸಾಲದ ಹೊಸ ಕಾಗದ ಮಾಡಿಕೊಟ್ಟಿತು ಇದರ ಹೊರ್ತು ಐದು ಸಾವಿರ ರಾಯಫಲ ಬಂದೂಕ ಮತ್ತು ಐದು ಲಕ್ಷ ಕಾಡತೂಸುಗಳನ್ನು ಕೊಟ್ಟಿದ್ದಾರೆ. ಇವಲ್ಲದೆ ನಾವು ಸ್ವತಃ ಐದು ಸಾವಿರ ಬಂದೂಕು ಮತ್ತು ೫೦ ಲಕ್ಷ ಕಾಡತೂಸಗಳನ್ನು ಕೊಂಡಿದ್ದೇವೆ

ಜಪಾನ ಮತ್ತು ರಶಿಯಾದ ಕೂಡ ಒಡಂಬಡಿಕೆ ಮಾಡಿಕೊಂಡಿದ್ದೇವೆ ಇರಾನ ಮತ್ತು ರಶಿಯಾದ ಸರಹದ್ದು ಗೊತ್ತು ಮಾಡುವದಕ್ಕಾಗಿ ಒಂದು ಕಮಿಟಿ ನೇಮಿಸಿದ್ದೇವೆ. ಕಾಬೂಲ ರಾಜ್ಯದಲ್ಲಿರುವ ಎಲ್ಲಾ ಕುಲಗಳ ಕೂಡ ನನ್ನ ಸ್ನೇಹಾನುರಾಗವುಂಟು. ನನ್ನ ಮತ್ತು ಇವರ ಧರ್ಮವು ಒಂದೇ ಆಗಿರುವದರಿಂದ, ಉಭಯತರ ನಡುವೆ ಮತಕಲಹವೇಳಲು ಕಾರಣವಿಲ್ಲ. ಮುಖ್ಯವಾಗಿ ಎಲ್ಲ ಕುಲಗಳ ಜನರು ನಿರ್ವಿಘ್ನವಾದಂಥ ಶಾಂತಿ ಸೌಖ್ಯವನ್ನು ಹೊಂದಬೇಕೆಂದೇ ನನ್ನ ಮನೋಭಿಲಾಷೆಯು.

ಜಾಮನಗರದಲ್ಲಿ ಸತ್ಯಾಗ್ರಹ

....(o)....

ಬಂದರಕ್ಕೆ ಸರಕು ಹೋಗದಂತೆ ದಿಗ್ಬಂಧನ

—(o)—

ಬೋರಸದ ಸತ್ಯಾಗ್ರಹದಲ್ಲಿ ರಾಜಿಯಾಗಲು ಮಹಾತ್ಮರ ಪರಿಯಿಂದ ಶ್ರೀ. ಮಹಾದೇವ ದೇಸಾಯಿಯವರು ಹೋದರು. ಅವರು ದೇಸಾಯರ ಕೂಡ ರಾಜಿಯಾಗಿ, ತುರಂಗದಲ್ಲಿಟ್ಟ ಎಲ್ಲ ರಾಜಕೀಯ ಕೈದಿಗಳನ್ನು ಬಿಟ್ಟರು. ಬೋರಸದ ನಂತರ ಕಾಠೇವಾಡದ ಕಾಂಗ್ರೆಸದವರ ಅಭಿಯೋಗವು ಜಾಮನಗರದ ಮೇಲೆ ಹೊರಡಬೇಕೆಂದಿದೆ. ಅಲ್ಲಿಯ ಕೆಲ ರಾಜಕೀಯ ಕೈದಿಗಳನ್ನು ಬಿಡಬೇಕೆಂದು ಸತ್ಯಾಗ್ರಹ ಪ್ರಾರಂಭಿಸುವರು. ಇವರನ್ನು ಬಿಡುವ ತನಕ, ಆ ಬಂದರದ ಕೂಡ ಯಾವ ವ್ಯವಹಾರವನ್ನೂ ಮಾಡದಂತೆ ಸಂಸ್ಥಾನಕ್ಕೆ ಬಹಿಷ್ಕಾರ ಹಾಕಿ, ದಿಗ್ಬಂಧನ ಮಾಡುವರು.

ಶ್ರೀನಗರದ ದಂಗೆಯ ವಿಶೇಷ ಸುದ್ದಿಗಳು.

—(o)—

ಶ್ರೀನಗರದಲ್ಲಿ ಮುಸಲಮಾನ ಗುಂಪಿನವರಷ್ಟೇ ಅಲ್ಲ; ಊರವರೆಂಬ ಬಹುತೇಕ ಮುಸಲಮಾನರು ತುರಂಗದಲ್ಲಿದ್ದ ಪ್ರಚಾರಕನನ್ನು ಬಿಡಿಸಿಕೊಳ್ಳಲು - ತುರಂಗದ ಮೇಲೆ ಹಲ್ಲೆ ಮಾಡಲು ಹೊರಡಲೇ ಮುಸಲತ್ತು ಮಾಡಿದ್ದರು. ಅರಮನೆಗೂ ಪೋಲಿಸ ಕ್ವಾರ್ಟರಕ್ಕೂ ಸುದ್ದಿ ತಿಳಿಯಬಾರದೆಂದು ಟೆಲಿಫೋನದ ತಂತೀ ಹರಿದಿದ್ದರು. ಪೋಲಿಸರು ಗುಂಡು ಹಾಕದಿದ್ದರೆ - ತುರಂಗದಲ್ಲಿದ್ದ ಐನೂರು ಕೈದಿಗಳು ಬಂಧವಿಮೋಚನೆ ಹೊಂದುತ್ತಿದ್ದರು.

ಪ್ರಚಾರಕನು ಮೌಲ್ವಿ - ಮೌಲಾನಾ ಆಗಿರಲಿಲ್ಲ. ಮುಲ್ತಾನದಲ್ಲಿರುವ ದಂಡಿನಲ್ಲಿ ಒಬ್ಬ ಸಾಹೇಬನ ಅಡಿಗೆಯವನು. ಅಬ್ದುಲಖಾದರನೆಂಬ ಹೆಸರು.

ತುರಂಗದ ಹತ್ತರ ಗುಂಡಿನಿಂದ ಜನರು ಸತ್ತು ಬಿದ್ದ ಕೂಡಲೆ - ಮುಸಲಮಾನರು ನಮ್ಮನ್ನು ಹಿಂದೂ ಜನರು ಕೊಲ್ಲುತ್ತಾರೆಂದು ಚೀರುತ್ತಾ ಬಂದರು. ಊರೊಳಗೆ ಉಳಿದ ಮುಸಲಮಾನರೂ ಇವರನ್ನು ಕೂಡಿಕೊಂಡು ಸುಲಿಗೆ ಮತ್ತು ಹೊಡತಕ್ಕೆ ಪ್ರಾರಂಭ ಮಾಡಿದರು ಹಿಂದೂ ಮುಸಲಮಾನರೀರ್ವರೂ ಅಂಗಡಿಗಳನ್ನು ಬಂದು ಮಾಡಿದರು.

ತುರಂಗದ ಮುಂದೆ ಸತ್ತು ಬಿದ್ದ ಹತ್ತು ಜನ ಮುಸಲಮಾನರ ಮೆರವಣಿಗೆ ತೆಗೆದು, ದಫನ ಮಾಡಿದರು. ಆಗ ಜುಮ್ಮಾ ಮಸೀದೆಯಲ್ಲಿಯೇ ಹತ್ತುಸಾವಿರ ಜನರು ಕೂಡಿದ್ದರು ಐನೂರು ಜನ ದಂಡಾಳುಗಳನ್ನು ಮಷಿನಗನ್ನು ಸಹಿತ ಬಂದೋಬಸ್ತಿಗಾಗಿ ತಂದದ್ದರಿಂದ, ಈ ಪ್ರಚಂಡ ಜನ ಸಮೂಹವು ಶಾಂತರೀತಿಯಿಂದ ದಫನ ಕಾರ್ಯ ನೆರವೇರಿಸಿತು.

ಜುಮ್ಮಾ ಮಸೀದೆಯಲ್ಲಿ ಹೋಗಿ ನೋಡಲು ಆಗ ಮುಸಲಮಾನರು ದಂಗೆಗಾಗಿ ಯಾವ ಸಿದ್ಧತೆ ಮಾಡಿದ್ದರೆಂಬದೂ ಅಂಗಡಿಗಳಲ್ಲಿ ಹೇಗೆ ಲೂಟಿ ಮಾಡಿದ್ದರೆಂಬದೂ ಕಂಡುಬಂತು ಅಲ್ಲಿ ಬಟ್ಟೆಗಳ ಥಾನುಗಳ ಗುಡ್ಡವೇ ಬಿದ್ದಿತ್ತು.

ಸ್ವತಃ ಮಹಾರಾಜರು ದಂಗೆಯನ್ನು ಶಾಂತಪಡಿಸಲು ಶ್ರಮಮಾಡಿದರು. ದಂಗೆಯಲ್ಲಿ ನಿರಾಶ್ರಿತರಾದಂಥ ಜನರ ಸಹಾಯಕ್ಕಾಗಿ ಮಹಾರಾಣಿ

ಯುವರು ಮೂರು ಸಾವಿರ ರೂಪಾಯಿ ಕೊಟ್ಟಿದ್ದಾರೆ.

——

ದಂಗೆಗಾರರೆಂದು ಪೋಲೀಸರು ಇನ್ನೂರು ಜನರನ್ನ ಹಿಡಿದಿದ್ದಾರೆ. ಇವರ ವಿಚಾರಣೆ ಮಾಡಲು ಹಾಯಕೋರ್ಟಿನ ಜಡ್ಜ, ಇಬ್ಬರು ಡಿಸ್ಟ್ರಿಕ್ಟ ಜಡ್ಜ ಮತ್ತು ಹಿಂದೂ ಮುಸಲಮಾನರ ವತಿಯಿಂದ ಒಬ್ಬೊಬ್ಬ ಪ್ರತಿನಿಧಿ ಈ ಪ್ರಕಾರ ಆರು ಜನರದೊಂದು ಕಮೀಟಿ ನೇಮಿಸಿದ್ದಾರೆ.

——

ದಂಗೆಯಲ್ಲಿ ಹತ್ತು ಜನ ಪೋಲೀಸರು ಘಾಯವಾದರು ಒಬ್ಬನು ಬದುಕುವ ಆಶೆಯಿಲ್ಲ. ಪೋಲೀಸ ಮತ್ತು ದಂಡಿನ ಕಾವಲದಿಂದ ಊರೊಳಗೆ ಶಾಂತತೆ ಉಂಟಾಗಿದ್ದು, ವ್ಯವಹಾರ ಪ್ರಾರಂಭವಾಗಿದೆ.

——

ಬೆಳಗಾವಿಯ ಸುದ್ದಿಗಳು.

....(0)...

ಬೆಳಗಾವಿಯಲ್ಲಿ ಸರಕಾರೀ ಆಸ್ಪತ್ರೆಯಲ್ಲಿ ಅ|| ಸರ್ಜನ್ನರಾಗಿರುವ ಡಾಕ್ಟರ ಸುಬ್ರಹ್ಮಣ್ಯಮ್ಮರು ಹತ್ತು ವರ್ಷಗಳ ಹಿಂದೆ ಕ್ರಿಶ್ಚನ್ನರಾಗಿದ್ದರು ಈಗ ಇವರು ಪುನಃ ಧರ್ಮದಲ್ಲಿ ಬಂದರು. ಆದರೆ ಬ್ರಹ್ಮಣ್ಯ ಮಾತ್ರ ಕಳಕೊಂಡರು.

——

ಪರದೇಶೀ ಅಂಗಡಿಗಳ ಮುಂದೆ ಶ್ರೀ. ಲಕ್ಷ್ಮೀಬಾಯಿ ಸೋಹನಿ, ಕಮಲಾಬಾಯಿ ಗೋಖಲೆ, ಶ್ರೀ. ಯಮುನಾಬಾಯಿ ಭಿಡೆ ಮೊದಲಾದ ಐದಾರು ಜನ ಸ್ತ್ರೀಯರು ಪಿಕೆಟಿಂಗ ಮಾಡುತ್ತಿದ್ದಾರೆ. ಶ್ರಾಪ್ಪನ ಮೋಡಕರ ತಾಯಿಯವರು ಮುಖ್ಯ ಭಾಗ ತಕ್ಕೊಂಡಿದ್ದಾರೆ.

——

ಸವದತ್ತಿ ತಾಲೂಕ ಮುಬನೂರಿಯ ಕೊಲೆಯ ಆರೋಪಿ ಆದ ಯಲ್ಲಪ್ಪಾ ಮತ್ತು ಸಿಂಗಪ್ಪಾ ಇವರಿಗೆ ಗಲ್ಲಿನ ಶಿಕ್ಷೆಯಾಯಿತು.

——

ಹುಬ್ಬಳ್ಳಿಯ ಕಾಯಿಪಲ್ಯ ಕಾರವಾರಕ್ಕೆ ಕಾಲರಾ ಒಯ್ದಿತು.

—(0)—

ಹುಬ್ಬಳ್ಳಿಯಿಂದ ದಿನಾಲು ಮೋಟಾರದಿಂದ ಕಾರವಾರಕ್ಕೆ ಕಾಯಿಪಲ್ಯ ಕಳಿಸುವರು. ಈ ಕಾಯಿಪಲ್ಯವು ಅಲ್ಲಿ ಕಾಲರಾ ಬೇನೆ ಒಯ್ದಿತು. ಇದರಿಂದಲೇ ಬೇನೆ ಬಂತೆಂದು ಡಾಕ್ಟರರು ಕಂಡು ಹಿಡಿದು, ಅದನ್ನು ತರಿಸುವದನ್ನು ಬಂದು ಮಾಡಿಸಲು ಬೇನೆಯು ಒಂದು ವಾರದಲ್ಲಿ ನಿಂತುಹೋಯಿತು.

——

ಕಲಕತ್ತೆಯಲ್ಲಿ ಹಗಲು ಹಾಡೇ ವಕೀಲನ ಸುಲಿಗೆ

—(0)—

ಕಲಕತ್ತೆಯಲ್ಲಿ ಒಬ್ಬ ವಕೀಲನು ಡಾಲಹೌಸಿಸ್ಕೂಟಿನಂಥ ಕೂಡಿದ ಚೌಕಿನಲ್ಲಿ ಟ್ರಾಮದಲ್ಲಿ ಕೂಡ್ರುವಾಗ ನಾಲ್ವರು ಇವನನ್ನು ಸುತ್ತುಗಟ್ಟಿದರು. ಒಬ್ಬನು ಇವನ ಕಿಸೆಯನ್ನು ಕತ್ತರಿಯಿಂದ ಹರಿದು ೧೬೦೦ ರೂಪಾಯಿಗಳ ನೋಟುಗಳನ್ನು ತೆಗೆದರು. ಆತನಲ್ಲಿ ೩೬೦೦ ರೂಪಾಯಿಗಳ ನೋಟುಗಳಿದ್ದವು ೧೬೦೦ ರೂ ಹೋಗಲಾಗಿ ಉಳಿದವನ್ನು ಬಲವಂತಿಕೆಯಿಂದ ತಕ್ಕೊಳ್ಳಲು ಹಗಲು ದರೋಡೆಗಾರರಿಗೆ ಅವಕಾಶವಾಗಲಿಲ್ಲ. ಸಿಕ್ಕಷ್ಟೇ ತಕ್ಕೊಂಡು ಕಾಲಿಗೆ ಬುದ್ಧಿ ಹೇಳಿದರು. ಇವರನ್ನು ಹಿಡಿಯುವ ಧೈರ್ಯವು ಅಲ್ಲಿ ನೆರೆದಿದ್ದ ನೂರಾರು ಜನರಿಗಾಗಲಿಲ್ಲ.

——

ಕಲೆಕ್ಟರರು ಬಾರಡೋಲಿ ರೈತರ ಸ್ಥಿತಿಯ ವಿಚಾರವನ್ನು ಸ್ವತಃ ಮಾಡುವರು.

—(0)—

ಮಹಾತ್ಮರು ಮುಂಬಯಿಯಿಂದ ಸಿಮ್ಲಾಕ್ಕೆ ಹೋಗುವಾಗ, ದಾರಿಯಲ್ಲಿ ಸೂರತದಲ್ಲಿಳಿದು, ಬಾರಡೋಲಿ ರೈತರ ಸ್ಥಿತಿಯನ್ನು ಕುರಿತು ಕಲೆಕ್ಟರರ ಕೂಡ ಪ್ರಸ್ತಾಪ ಮಾಡಿದರು. ಸಾಹೇಬರು ಕರೇ ಕಾಮದಾರರನ್ನು ಅವಲಂಬಿಸದೆ, ಸ್ವತಃ ಬಾರಡೋಲಿಗೆ ಹೋಗಿ, ವಿಚಾರ ಮಾಡಬೇಕೆಂದು ಗೊತ್ತಾಗಿದೆ ಕಾರಣವಾದ ಕಲೆಕ್ಟರರೂ ಸಿರ್ಕ ಸಿದ್ಧಾಪುರಕ್ಕೆ ಬಂದು, ರೈತರ ನಿಜ ಸ್ಥಿತಿಯನ್ನೇಕೆ ತಿಳಿತುಕೊಳ್ಳಬಾರದು ?

——

ರಾಯಬರೇಲಿಯಲ್ಲಿ ಗುಂಡಿನಿಂದ ಇಬ್ಬರು ರೈತರು ಸತ್ತರು.

—(0)—

ಸಂಯುಕ್ತ ಪ್ರಾಂತಕ್ಕೆ ಸೇರಿದ ರಾಯಬರೇಲಿ ಜಿಲ್ಲೆಯಲ್ಲಿ ಒಬ್ಬ ಮುಲಕೀ ಕಾಮದಾರನು ಹಸ್ತೆಯ ದಸೆಯಿಂದ ಆಸ್ತಿಯನ್ನು ಜಪ್ತ ಮಾಡುತ್ತಿದ್ದಾಗ, ರೈತರು ಆತನನ್ನು ಹೊಡೆದು, ನೆಲಕ್ಕೆ ಕೆಡವಿದರು. ಆಗ ಪೋಲೀಸರು ರೈತರ ಮೇಲೆ ಗುಂಡು ಹಾರಿಸಲು ಇಬ್ಬರು ಸತ್ತರು. ಹೀಗೆ ಅಲ್ಲಿ ರೈತರು ಹಸ್ತೆಯ ದೆಸೆಯಿಂದ ನಿತ್ಯ ಸಾಯುವದು ನಡೆದಿದೆ.

——

ವಿವಿಧ ವಿಷಯಗಳು.

—(0)—

ಮಹಾತ್ಮರೊಬ್ಬರೇ ಲಾರ್ಡ ವಿಲಿಂಗಡನ್ನ ಸಾಹೇಬರ ಕೂಡ ಮಾತಾಡಲು ಸಿಮ್ಲಾಕ್ಕೆ ಹೋಗಿಲ್ಲ. ಇವರ ಸಂಗಡ ಎಂಟು ಜನರಿದ್ದಾರೆ. ಸರದಾರ ಪಟೇಲ ಮತ್ತು ಪಂಡಿತ ಜವಾಹರಲಾಲರೂ ಇರುವರು. ಇವರೂ ಮಹಾತ್ಮರ ಕೂಡ ಅಥವಾ ಪ್ರತ್ಯೇಕವಾಗಿ ಲಾರ್ಡಸಾಹೇಬರ ಕೂಡ ಮಾತಾಡಲಿಕ್ಕೆ ಹೋಗುವರು. ಪಂಡಿತರು ಲಾರ್ಡಸಾಹೇಬರ ಕೂಡ ತಮ್ಮ ಪ್ರಾಂತದ ಹೀನದೀನ ಸ್ಥಿತಿಯ ವಿಷಯವಾಗಿ ಮಾತಾಡುವರು.

——

ಮಹಾತ್ಮರು ಸಿಮ್ಲಾ ತಲ್ಪಿದರು. ಸಂಯುಕ್ತ ಪ್ರಾಂತ, ಗುಜರಾಥ, ಪಂಜಾಬ ಮತ್ತು ಕೇರಳ ಪ್ರಾಂತಗಳಲ್ಲಿ ಸಂಬಡಿಕೆಯನ್ನು ಮುರಿದು ಅಧಿಕಾರಿಗಳು ನಡೆಸಿದ ಕೃತ್ಯಗಳ ದೆಸೆಯಿಂದ ಮಹಾತ್ಮರು ಮಿ. ಇಮರಸನ್ನ ಸಾಹೇಬರ ಕೂಡ ಬುಧವಾರ ದಿವಸ ಮೂರು ತಾಸು ಮಾತಾಡಿದರು. ಇದರಿಂದ ವಿಷಯ ಮುಗಿಯಲಿಲ್ಲ. ಮರು ದಿವಸ ಪುನಃ ಮಾತಾಡಿದರು.

——

ಶ್ರೀ. ಪಾಲ್ಕುರಿಕೆ ಸೋಮನಾಥರು ತಾಡವಾಲಿಯಲ್ಲಿ ಬರೆದ ಕೆಲ ಗ್ರಂಥಗಳು ನಿಜಾಮ ರಾಜ್ಯದಲ್ಲಿ ಸಿಕ್ಕಿವೆ. ಇವು ಈ ವರೆಗೆ ಅಚ್ಚಾಗಿಲ್ಲ. ಆಂಧ್ರರು ಇವುಗಳನ್ನು ಪ್ರಚಲಿತ ಭಾಷೆಯಲ್ಲಿ ಬರೆಯಿಸಿ, ಅಚ್ಚು ಹಾಕಿಸುವರು,

——

ಧಾರವಾಡ

ಶ್ರೀ. ಮುದವೀಡು ಕೃಷ್ಣರಾಯರ ಪತ್ನಿ ಶ್ರೀ. ಸೌ|| ರಾಮಾಬಾಯಿಯವರು ಇಲ್ಲಿಯ ಮ್ಯುನಿಸಿಪಲಿಟಿಯ ಚುನಾವಣಿಯಲ್ಲಿ ಮಾಳಗುಡ್ಡದ ವಾರ್ಡಿನಲ್ಲಿ ಉಮೇದವಾರರಾಗಿ ನಿಲ್ಲುವರು.

——

ಚಿತಗಾಂಗಿನ ಹತ್ತಿರ ಗುಡ್ಡಗಾಡಿನಲ್ಲಿರುವ ಒಬ್ಬ ಸ್ವದ ಸಂಸ್ಥಾನಿಕನ ಮಗನನ್ನು ಗುಂಡು ಹಾಕಿ ಕೊಂದರು.

——

ಮುಂಬಯಿಯಲ್ಲಿ ಬುಧವಾರ ದಿವಸ ಹಗಲು ರಾತ್ರಿ ಮಳೆ ಸುರಿಯಿತು. ೮ ವರೇ ಇಂಚು ಬಿತ್ತು

——

ಜರ್ಮನಿಯಲ್ಲಿ ಬೋಲ್ಸೆವಿಕ ಪಂಥದವರು ಭಯಂಕರ ದಂಗೆಗಳನ್ನು ಎಬ್ಬಿಸಿದ್ದಾರೆ.

——

ನೋಟೀಸು

ರಾ|| ರಾ|| ಮೂಗಪ್ಪಾ ಬಿನ್ನ ಭೀಮಪ್ಪಾ ಪಾಳೇಪ್ಪೋರದವರ ಸಾಕೀನ ಹೆಬ್ಬಳ್ಳಿ ತಾಲೂಕ ಧಾರವಾಡ ಇವರಿಗೆ —

ನಾನು ಯಲ್ಲವ್ವಾ ಕೋಂ ಮೂಗಪ್ಪಾ ಪಾಳೇಪ್ಪೋರದವರ ಸಾ, ಕೀನ ಗದಗ ತಾಲೂಕ ಗದಗ ನಾನು ಈ ನೋಟೀಸಿನ ಮೂಲಕ ನಿನಗೆ ತಿಳಿಸುವದು ಯೇನಂದರೆ ನೀನು ನನ್ನ ಲಗ್ನದ ಗಂಡನಿದ್ದು ನನ್ನನ್ನು ಮದುವೆ ಮಾಡಿಕೊಂಡು ೧೪-೧೫ ವರುಷಗಳಾದವು. ನನ್ನ ಮ ನಿನ್ನ ಪ್ರಪಂಚವು ೫-೬ ವರುಷ ನೆಟ್ಟಗೆ ಸಾಗಿತು ಆ ವೇಳೆ ನೀನು ದುರವ್ಯಸನಕ್ಕೆ ಬಿದ್ದು ನನ್ನನ್ನು ಹೊಡೆಯೋದು ಬಡಿಯೋದು ಮಾಡಿ ನನ್ನನ್ನು ತವರ ಮನಿಗೆ ಕಳಿಸಿರುತ್ತೀದಿ ಅಲ್ಲಿಂದಾಗಾಯಿತು ಈವರಿಗೂ ನಾನು ನನ್ನ ತವರ ಮನಿಯಲ್ಲಿಯೇ ಇರುತ್ತೇನೆ ಈಗ ಅಜಮಾಸು ೫-೬ ತಿಂಗಳಗಳ ಹಿಂದೆ ನನ್ನ ಮಾವನ ಚನಬಸಪ್ಪಾ ನಾಗಪ್ಪಾ ವಡ್ಡಟ್ಟಿ ಮ ನನ್ನ ತಮ್ಮಾ ಬಸಪ್ಪಾ ಗೂಳಪ್ಪಾ ಯಾವಗಲ್ಲ ವೃರ್ಗ ಲಕ್ಕುಂಡಿ ವಗೈರೆ ೩-೪ ಜನರು ಕೂಡಿ ನಿನ್ನ ಮನಿಗೆ ನನ್ನನ್ನು ಕಳಿಸಲಿಕ್ಕೆ ಬಂದಿದ್ದರು. ಆಗೆ ಸಹಾ ನನ್ನನ್ನು ನೀನು ಇಂಕಾರ ಮಾಡಿ ಬಿಟ್ಟಿ ಅನಿರ್ವ್ಯಾಪಕ್ಷ ಬಂದದ್ದರಿಂದಾ ನಾನು ನನ್ನ ತವರ ಮನಿಯಲ್ಲಿಯೇ ಈವರಿಗೂ ಇರುತ್ತೇನೆ. ಈ ವರಿಗೂ ನನ್ನ ಸಂರಕ್ಷಣೆ ದಶಿಯಿಂದಾ ಎರಡನೇಯವರಲ್ಲಿ ಮಾಡಿರುವ ದೇಣೆ ಎರಡನೂರು ರೂಪಾಯಿ ೨೦೦ ರೂಪಾಯಿ ಇರುತ್ತದೆ ಸದರಿ ಧನಕೋಜನ ಮ ನನ್ನ ತವರ ಮನಿಯವರ ತ್ರಾಸು ಬಹಳ ವಾದ್ದರಿಂದಾ ಈ ನೋಟೀಸು ನಿನಗೆ ಕೊಡುವ ಭಾಗ ಬಿತ್ತು. ನೀನು ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ನನ್ನ ಸಂರಕ್ಷಣೆ ಖರ್ಚಿಗಾಗಿ ನಾನು ಮಾಡಿರುವ ಎರಡು ನೂರು ರೂಪಾಯಿ ೨೦೦ ರೂಪಾಯಿ ದೇಣೆ ಮುಕ್ತಾಕೊಟ್ಟು ನನ್ನನ್ನು ಕರಕೊಂಡು ಹೋಗಿ ಚಲೋರೀತಿಯಿಂದಾ ಬಾಳ್ವೆ ಮಾಡಬೇಕು. ಇಲ್ಲವಾದರೆ ಇದೇ ನೋಟೀಸಿ ಅಂತಾ ತಿಳಿದು ನಾನು ಯಾರನೇಯವರನ್ನು ಉಡಕಿ ಮಾಡಿಕೊಳ್ಳುತ್ತೇನೆ ಆ ವೇಳೆ ನನ್ನ ಮೇಲೆ ಮತ್ತು ನಾನು ಮಾಡಿಕೊಂಡ ಉಡಕಿ ಗಂಡನ ಮೇಲೆ ನಿನ್ನ ಯಾವ ತಕ್ರಾರ ಹಕ್ಕು ಬಾಂದಾಯಿಸುವದಿಲ್ಲಾ. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲ ಆದೆ. ತಿಳಿಯೇದು.

ತಾರೀಖು ೧೪-೭-೧೯೩೧ನೇ ಇಸ್ವಿ

ಒಪ್ಪಂದದ ಕರಾರುಗಳು ಮುರಿದು, ಮಹಾತ್ಮರು ತಿರಿಗಿ ಪರಿಷತ್ತಿಗೆ ಹೋಗಲಿಕ್ಕೆ ಅಡ್ಡಿ ಬರುವಂಥ ಹಲವು ಮಹತ್ವದ ಪ್ರಶ್ನೆಗಳಲ್ಲಿ ಅಲ್ಲಾಬಾದ ಇಲಾಖೆಯಲ್ಲಿ ರೈತರು ಹಪ್ತೆಯ ವಿಷಯವಾಗಿ ಹೊಂದುತ್ತಿರುವಂಥ ಕಷ್ಟ ನಷ್ಟಗಳು ಮುಖ್ಯ ವಿಷಯವಾಗುವದು. ರೈತರು ಜೋಡಲಗಿನ ಕತ್ತಿಯಲ್ಲಿ ಸಿಕ್ಕಂತಾಗಿದ್ದಾರೆ. ಹಪ್ತೆ ವಸೂಲಿಗಾಗಿ ಸರಕಾರೀ ಅಮಲದಾರರು ನಡೆಸಿದ ಜಪ್ತಿ ಮತ್ತು ಬೇರೆ ಹಿಂಸೆಯ ಕೃತ್ಯಗಳಾಗದಂತೆ ಜಮೀನದಾರರು ಆದಷ್ಟು ಬಗೆಯಿಂದ ರೈತರಿಗೆ ಅನುಕೂಲವಾಗಿ ನಡೆಯದೆ, ತಾವೂ ಸರಕಾರೀ ಅಮಲದಾರರಂತೆ ನಡೆಯುತ್ತಿರುವದರಿಂದ, ರೈತರ ದುಃಖಗಳು ಇಮ್ಮಡಿಸಿವೆ. ಮಹಾತ್ಮರು ಲಾರ್ಡ ಆಯರ್ವಿನ್ನ ಸಾಹೇಬರ ಕೂಡ ಒಡಂಬಡಿಕೆ ಮಾಡಿಕೊಳ್ಳದಿದ್ದರೆ. ರೈತರು ಸತ್ಯಾಗ್ರಹದಿಂದ ತಮ್ಮ ಉದ್ಧಾರ ಮಾಡಿಕೊಳ್ಳುತ್ತಿದ್ದರು. ರೈತರ ದುರ್ದೈವ. ಅವ್ವ ಊಟಕ್ಕೆ ಹಾಕಳು. - ಅಪ್ಪ ಬಿಕ್ಕೆ ಬೇಡಗೊಡನು; ಎಂಬಂತಾಗಿರುತ್ತದೆ.

ರೈತರ ನಿಜವಾದ ಸ್ಥಿತಿಯ ವಿಚಾರ ಮಾಡಲು ಕಾಂಗ್ರೆಸ ಕಮೀಟಿಯವರು ಬ್ಯಾರಿಸ್ಟರ ಶೇರವಾನಿಯವರ ಅಧ್ಯಕ್ಷತೆಯಲ್ಲಿ ಒಂದು ಕಮೀಟಿ ನೇಮಿಸಿದ್ದರು. ಆ ಕಮೀಟಿಯವರು ಮುಂದೆ ಕೊಟ್ಟಂತೆ ಹೇಳುತ್ತಾರೆ.

ಸರಕಾರೀ ಅಮಲದಾರರೂ, ಜಮೀನದಾರರೂ ರೈತರನ್ನು ಅನೇಕ ಪ್ರಕಾರದ ಹಿಂಸೆಗಳಿಂದ ಹಣ್ಣು ಮಾಡಿದ್ದಾರೆ. ರೈತರ ನಿಜಸ್ಥಿತಿಯ ವಿಚಾರ ಮಾಡುತ್ತಿರುವ ಕಾಂಗ್ರೆಸದ ಮೇಲೆ ೧೪೪ ಕಲಮಿನನ್ವಯ ನೋಟೀಸು ತೆಗೆದು ಅವರನ್ನು ಬಂಧಿಸುತ್ತಿದ್ದಾರೆ, ಇದೇ ಪ್ರಕಾರ ೧೦೯, ೧೧೦ ಕಲಮುಗಳ ಉಪಯೋಗದಿಂದಲೂ, ಕಾಂಗ್ರೆಸದವರ ಕೈ ಕಾಲು ಕಟ್ಟುತ್ತಿದ್ದಾರೆ. ಈ ಚಳವಳಿಯಲ್ಲಿ ಸೇರುವದಿಲ್ಲೆಂದು ಪ್ರತಿಜ್ಞಾ ಪತ್ರ ಬರಕೊಟ್ಟರೆ- ಅವರನ್ನು ಬಿಟ್ಟು ಬಿಡುತ್ತಾರೆ. ಹೊಡೆಯುವದು, ಬೆಂಕಿ ಹಚ್ಚುವದು ಲೂಟಿ ಮಾಡುವದು ನಿತ್ಯಕೃತ್ಯಗಳಾಗಿವೆ. ಜನರನ್ನು ಅಮಾನುಷ ರೀತಿಯಿಂದ ಹಿಡಿಸಿಕೊಂಡಿದ್ದಾರೆ. ಹೆಣ್ಣು ಮಕ್ಕಳ ಮೇಲೆ ಬಲಾತ್ಕಾರ ಮಾಡಿ ಜಬರೀ ಸಂಭೋಗ (Rape) ಸಹ ಮಾಡಿದ್ದಾರೆ. ಈ ಪ್ರಕಾರ ಪರಿಸ್ಥಿತಿಯು ಅಸಹ್ಯವಾಗಿರುತ್ತದೆ. ಆದ್ದರಿಂದ ಕಾಂಗ್ರೆಸದ ವರ್ಕಿಂಗ ಕಮೀಟಿಯವರು ಹಿಂಸೆಯು ನಿಲ್ಲುವಂತೆ ಮಾಡಬೇಕು ಅಥವಾ ಪ್ರಾಂತಿಕ ಕಾಂಗ್ರೆಸ ಕಮೀಟಿಗೆ ಯೋಗ್ಯ ಉಪಾಯಗಳನ್ನು ಕೈಕೊಳ್ಳಲು ಅಧಿಕಾರ ಕೊಡಬೇಕು.

ಸಂಯುಕ್ತ ಪ್ರಾಂತದಲ್ಲಿ ನಡೆದ ಹಿಂಸೆ ಮತ್ತು ಅತ್ಯಾಚಾರಗಳ ವಿಷಯವಾಗಿಯೇ ಲಾರ್ಡ ವಿಲಿಂಗಡನ್ನಸಾಹೇಬರಿಗೂ, ಪಂಡಿತ ಜವಾಹರಲಾಲರಿಗೂ ಏಕಾಂತದಲ್ಲಿ ೪೦ ನಿಮಿಷಗಳ ತನಕ ಭಾಷಣ ನಡೆಯಿತು. ಲಾರ್ಡಸಾಹೇಬರು ವಿಶ್ರಾಂತಿಗಾಗಿ ಮಸೋರಿಕ್ಕೆ ಹೋದದ್ದರಿಂದ, ಭಾಷಣವು ಈಗ ಮಿ. ಇಮರಸನ್ನಸಾಹೇಬರ ಕೂಡ ನಡೆದಿದೆ.

ರಾವುಂಡ ಟೇಬಲ ವಿಷಯವಾಗಿ ಮಹಾತ್ಮರ ಕೆಲವು ವಿಚಾರಗಳು

—(೦)—

ಕಲಕತ್ತೆಯ ಸ್ಟೇಟ್ಸಮನ್ನ ಪತ್ರವು ಮುಂಗಾಲು ಪುಟಕೆ ಹೊಡೆದು, ಕಾಂಗ್ರೇಸದ ಕೆಲ ಮೆಂಬರರಿಗೆ ಆಮಂತ್ರಣ ಕೊಡಬೇಕೆಂದು ಮಹಾತ್ಮರು ಲಾರ್ಡ ವಿಲಿಂಗಡನ್ನಸಾಹೇಬರಿಗೆ ಸೂಚಿಸಿದ್ದಾರೆಂದು ಬುಡದಿಂದ ತುದಿಯತನಕ ಸುಳ್ಳು ಸುದ್ದಿ ಬರೆಯಿತು. ಇಲ್ಲದ್ದು ಬರೆಯುವದು ನಮ್ಮ ಪ್ರತಿಷ್ಠೆಯನ್ನು ಕಡಿಮೆ ಮಾಡದಿದ್ದರೂ ಮನೋವ್ಯಥೆಯನ್ನುಂಟು ಮಾಡುತ್ತದೆಂದೂ ಇಂಗ್ಲಿಷ ಪತ್ರಕಾರರು ಹೀಗೆ ಸುಳ್ಳು ಬರೆಯಬಾರದೆಂದೂ ಉದ್ಗಾರ ತೆಗೆದಿದ್ದಾರೆ.

ನನಗೆ ಆಲೋಚನೆ ಹೇಳತಕ್ಕವನು ದೇವರು. ನನ್ನ ಸಂಗಡ ಕಾಂಗ್ರೆಸದ ವತಿಯಿಂದ ಯಾರೂ ಬರುವದಿಲ್ಲ. ಕಾಂಗ್ರೆಸದ ಗೊತ್ತುವಳಿಯಂತೆ ನಾನೇ ಸರ್ವಾಧಿಕಾರಿಯಾಗಿದ್ದೇನೆ. ನನ್ನ ಸಂಗಡ ಶ್ರೀ. ಮಹಾದೇವ ದೇಸಾಯಿ ಚಿ॥ ದೇವದಾಸ, ಪ್ಯಾರೀಲಾಲ ಮತ್ತು ಕುಮಾರಿ ಸ್ಲೇಡ ಇಷ್ಟೇ ಜನರನ್ನು ಕರಕೊಂಡು ಹೋಗುವೆನು. ಇನ್ನಾರೂ ಬರುವದಿಲ್ಲೆಂದೂ ಈ ವಿಷಯವಾಗಿ ಸ್ಪಷ್ಟೀಕರಣ ಮಾಡಿದ್ದಾರೆ.

ಮಹಾತ್ಮರು ತಮಗೆ ಹಡಗದಲ್ಲಿ ರಾಜರಾಜೇಶ್ವರರಿಗೆ ಒಪ್ಪುವಂಥ ಸ್ಥಳ ಬೇಡ ಥರ್ಡಕ್ಲಾಸೇ ಸಾಕೆಂದು ಹೇಳಿದ್ದಾರೆಂಬದನ್ನು ಈ ಮೊದಲು ಬರೆದಿದ್ದೇವೆ. ಅನಂತರ ಇವರು ಸ್ವತಃ ಹಡಗ ಕಂಪನಿಯವರಿಗೆ ತಮಗಾಗಿ ಸ್ಥಳ ಕಾದಿಡಬೇಕೆಂದು ಬರೆದಿರಲೇ ಇಲ್ಲ, ಯಾರೋ ಅನಾಮಧೇಯ ಗೃಹಸ್ಥರು ಟೀಕಿಟು ಕೊಂಡರು, ಈ ವರ್ತಮಾನ ತಿಳಿದ ಕೂಡಲೆ- ನಮಗಾಗಿ ಮುಂದಾಗಿ ಸ್ಥಳ ಕಾದಿಡಬಾರದು. ಸ್ಥಳ ಉಳಿಯಲಿ ಉಳಿಯದಿರಲಿ; ಹೊರಡುವಾಗ್ಗೆ ಆ ಮಾತೆಂದು ಈ ಕಂಪನಿಯವರಿಗೆ ತಿಳಿಸಿದ್ದಾರೆ.

ಹಿಂದುಸ್ಥಾನ ಸರಕಾರದವರು ಇಲ್ಲಿ ರಾಜಕೀಯ ವಾತಾವರಣವನ್ನು ನಿರಭ್ರ ಮಾಡಿದರೇ- ಮಹಾತ್ಮರು ವಿಲಾಯತಿಗೆ ಹೊರಡುವರೆಂದು ಆಗಾಗ್ಗೆ ಹೇಳುವಂತೆ ವರ್ತಮಾನ ಪರಿಸ್ಥಿತಿಯುಂಟಾಗಲಿತ್ತದೆ.

ಸರಕಾರೀ ಕಾಮದಾರರ ಸಂಬಳ ಕಡಿಮೆ ಮಾಡುವಂತೆ

ಶ್ರೀ. ಜೋಗ ವಿಶ್ವನಾಥರಾಯರ ಠರಾವು

— (೦) -

೨೦ ನೇಯ ತಾರೀಖಿನಿಂದ ಮುಂಬಯಿ ಇಲಾಖೆಯ ಕೌನ್ಸಿಲ ಸಭೆಯ ಕೆಲಸಕ್ಕೆ ಪ್ರಾರಂಭವಾಗಿದೆ. ಸರಕಾರೀ ಕೆಲಸ ಮುಗಿದ ಬಳಿಕ ನಾನು ಆಫೀಸಿಯಲ್ಲ ಠರಾವುಗಳ ಚರ್ಚೆಯು ಪ್ರಾರಂಭವಾಗುವದು. ಧಾರವಾಡದ ಶ್ರೀ. ಜೋಗ ವಿಶ್ವನಾಥರಾಯರು ಸರಕಾರೀ ಕಾಮದಾರರ ಸಂಬಳ ಕಡಿಮೆ ಮಾಡಬೇಕೆಂದು ಠರಾವು ತಂದಿದ್ದು ಚೀಟಿಯಲ್ಲಿ ಇವರ ಹೆಸರು ಮೊದಲು ಬಂದಿದೆ. ಇವರು ಹೇಳುವ ಪ್ರಮಾಣವು

೫೧	ರಿಂದ	೧೦೦ -	೫
೧೦೧	,,	೨೫೦	೧೦
೨೫೧	,,	೫೦೦	೧೫
೫೦೧	,,	೧೦೦೦	೨೦

ಸಾವಿರದ ಮೇಲೆ ನೂರಕ್ಕೆ ೨೫ ರಂತೆ

ಕಾಮದಾರರಿಗೆ ಸಾಹಿತ್ಯ ಪೂರೈಸುವ ಕಾಂಟ್ರ್ಯಾಕ್ಟು

—)((೦) —)(—

ಸರಕಾರೀ ಕಾಮದಾರರು ಫಿರತಿಯ ಮೇಲಿದ್ದಾಗ, ರೈತರಿಂದಲೂ, ಗ್ರಾಮಸ್ಥರಿಂದಲೂ ಸರಬರಾಯಿ ತಕ್ಕೊಂಡು, ಹೆಸರಿಗೆ ಬೆಲೆ ಕೊಡುತ್ತಾರೆ ಆದ್ದರಿಂದ ಅವರಿಗೆ ಸಾಮಾನು ಕೊಡುವದಕ್ಕಾಗಿ ಪ್ರತಿಯೊಂದು ಜಿಲ್ಹೆಯಲ್ಲಿ ಕಾಂಟ್ರ್ಯಾಕ್ಟರರನ್ನು ಗೊತ್ತುಮಾಡಬೇಕು ಅವರ ಮುಖದಿಂದಲೇ ಇವರು ಪದಾರ್ಥಗಳನ್ನು ಕೊಳ್ಳಬೇಕೆಂದು ಸಿಂಧದ ಸಯ್ಯದ ಮಹಮುದಶಾಹಾ ಸಾಹೇಬರು ಠರಾವು ತರುವರು. ಯಾವನಾದರೊಬ್ಬ ಸರಕಾರೀ ಕಾಮದಾರನು ಬೆಲೆಗೊಡದೆ, ಜನರಿಂದ ಸಾಮಾನು ತಕ್ಕೊಂಡರೆ- ಆತನಿಗೆ ಶಿಕ್ಷೆ ಮಾಡಬೇಕೆಂದೂ ಸಾಹೇಬರ ಠರಾವಿನಲ್ಲಿ ಬರೆದಿರುತ್ತದೆ.

ರಾ. ಬ. ಚಿತಳೆಯವರ ಠರಾವು.

ಅಹಮದನಗರದ ರಾ ಬ ಚಿತಳೆಯವರು ಇರಿಗೇಶನ ಸಂಬಂಧವಾಗಿ ಒಂದು ಠರಾವು ತರುವರು. ಸರಕಾರದವರು ಮಹಾರಾಷ್ಟ್ರ ಪ್ರಾಂತದಲ್ಲಿ ಹೊಳೆ ಹಳ್ಳಗಳಿಗೆ ಕಾಲುವೆ ತೆಗೆಯುವದಕ್ಕಾಗಿ ಹತ್ತು ಕೋಟಿ ರೂಪಾಯಿ ವೆಚ್ಚ ಮಾಡಿದ್ದಾರೆ. ಇದರ ಲಾಭವು ನೂರಕ್ಕೆ ವರ್ಷಕ್ಕೆ ಒಂದರಂತೆ ಬೀಳುತ್ತದೆ. ಆದ್ದರಿಂದ ಹೆಚ್ಚಿಗೆ ಪ್ರಾಪ್ತಿಯಾಗುವಂತೆ ವಿಚಾರ ಮಾಡಲು ಒಂದು ಕಮಿಟಿ ನೇಮಿಸಬೇಕೆಂದು ಠರಾವಿನ ಆಶಯವಿರುತ್ತದೆ. ವಿಜಯನಗರ, ಚಾಲುಕ್ಯ, ರಾಷ್ಟ್ರಕೂಟ ಮೊದಲಾದ ಪುರಾತನ ಕಾಲದ ರಾಜರು ಸರೋವರದಂಥ ಕೆರೆಗಳನ್ನೂ, ಉಪನದಿಗಳಂಥ ಕಾಲುವೆಗಳನ್ನೂ ಮಾಡಿಸಿದರು. ಅವರು ದ್ರವ್ಯ ನೋಡಲಿಲ್ಲ. ರೈತರ ಸೌಖ್ಯನೋಡಿದರು. ಆ ತೆರವಾಗಿ ಇಂಗ್ರೇಜಿ ಸರಕಾರದವರು ಕಾಲುವೆಗಳಲ್ಲಿ ದ್ರವ್ಯ ಹಾಕಬೇಕಲ್ಲ, ಒಟ್ಟಿ ಉತ್ಪತ್ತಿಯೋ ಇಲ್ಲವೊ ? ಎಂದು ಮಾರವಾಡಿ ಲೆಕ್ಕ ಹಾಕಿದರೆ- ಎಂದಿಗೂ ರೈತರ ಉತ್ಕರ್ಷವಾಗಲಾರದು.

ಗುರ್ಜರ ಪ್ರಾಂತಿಕ ಸ್ವರಾಜ್ಯದ ಪರಿಷತ್ತು

ಮಹತ್ವದ ಗೊತ್ತುವಳಿಗಳು

....(೦)....

ಪ್ರಣೆಯಂತೆ ಅಹಮದಾಬಾದಿನಲ್ಲಿ ಗುಜರಾಥದ ಮ್ಯುನಿಸಿಪಾಲಿಟಿ ಲೋಕಲಬೋರ್ಡುಗಳ ಪರಿಷತ್ತು ಕೂಡಿತ್ತು. ಇದರಲ್ಲಿ ಪಾಸಾದ ಗೊತ್ತುವಳಿಗಳು

೧ ಗುಜರಾಥ ಪ್ರಾಂತವನ್ನು ಸ್ವತಂತ್ರ ಪ್ರಾಂತ ಅಥವಾ ಇಲಾಖೆ ಮಾಡಬೇಕು.

೨ ಶರೆ ಶಿಂದಿಯ ಅಂಗಡಿಗಳ ನಿಯಮನ ಮಾಡುವ ಅಧಿಕಾರವನ್ನು ಮ್ಯುನಿಸಿಪಾಲಿಟಿ ಲೋಕಲಬೋರ್ಡುಗಳಿಗೆ ಕೊಡಬೇಕು.

೩ ರಾಜಮಾರ್ಗಗಳನ್ನು ಇಂಜನಿಯರ ಖಾತೆಯಿಂದ ಬಿಡಿಸಿ, ಲೋಕಲಬೋರ್ಡಿಗೆ ಕೊಟ್ಟು ಇವುಗಳ ವ್ಯವಸ್ಥೆಗಾಗಿ ಸರಕಾರದವರು ಗ್ರ್ಯಾಂಟು ಕೊಡಬೇಕು.

೪ ನಾಮಿನೇಶನವನ್ನು ತೆಗೆದು ಹಾಕಬೇಕು.

೫ ಪೋಲಿಸ ಮತ್ತು ತುರಂಗಗಳ ಮೇಲೆ ಮ್ಯುನಿಸಿಪಾಲಿಟಿಯ ಅಧಿಕಾರ ನಡೆಯಬೇಕು.

ರಾವುಂಡಟೇಬಲಿನ ಹೊಸ ಮೆಂಬರರು

—(೦)—

ಇನ್ನು ಮೇಲೆ ಕೂಡುವ ರಾವುಂಡಟೇಬಲಿನ ಫೆಡರಲ ಕಮೀಟಿಯ ಮೆಂಬರರೆಂದು ಮಹಾತ್ಮರು, ಪಂಡಿತ ಮಾಲವೀಯಾ, ಸರ ಪುರುಷೋತ್ತಮದಾಸ ಠಾಕೂರದಾಸರು, ಹಾಗೂ 'ಹಿಂದೂ' ಪತ್ರದ ಸಂಪಾದಕರಾದ ಶ್ರೀ. ರಂಗಸ್ವಾಮಿ ಅಯ್ಯಂಗಾರರು ಆರಿಸಲ್ಪಟ್ಟಿದ್ದಾರೆ.

ಮುಂಬಯಿಯಲ್ಲಿ

ಎಮ್ ಎಸ್. ರಾಯರನ್ನು ಹಿಡಿದರು.

—(೦)—

ಸುಪ್ರಸಿದ್ಧ ಕಮ್ಯುನಿಷ್ಟ ಮುಖಂಡರಾದ ಶ್ರೀ. ಎಮ್. ಎನ್. ರಾಯರನ್ನು, ಅಖಿಲ ಭಾರತೀಯ ಕೂಲಿಕಾರ ಸಂಘದ ಕಾರ್ಯದರ್ಶಿ ಶೇಖ ಮತ್ತು ಡಾ| ಚಿಟ್ಟಿಯವರನ್ನು ಬಾದಶಹರ ವಿರುದ್ಧ ಬಂಡು ಮಾಡುವ ಮಸಲತ್ತು ಮಾಡಿದರೆಂಬ ಆರೋಪದ ಮೇಲೆ ಹಿಡಿದಿದ್ದಾರೆ.

ಹೆಬ್ಬಾವು ಇಡೀ ಮನುಷ್ಯನನ್ನು ನುಂಗಿತು.

....(೦)....

ರಂಗೂನದ ಹತ್ತರ ಒಂದು ಅಡವಿಯಲ್ಲಿ ನಾಲ್ವರು ಬೇಟೆಗೆ ಹೋದರು. ಮಳೆಯಾಗಲಾರಂಭಿಸಲು - ಒಬ್ಬನು ಒಂದು ಗಿಡದ ಆಶ್ರಯ ಮಾಡಿದನು. ಆಗೊಂದು ಹೆಬ್ಬಾವು ಈತನನ್ನು ಪೂರಾ ನುಂಗಿಬಿಟ್ಟಿತು. ಉಳಿದ ಮೂವರು ಈ ಹಾವನ್ನು ಕೊಂದು ರಂಗೂನಕ್ಕೆ ತಂದರು ಹಾವು ಸೀಳಿ ನೋಡುವಾಗ ಮನುಷ್ಯನ ಜೀವ ಹೋಗಿತ್ತು. ಎಲಬು ಪುಡಿಪುಡಿಯಾಗಿದ್ದವು. ಹಾವು ೩೦ ಫೂಟು ಉದ್ದವಾಗಿತ್ತು.

ಪರದೇಶಿ ಬಟ್ಟೆಗೆ ಚಕ್ರ

—(೦)—

ಬೆಳಗಾವಿಯಲ್ಲಿ ಎಲ್ಲ ಪರದೇಶಿ ಅರಿವೆಯ ವ್ಯಾಪಾರಸ್ಥರು- ತಮ್ಮಲ್ಲಿದ್ದ ಅರಿವೆಯ ಗಂಟು ಕಟ್ಟಿಟ್ಟು ಕಾಂಗ್ರೆಸದ ಮುದ್ರೆ ಹಾಕಿಸಿದ್ದಾರೆ.

ರಾಣೇಬೆನ್ನೂರಲ್ಲಿ ಜಿಲ್ಲಾ ಕಾಂಗ್ರೆಸ ಕಮೀಟಿಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಪರದೇಶಿ ವಸ್ತ್ರ ಮಾರುವ ಅಂಗಡಿಗಳ ಮುಂದೆ ಕಾವಲ ನಡೆದಿದ್ದು ಶ್ರೀ. ಹುಕ್ಕೇರಿಕರರು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ವ್ಯಾಪಾರಸ್ಥರ ಮೊದಲಿನ ಬಿಗುವು ಈಗ ಇಲ್ಲವೆಂದೂ ಶೀಘ್ರವೇ ಕಾಂಗ್ರೆಸ ಕರಾರಿಗೆ ಒಪ್ಪಬಹುದೆಂದೂ, ಒಟ್ಟು ಸುದ್ದಿಗಾರರು ತಿಳುಹಿಸುತ್ತಾರೆ.

ಬಾಂಬು ಹಾರಿ ಗಿಡಗಳು ಬೇರು ಸಹಿತ ಕಿತ್ತಿಬಿದ್ದವು.

—(೦)—

ರೋಮ ಪಟ್ಟಣದಲ್ಲಿ ಮುಸಲೋನಿ ಮತ್ತು ಜಗದ್ಗುರು ಪೋಪರ ನಡುವೆ ಮನಸ್ತಾಪವಾಗಿದೆ. ಅಲ್ಲಿಯ ಮುಖ್ಯ ದೇವಾಲಯದ ಹಿಂದೇ ಬಾಂಬು ಇಟ್ಟಿದ್ದರು. ಅವನ್ನು ಕೂಡಲೆ ಅಲ್ಲಿಂದ ತೆಗೆದು ದೂರ ಇಟ್ಟರು. ಅಲ್ಲಿ ಬಾಂಬು ಹಾರಿ, ನೆಲ ಅದರಿದ್ದಲ್ಲದೆ, ಸುತ್ತಲಿನ ದೊಡ್ಡ ದೊಡ್ಡ ಗಿಡಗಳು ಬೇರು ಸಹಿತ ಕಿತ್ತಿ ಬಿದ್ದವು.

ವೀರ ಶುಕ್ರುಲ್ಲಾರವರನ್ನು ಹಿಡಿದರು.

—(೦)—

ಸತ್ಯಾಗ್ರಹದ ದಿನಗಳಲ್ಲಿ ಕರ್ನಾಟಕದಲ್ಲಿ ಜಾಗೃತಿಯನ್ನುಂಟು ಮಾಡಿದ ಬೆಳಗಾವಿಯ ವೀರ ಶುಕ್ರುಲ್ಲಾರವರನ್ನು ಪೋಲೀಸರಲ್ಲಿ ಅಸಂತೋಷವನ್ನುಂಟು ಮಾಡಿದರೆಂಬ ಆರೋಪದ ಮೇಲೆ ಹಿಡಿದಿದ್ದಾರೆ.

ಮೊಂಡಗಾಲಿನವನು ಕೃಷ್ಣಾಪ್ರವಾಹದಲ್ಲಿ ಈಸಿದನು.

—(೦)—

ಸಾಂಗಲಿಯಲ್ಲಿ ಕೃಷ್ಣಾನದಿಗೆ ನೆರೆ ಬಂದಾಗ, ಈಸುವ ಪಂದ್ಯ ನಡೆಯುವವು. ಈ ಸಾರೆಯಾದ ಪಂದ್ಯದಲ್ಲಿ ಕೇಳಕರ ಎಂಬ ಹೆಸರಿನ ಎರಡೂ ಮೊಂಡಗಾಲಿದ್ದವನು ತುಂಬಿದ ಹೊಳೆಯಲ್ಲಿ ಈಸಿದನು.

ವಿವಿಧ ವರ್ತಮಾನಗಳು

—(೦)—

ಸ್ಪೇನದ ಅಲ್ಫಾನ್ಸೋ ರಾಜನಂಥ ಹೋಲಿಕೆಯುಳ್ಳವನೇ ಒಬ್ಬನು ಮಾದ್ರಿದದಲ್ಲಿ ಒಂದು ಮಠದಲ್ಲಿ ಹೊಕ್ಕನು. ಅರಸನು ವೇಷ ಬದಲಿಸಿಕೊಂಡು ಗುರುಗಳ ಹತ್ತರಂತೆ ಬಂದಿದ್ದಾನೆಂದು ಸುದ್ದಿಯಾಗಿ ಮೂರು ಸಾವಿರ ಜನರು ಮಠಕ್ಕೆ ಮುತ್ತಿಗೆ ಹಾಕಿದರು. ಅರಸನ ಹೋಲಿಕೆಯುವನನ್ನು ತಂದು ತೋರಿಸಲು ಜನರು ಶಾಂತರಾಗಿ ತಮ್ಮ ದಾರೀ ಹಿಡಿದರು.

ಹಿಂದುಸ್ಥಾನದಲ್ಲಿ ಭತ್ತದ ಉತ್ಪತ್ತಿಯು ಹೆಚ್ಚಾಗಿ ಅದರಲ್ಲಿ ಕಸವೂ, ರುಚಿಯೂ ಹೆಚ್ಚುವಂತೆ ಶಾಸ್ತ್ರೀಯ ದೃಷ್ಟಿಯಿಂದ ಶೋಧ ಮಾಡಲು ಎಂಪಾಯರ ಮಾರ್ಕೆಟ ಬೋರ್ಡ ಸಂಸ್ಥೆಯವರು ವರ್ಷಕ್ಕೆ ೫೦ ಸಾವಿರದಂತೆ ಐದು ವರ್ಷಗ

ಲಕ್ಷ್ಯ ತಗೆದು ಕೊಳ್ಳುವರಿಗೆ ವಿನಂತಿ.

ಮೇಲಿನ ಸಂಗತಿಗಳಿಂದ ಸಿಂದೀ ಅಂಗಡಿಯ ಸ್ಥಲಾಂತರದಿಂದ ಜನತೆಗೆ ಅತ್ಯಂತ ತ್ರಾಸವಾಗುತ್ತಿದೆ. ಎಂದು ಮೇಲಿಯೇ ಕಾಣಿಸುತ್ತದೆ. ಹೀಗಿರಲು ಮೊದಲಿನ ಅಂಗಡಿಯನ್ನೇ ಕಾಯಮವಾಗಿಡದಿರುವದಕ್ಕೆ ಯಾವ ಕಾರಣಗಳು ಇರುವವೋ ಇದೇ ತಿಳಿಯದಾಗಿದೆ ಇವೆಲ್ಲ ವಿಚಾರ ಮಾಡಿ ದಯಾವಂತರಾದ ಅಧಿಕಾರಿಗಳು ಜನಹಿತದಲ್ಲಿ ಸಂಸ್ಥೆಗಳನ್ನು ಮುರಿಯುವದಕ್ಕೊಂದು ಹಾಕೊರೆಯುತ್ತಿದ್ದ ಈ ಪಾತಕಸ್ತೋತ್ರವು ಪರವಾನಿಗಿಯನ್ನೀಯದೆ ಜನಹಿತವನ್ನು ಸಾಧಿಸುವ ಶ್ರೇಯಸ್ಸಿಗೆ ಪಾತ್ರರಾಗಬೇಕಾಗಿ ನಮ್ಮ ಪ್ರಾರ್ಥನೆ,

ನಾಗರಿಕರು,

ತಾ॥ ೨೩-೭-೩೧

ಸಾಯುವ ಹೊತ್ತಿನಲ್ಲಿ ಭಾಷಣವೇ ಬೇಡ.

- (೦) -

ಸಿವಿಲಾದ ದೊಡ್ಡ ಭಾಗವಾದ ಸೋಲೋ ನದಿಯ ತಮ್ಮಲ್ಲಿಗೆ ಒಂದು ಭಾಷಣ ಮಾಡಬೇಕೆಂದು ಪಂಡಿತರಿಗೆ ವಿನಂತಿ ಮಾಡಿಕೊಂಡರು. ಜೀವಹೋಗುವಂಥ ಸಮಯ ಬಂದಾಗ, ಭಾಷಣ ಬೇಕಿಲ್ಲವೆಂದು ಅವನು ಉತ್ತರ ಕೊಟ್ಟಿದ್ದಾರೆ.

ನೋಟೀಸು

ರಜಿಸ್ಟರ್ಡ॥ ಚನ್ನಬಸಪ್ಪಾ ಬಿನ್ನ ಬಿಡಿವೆಪ್ಪಾ ಅತ್ತೀಗೇರಿ ಸಾ॥ ಗುಡಿಗೇರಿ ಇವರಿಗೆ

ಬಸಲಿಂಗಪ್ಪಾ ದತ್ತಕ ತಂದಿ ಚನ್ನಬಸಪ್ಪಾ ಅತ್ತೀಗೇರಿ ನಾನು ಕೊಡುವ ನೋಟೀಸು ಏನೆಂದರೆ

ನನ್ನ ದತ್ತಕ ತಂದೆಯಾದ ಚನ್ನಬಸಪ್ಪಾ ಬಿನ್ನ ಬಿಡಿವೆಪ್ಪಾ ಅತ್ತೀಗೇರಿಯವರ ನೀನು ಅವರ ಕಡೆಗೆ ಹುಟ್ಟಿಸಿದ ಸ್ವತಂತ್ರ ವಿಚಾರವು ಕಡಿಮೆ ಆಗುತ್ತಾ ಬಂದಿದ್ದು ನನ್ನ ಸ್ನೇಹಿತ ಜನರ ವಿಚಾರಣೆಯಿಂದ ನನ್ನ ದತ್ತಕ ಆಸ್ತಿಯನ್ನು ನನ್ನ ಹಕ್ಕು ಮುಣಗಿಸುವಷ್ಟರಿಂದ ಡಿಂದ ಪರಾಧೀನ ಮಾಡುವ ಪ್ರಯತ್ನದಲ್ಲಿ ಇದ್ದಾನೆಂದು ಕೇಳಿದ್ದೇನೆ ಸದರೀ ಆಸ್ತಿಯು ಪಿತ್ರಾರ್ಜಿತ ಆಸ್ತಿ ಇರುತ್ತದೆ ಸದರೀ ಆಸ್ತಿಯನ್ನು ನನ್ನ ದತ್ತಕ ತಂದೆಯ ಕಡೆಯಿಂದ ಖರೀದಿ ಪತ್ರೀ ವ ಬಕ್ಷೀಸು ವಗೈರೆ ಮಾಡಿಸಿಕೊಳ್ಳಬಾರದು ನೀವು ಲುಕ್ಸಾನಕ್ಕೆ ಪಾತ್ರರಾದೀರಿ ಅಂತಾ ಕೊಟ್ಟ ಜಾಹೀರ ನೋಟೀಸು ಸಹಿ ತಾರೀಖು ೨೨-೭-೧೯೩೧ ಇಸ್ವಿ

ಈ ಎಡಕ್ಕೆ ಹೆಬ್ಬೆಟ್ಟಿನ ಗುರ್ತಾ ಬಸವಣೆಪ್ಪಾ ದತ್ತಕ ತಂದಿ ಚನ್ನಬಸಪ್ಪಾ ಅತ್ತೀಗೇರಿ ಇತನದು ಇರುತ್ತದೆ

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

" ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ.

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,,
೬	ದುರ್ಗಸಿಂಹನ ಪಂಚತಂತ್ರ ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,,
೧೨	ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇಮಮಂದಿರ	೮	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹವ್ಯವಸ್ಥೆ	೮	,,
೧೭	ಮೋಹೇನೀ ಸಿಂದಕರ ನಡಾವಳಿ	೮	,,
೪೦	ಕನ್ನಡ ಮಾತು ತಲೆ ಯೆತ್ತುವ ಬಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೩	,,
೪೪	,, ಭಾಗ ೩	೪	,,
೧೮	ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಳಿದಾಸ	೬	,,
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೬	,,
೨೪	ಬೇಗಮ್ ಸಮರು	೬	,,
೨೫	ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುಶೀಲೆಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	,,
೩೨	ಶೇರಷಹಾ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	ಮೊಹರಮ್	೩	,,
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	,,
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿ	೧೨	
೪೮	ಪಾರ್ವತಿ	೮	,,
೪೯	ದ್ರಾಕ್ಷಾರಾಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧, ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಬ. ಹುಲಿಕವಿ, ಎಸ್. ಟೀ ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ.
ಒಂದೇ ರೂಪಾಯಿ.

೨. ನಿಜವಾದ ವೀರ ಅವನಾ ಜಗನ್ನಲ್ಲ [ಶ್ರೀ. ಗು. ಷ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ.
ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ
೧—೪—೦

೪. ಶ್ರೀಹರ್ಷನ ಆನನ ನಾಟಕಗಳು [ನಾ. ವೆ ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು.
೦—೧೦—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅನ್ನ್ಯಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ಬಿಡಿ ಪ್ರತಿ

ವಿಜಯ

[illegible]

ಸಂಪಾದಕರು— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೧೨) ಧಾರವಾಡ ಶುಕ್ರವಾರ ತಾರೀಖು ೨೪ ನೇ ಜುಲೈ ೧೯೩೧ (ಸಂಚಿಕೆ ೮೬೮

The Asian Life Assurance Co. Ltd Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನ ೧೯೧೦; ಹೆಡ್ ಆಫೀಸ ಮುಂಬಯಿ)

ಇದು ಪೂರ್ಣ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೫,೦೦೦,೦೦ ಕಂತದ ಹೆಚ್ಚನ್ನು ರೂ. ೭೦೦,೦೦೦
ವಿಮೆಯ ಹಣ ತೀರಿ ಕೊಟ್ಟದ್ದು ೧೦,೦೦,೦೦೦
ಜಿಂದಗಿ ೨೩,೦೮,೦೦೦

ಕರ್ನಾಟಕದಲ್ಲೆಲ್ಲ ಏಜೆಂಟರು ಬೇಕು. ಇಂದೇ ಪತ್ರ ಬರೆಯಿರಿ.

ಮೆಸರ್ಸ ದಾಂಡೇಕರ ವಕೀಲ — ಕೆ ಶ್ರೀ. ಹೊಸಕೇರಿ, ಬಿ. ಎ.
ಹುಬ್ಬಳ್ಳಿ, ಧಾರವಾಡ ಏಜೆಂಟರು — ಕರ್ನಾಟಕದ ಬ್ರಾಂಚ ಮ್ಯಾನೇಜರ
ಬಿ. ಎಚ್. ಪಾಟೀಲ — ಮುಖ್ಯ ಏಜೆಂಟರು—
ಹಾವೇರಿಯ ಮುಖ್ಯ ಏಜೆಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ವಕೀಲ
ಶ್ರೀ. ಬಿ. ಟಿ. ಶಿರೋಳಕರ.

ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦ ರೂ. ಗಳನು ಕೊಡುವಂಥ ಗೋಲ್ಡನ್ (ಸುವರ್ಣ) ಪಾಲಿಸಿಯನ್ನು ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ ಕಂತುಗಳಾದರೂ ಇಷ್ಟಕ್ಕೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜೆಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೊಂದರೆ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ
ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ
ಶ್ರೇಷ್ಠವಾದ ಸ್ಥಾನ.

ಜಿಂದಗಿಯು ಎಂಟು ಲಕ್ಷದ ಮೇಲುಂಟು. ಸಾಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಸಿಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಕೃಷ್ಣರಾವ ಬಿ. ಬಿಡಾರಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೩-೦-೦
೬ ,,	೭-೦-೦
೩ ,,	೪-೮-೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳ ಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ತಾರೀಖು ೨೪-೭-೧೯೩೧ನೇ ಇಸ್ವಿ

ಕೆಲಸ ಮಾಡುವ ಗೌಡರು ಚುನಾವಣೆಯಲ್ಲಿ ನಿಲ್ಲಬಾರದು.

—(೦)—

ಪುಣೆಯಲ್ಲಿ ಕೂಡಿದ ಸ್ಥಾನಿಕ ಸ್ವರಾಜ್ಯ ಪರಿಷತ್ತಿನವರು ಕೆಲಸ ಮಾಡುವ ಗೌಡರು ಮ್ಯುನಿಸಿಪಾಲಿಟಿ, ಗ್ರಾಮ ಪಂಚಾಯಿತ ಮತ್ತು ಲೋಕಲಬೋರ್ಡುಗಳ ಚುನಾವಣೆಯಲ್ಲಿ ಉಮೇದವಾರರಾಗಿ ನಿಲ್ಲಬೇಕೆಂಬ ಠರಾವು ಬಂತು. ಆದರೆ ಅದು ಪಾಸಾಗಲಿಲ್ಲ. ಕೆಲಸ ಮಾಡುವ ಗೌಡರು ತಮ್ಮೂರ ಪಟ್ಟಿಗೆ ರೈತರ ಮೇಲೆ ಅಧಿಕಾರ ನಡಿಸಿ, ಆರಿಸಲ್ಪಡುವದು ದೊಡ್ಡ ಆಶ್ಚರ್ಯವಲ್ಲ. ಅವರು ಸರಕಾರಕ್ಕೆ ಪ್ರತ್ಯಕ್ಷವಾಗಿ ಸಂಬಂಧವುಳ್ಳವರಾದ್ದರಿಂದ, ಅವರಿಂದ ವಿಚಾರ ಸ್ವಾತಂತ್ರ್ಯದ ಕೆಲಸವಾಗುವದು ತೀರ ಕಡಿಮೆಯಾಗುತ್ತದೆ. ಸರಕಾರೀ ಕಾಮದಾರರು ಮ್ಯುನಿಸಿಪಾಲಿಟಿ, ಲೋಕಲಬೋರ್ಡುಗಳಲ್ಲಿ ಒಬ್ಬಿಬ್ಬರಿದ್ದರೂ, ಅಧಿಕಾರದ ಮುರವತ್ತಿನಿಂದ ಸರಕಾರ ದೃಷ್ಟಿಯಿಂದ ಮಾಡುವ ಸೂಚನೆ ಮತ್ತು ತರುವ ಠರಾವುಗಳಿಗೆ ಗೌಡರಂಥ ಮೆಂಬರರು ಶಾಮೀಲಾಗುತ್ತಾರೆಂದು ಪ್ರತಿಯೊಂದು ತಾಲೂಕಿನಲ್ಲಿ ಅನುಭವಕ್ಕೆ ಬಂದ ಸಂಗತಿಯಾಗಿರುತ್ತದೆ. ಈಗಿನ ಕಾಲವು ಪ್ರಜಾಪ್ರಭುತ್ವದ್ದಾಗಿದ್ದು, ಸರಕಾರದ ಹಂಗಿನೊಳಗಿರದಂಥ ಸ್ವತಂತ್ರ ವೃತ್ತಿಯ ಜನರೇ ಉಮೇದವಾರರಾಗಿ ನಿಲ್ಲುವದು ವಿಹಿತವಾಗುತ್ತದೆ. ಈ ಠರಾವಿನಿಂದ ಗೌಡರು ತಮ್ಮದೊಂದು ಮರ್ಜಿಯ ಬಹುಮಾನದ ಸ್ಥಳ ಹೋಗುವದೆಂದು ಅಸಮಾಧಾನ ಪಡಬಹುದು. ರಾಷ್ಟ್ರಹಿತ ದೃಷ್ಟಿಯಿಂದ ವಿಚಾರ ಮಾಡಿದರೆ ತಾವು ಮೆಂಬರರಾಗುವದು ಸರಿಯಾಗುವದಿಲ್ಲೆಂದು ಮನಸಾ ಕಂಡುಬಂದು, ಸರಕಾರದವರು ಈ ವಿಷಯವಾಗಿ ಠರಾವು ಮಾಡುವ ಮುಂಚಿತವಾಗಿಯೇ ತಾವು ಉಮೇದವಾರರಿಗೆ ಶರಣು ಹೊಡೆಯುವದು ಹೆಚ್ಚು ಶ್ರೇಯಸ್ಕರವಾಗುತ್ತದೆ.

ಇದೇ ವಿಷಯವಾಗಿ ಶ್ರೀ. ಸುರ್ವೆಯವರ ಭಾಷಣ

ಲೋಕಲ - ಬೋರ್ಡುಗಳಂಥ ಸಂಸ್ಥೆಗಳು ಶಕ್ಯವಾದಷ್ಟು ಸ್ವತಂತ್ರತೆಯಿಂದ ನಡೆಯಬೇಕೆಂಬ ಉದ್ದೇಶವಾಗಿರುವಾಗ, ಪೋಲೀಸ ಪಾಟೀಲರಂಥ ಸರಕಾರೀ ಕಾಮದಾರರು ಮೆಂಬರರಾಗಬೇಕೆಂದು ಪರವಾನಿಗಿ ಕೊಡುವದು ಲೋಕಲಬೋರ್ಡಿನ ಮೂಲ ಉದ್ದೇಶದ ಮೇಲೆ ಕೊಡಲಿಯ ಪೆಟ್ಟು ಹಾಕುವಂತಾಗುತ್ತದೆ. ಇದರ ಹೊರ್ತು ಇವರಿಗೆ ಬೋರ್ಡಿನ ಕಮಿಟಿಗೆ ಬರುವದೂ ಶಕ್ಯವಾಗಲಾರದು. ಸರಕಾರೀ ಕೆಲಸವನ್ನು ಅಸಡ್ಡಾಳ ಮಾಡಿ, ತಮ್ಮ ಊರಿಂದ ದೂರ ದೂರಿನಲ್ಲಾಗುವ ಕಮಿಟಿಗೆ ಬರುವದೆಂತ? ಬಂದರೆ - ಇವರ ಕೆಲಸಕ್ಕೆ ಅಡ್ಡಿಯಾಗುವದಿಲ್ಲವೆ? ಇದು ಸಂಕ್ರಮಣ ಕಾಲವಿದ್ದು, ಬೋರ್ಡುಗಳು ಸ್ವತಂತ್ರವಾಗಿರಬೇಕೆಂದೇ ಜನತೆಯಲ್ಲಿ ಅಭಿರುಚಿಯುಂಟಾಗಿರುತ್ತದೆ. ದಿನಾಲು ೨೪ ತಾಸು ಸರಕಾರೀ ಕೆಲಸದಲ್ಲಿ ತೊಡಗುವ ಪೋಲಿಸಪಾಟೀಲನಿಗೆ ಬೋರ್ಡಿನ ಕೆಲಸದಲ್ಲಿ ತನ್ನ ಎರಡು ಅಕ್ಕೀಕಾಳು ಹಾಕಲಿಕ್ಕೆ ಸಮಯ ಕೊಡುವದು ಎಂದಿಗೂ ಇಷ್ಟವಾಗಿರುವದಿಲ್ಲ.

ಕೌನ್ಸಿಲದಲ್ಲಿ ದಿವಾನ ಕಂಬಳಿಯವರಿಗೆ ಬಂದಿದ್ದ ಪಿಕಲಾಟ !!

— (೦) —

ದಿವಾನ, ದಿವಾನಬಹಾದ್ದೂರ ಕಂಬಳಿಯವರ ಕಡೆಗೆ ಸಿಂಧದ ಸಕ್ಕರ ಕಾಲಿವೆಯ ಖಾತೆಯೂ ಇರುತ್ತದೆ. ಈ ಕಾಲಿವೆಯ ಸಂಬಂಧವಾಗಿ ಮೆ. ಮೀರ ಮಹಮದ ಬಲೂಚ ಸಾಹೇಬರು ಕೆಲವು ಪ್ರಶ್ನೆಗಳನ್ನು ಕೇಳಿದರು. ಕೌನ್ಸಿಲದಲ್ಲಿ ದೇಶ ಭಾಷೆಯೂ ನಡೆಯಬೇಕೆಂಬ ನಿಯಮವಿದೆಯಷ್ಟೇ, ಮೀರ ಸಾಹೇಬರು ತಮ್ಮ ಪ್ರಶ್ನೆಗಳನ್ನು ತಮ್ಮ ಮಾತೃಭಾಷೆಯಾದ ಉರ್ದುವಿನಲ್ಲಿಯೇ ಹಾಕಿದರು. ದಿವಾನ ಕಂಬಳಿಯವರು ತಮಗೆ ಉರ್ದು ಬರುತ್ತದೆಂದು ತೋರಿಸಲು ಅವಕ್ಕೆ ಇಂಗ್ರೇಜಿಯಲ್ಲಿ ಉತ್ತರ ಕೊಡಹೋದರು. ಅಧ್ಯಕ್ಷರು ಮುಸಲಮಾನರಾಗಿದ್ದು, ಅವರು ಎರಡೂ ಭಾಷೆಗಳನ್ನು ತಿಳಿದವರು. ಮೀರಸಾಹೇಬರ ಪ್ರಶ್ನೆ ಹಾಗು ದಿವಾನ ಕಂಬಳಿಯವರ ಉತ್ತರ ಇವೆರಡೂ ಅರ್ಥಾರ್ಥ ಸಂಬಂಧವುಳ್ಳಂಥವಾಗದ್ದನ್ನು ಕಂಡು, ಅಧ್ಯಕ್ಷರಾದ ಮೆ- ದೆಹವಿಲಯವರು ನಿಮಗೆ ಉರ್ದು ತಿಳಿಯುವಂತೆ ತೋರುವದಿಲ್ಲೆಂದು ದಿವಾನರಿಗನ್ನಲು- ಹೌದು; ನನಗೆ ಆ ಪ್ರಶ್ನೆ ತಿಳಿಯಲಿಲ್ಲೆಂದು ಉತ್ತರ ಕೊಟ್ಟರು. ಆಗ

ಅಧ್ಯಕ್ಷರು ಈ ಹೊತ್ತಿನ ತನಕ ನೀವು ಕೊಟ್ಟ ಉತ್ತರಗಳಿಂದ, ಪ್ರಶ್ನೆಗಳನ್ನು ತಿಳಕೊಳ್ಳಲು ನೀವು ಸೆಕ್ರೆಟರಿಯ ಕೂಡ ಮಾತಾಡುತ್ತಿದ್ದಿರೆಂದು ಅಂದು ಕೊಂಡಿದ್ದೆನು. ಮೊದಲೇ ನನಗೆ ಕೇಳಿದ್ದರೆ ಆ ಪ್ರಶ್ನೆಗಳನ್ನು ನಾನು ಇಂಗ್ಲಿಷದಲ್ಲಿ ಭಾಷಾಂತರ ಮಾಡಿ ಹೇಳುತ್ತಿದ್ದೆನು,

ಎಂಬದಾಗಿ ದಿವಾನರಿಗೆ ಹೇಳಿ, ಮುಂದೆ ಅವರ ಪೀಕಲಾಟ ತಪ್ಪಿಸಿದರು.

ಪಂಡಿತ ಜವಾಹರಲಾಲರು ಕುದುರೆಯಿಂದ ಕೆಳಗಿಳಿದರು

—(೦)—

ಪಂಡಿತ ಜವಾಹರಲಾಲರು ಲಾರ್ಡ ವಿಲಿಂಗ್ಡನ್ ಸಾಹೇಬರ ಕೂಡ ಮಾತಾಡಲಿಕ್ಕೆಂದು ಅವರ ಬಿಡಾರಕ್ಕೆ ಬರುತ್ತಿದ್ದಾಗ, ಗುಡ್ಡದ ಇಳಕಲಿನಲ್ಲಿ ಕುದುರೆಯು ಜಾರಿ, ಧಪ್ಪನೆ [illegible] ಬಿತ್ತು. ಪಂಡಿತರು ಅಶ್ವವಿದ್ಯಾವಿಶಾರದರಾದ್ದರಿಂದಲೇ, ತಟ್ಟನೇ ಹಾರಿಕೊಂಡು, ಪಾರಾದರು. ಪಂಡಿತರು ಕುದುರೆಯನ್ನು [illegible] ಕಳಿಸಿ, ಕಾಲ್ನಡಿಗೆಯಿಂದಲೇ, ಮನೆಗೆ ಬಂದರು

ಮಹಾತ್ಮರ ಕೂಡ ಪ್ರಶ್ನೋತ್ತರಗಳು

—(೦)—

ರಾವುಂಡ ಟೇಬಲಿಗಾಗಿ ಮಹಾತ್ಮರಿಗೆ ಆಮಂತ್ರಣ ಕೊಟ್ಟ ತರುವಾಯ - [illegible] ಪ್ರಸಿದ್ಧ [illegible] ಹೋದರು [illegible]

- ಪ್ರ - ಆಮಂತ್ರಣ ಬರುವ ಮುಂಚೆಯಾಗಿ ಸರಕಾರದವರು ನಿಮ್ಮ ಒಪ್ಪಿಗೆಯನ್ನು ಪಡಕೊಂಡಿದ್ದರೇನೆ?
- ಉ - ಹೌದು ಒಪ್ಪಿಗೆ ಕೊಟ್ಟಿದ್ದೆನು. ಆದರೂ [illegible] ವಾತಾವರಣವು ನಿರ್ಮಲವಾದರೇ ಹೋಗತಕ್ಕವನು.
- ಪ್ರ - ಆ ವಾತಾವರಣವು ಹೇಗಿದೆ?
- ಉ - ವೇಧಶಾಲೆಯವರನ್ನು ಕೇಳಿರಿ. ಏಕೆಂದರೆ - ಹವೆಯ ಸ್ಥಿತಿಗತಿ ತಿಳಕೊಳ್ಳುವದಲ್ಲಿ ನಾನು ತಜ್ಞನಲ್ಲ.
- ಪ್ರ - ಲಂಡನಕ್ಕೆ ಹೋಗುವದಾದರೆ - ಯಾವಾಗ ಪ್ರಯಾಣ ಬೆಳೆಸಬಹುದ?
- ಉ - ೧೫ನೆಯ ಅಗಷ್ಟ.
- ಪ್ರ - ನಿಮ್ಮ ಹವಾಮಾನವು ಒಡಂಬಡಿಕೆಯ ಮಟ್ಟಿಗೆ ಇರುತ್ತದಲ್ಲವೆ?
- ಉ - ಹೌದು
- ಪ್ರ - ಈ ಸ್ಥಿತಿಯು ಯಾವಾಗ ಸುಧಾರಿಸುವದೆಂದು ತಿಳಿಯುತ್ತೀರಿ.
- ಉ - ಶಸ್ತ್ರ ಹಾಕಿ ಹೆಚ್ಚು ಚಿಕಿತ್ಸೆ ಮಾಡಿದಂತೆ ರೋಗಿಯು ಸ್ವರ್ಗಸ್ಥಾನಕ್ಕೆ ಹತ್ತುತ್ತದೆ.

ಮುಂಬಯಿಯ ಗವ್ಹರ್ನರಸಾಹೇಬರ ಮೇಲೆ ಗುಂಡು

ಗುಂಡು ಗುಂಡಿಗೆ ಸವರಿ, ಸಾಹೇಬರು ಕುತ್ತು ದಾಟಿದರು

—(o)—

ಫರಗ್ಯೂಸನ್ ಕಾಲೇಜದಲ್ಲಾದ ಅನಾಹುತ

....(o)....

ಮುಂಬಯಿಯ ಆಕ್ಟಿಂಗ ಗವ್ಹರ್ನರರಾದ [illegible] ಹಾಟ್ಸನ್ನಸಾಹೇಬರು ಪುಣೆ ಫರ್ಗ್ಯುಸನ್ನ ಕಾಲೇಜಿನಲ್ಲಿರುವ ವಾಡಿಯಾ ವಾಚನಾಲಯವನ್ನು ನೋಡುವದಕ್ಕೆಂದು ಪತ್ನಿಸಹಿತ ಬುಧವಾರ ಪ್ರಾತಃಕಾಲದ ೧೧ ಗಂಟೆಯ ಸಮಯದಲ್ಲಿ ಬಂದರು. ಕಾಲೇಜದ ಪ್ರಿನ್ಸಿಪಾಲರಾದ ಶ್ರೀ. ಮಹಾಜನಿಯವರು ಅವರಿಗೆ ಸುಸ್ವಾಗತವನ್ನಿತ್ತರು. ಸಾಹೇಬರು ಅಂಗರಕ್ಷಕರೇ ಮೊದಲಾದ ಪರಿವಾರ ಸಹಿತ ಲೈಬ್ರರಿಯಲ್ಲಿ ವಾಡಿಯಾ ಮನೆತನದ ಹಿರಿಯ ದೊಡ್ಡ ಗೃಹಸ್ಥರ ಭಾವಪಟಗಳನ್ನು ನೋಡುತ್ತಿದ್ದಾಗ, ಜೂನಿಯರ ಬಿ. ಏ. ವರ್ಗದಲ್ಲಿದ್ದ [illegible] ಗೋಗಟೆ ಎಂಬ ವಿದ್ಯಾರ್ಥಿಯು ಹಿಂದಿನಿಂದ ಪಿಸ್ತೂಲದಿಂದ ಗುಂಡು ಹಾರಿಸಿದನು. ಗುಂಡು ಸಾಹೇಬರ ಎದೆಯ ಮುಂದೆ ಕೋಟಿಗೆ ಹಾಕಿದ ಧಾತುವಿನ ಗುಂಡಿಗೆ ತಟ್ಟಿ, ಅಲ್ಲಿದ್ದ ಪಾಕೀಟ ಕಿಸೆಯನ್ನು ಸವರಿಕೊಂಡು ಹೋಯಿತು. ಆ ಕ್ಷಣವೇ ಆತನು ಮತ್ತೊಂದು ಗುಂಡು ಹಾರಿಸಿದನು. ಅದು ಹುಸೀ ಹೋಯಿತು. ಕೂಡಲೇ ಸಾಹೇಬರ ಅವರ ಅಂಗರಕ್ಷಕರೂ ಗೋಗಟೆಯನ್ನು ಹಿಡಿದು, ಪೋಲೀಸರ ವಶಕ್ಕೆ ಕೊಟ್ಟರು. ಟೆಲಿಫೋನಿನಿಂದ ಈ ಸುದ್ದಿಯು ಪೋಲೀಸ ಅಧಿಕಾರಿಗಳಿಗೆ ತಿಳಿಸಲ್ಪಟ್ಟಿತು. ಅವರು ಬಂದ ಬಳಿಕ ಸಾಹೇಬರು ಪಿಸ್ತೋಲನ್ನು ಅವರ ವಶ ಮಾಡಿದರು. ಅವರು ಆತನನ್ನು ಫರಾಸಖಾನೆಗೆ ಕಳಿಸಿದರು. ಬಳಿಕ ಗವ್ಹರ್ನರಸಾಹೇಬರು ಕಾಲೇಜದ ದಿವಾನಖಾನೆಯಲ್ಲಿ ಬಂದರು. ಪ್ರಿನ್ಸಿಪಾಲರು ಅನಿಷ್ಟ ಪ್ರಸಂಗದ ಬಗ್ಗೆ ಖೇದವನ್ನು ವ್ಯಕ್ತಪಡಿಸಿ, ಸಾಹೇಬರಿಗೂ ಅವರ ಪತ್ನಿಯವರಿಗೂ, ಇತರೇ ಜನರಿಗೂ ಪುಷ್ಪಹಾರ ಮತ್ತು ಪುಷ್ಪಗಳನ್ನು ಕೊಟ್ಟ ಬಳಿಕ ಸಾಹೇಬರು ನಿಶ್ಚಿಂತೆಯು ಪೂರ್ವದಂತೆ ಸ್ವಸ್ಥಾನಕ್ಕೆ ತೆರಳಿದರು.

ಬಂಗಾಲದ ಗವ್ಹರ್ನರ ಸರ ಫುಲರ, ಲಾರ್ಡ ಹಾರ್ಡಿಂಜ, ಪಂಜಾಬದ ಗವ್ಹರ್ನರ ಸರ ಮಾಂಗ ನಾರ್ಕಟನ್ನ ಮೊದಲಾದವರ ಮೇಲೆ ಅರಾಜಕರು ಗುಂಡು ಹಾರಿಸಿದರು. ಆದರೆ ಬ್ರಿಟಿಶ ರಾಜ್ಯದ ಪುಣ್ಯವು [illegible]ವಾಗಿದ್ದರಿಂದ, ಎಲ್ಲರೂ ಕುತ್ತು ದಾಟಿದರು. ಸರ್ ಹಾಟಸನ್ನ ಸಾಹೇಬರ [illegible] ಮುಯ್ಯಿ ತೀರಿಸಿಕೊಳ್ಳಬೇಕೆಂದು ಗೋಗಟೆಯು ಕೊಲೆಯ ಪ್ರಯತ್ನ ಮಾಡಿರಬಹುದು.

ಕಾಂಗ್ರೆಸದ ಅಹಿಂಸೆಯ ಅಸಹಕಾರದ್ದೇ ದಿಗ್ವಿಜಯವಾಗಬೇಕಾದ್ದರಿಂದ, ಅರಾಜಕರಿಗೆ ಯಶ ಬರದೆ ಹೋಗುತ್ತದೆಂದೂ ಹೇಳಬೇಕಾಗುತ್ತದೆ ಮಹಾತ್ಮರು ಹೇಳಿದಂತೆ ಅಹಿಂಸೆಯಿಂದ ಸ್ವರಾಜ್ಯ ತರುವ ಕೆಲಸವನ್ನು ಅವರು ಏಕೆ ಒಪ್ಪಿಕೊಬಾರದು?

ಸರಸ್ವತಿ ಮುಕ್ತ ಸಜ್ಜನರ ವಾಸಸ್ಥಾನದಲ್ಲಿ ಶಿಂದಿ ಶೆರೆಯ ಅಂಗಡಿ

ಹುಬ್ಬಳ್ಳಿಯ ನಾಗರಿಕರು ಈ ಕೆಳಗಿನ ಅರ್ಜಿಯನ್ನು ಧಾರವಾಡದ ಕಲೆಕ್ಟರ ಸಾಹೇಬರ ಕಡೆಗೆ ಕಳಿಸಿದ್ದಾರೆ.

—(o)—

ಮಹನಿಯರೇ

ಹುಬ್ಬಳ್ಳಿಯ ಗಣೇಶ ಪೇಟೆ ಶಿಂದೀ ಅಂಗಡಿಯು ಈಗಿದ್ದ ಸ್ಥಳವನ್ನು ಬದಲಾಯಿಸಿ ಶ್ರೀ. [illegible] ಇವರ ಇಮಾರತಿಯ ಹಿಂಬದಿಯ ಬೈಲು ಜಾಗೆಯಲ್ಲಿಡುವದಕ್ಕಾಗಿ ಪ್ರಯತ್ನ ನಡೆಸಿದ್ದನ್ನು ಅರಿತು ಈ ರೀತಿಯಲ್ಲಿ ಈ ಶಿಂದೀ ಅಂಗಡಿಯು ಸ್ಥಳಾಂತರವಾಗಬಾರದೆಂದು ತಮ್ಮೆಡೆಗೆ ನಾಗರೀಕರನೇಕರು ಸೇರಿ ಅರ್ಜಿಯನ್ನು ಮಾಡಿಕೊಂಡಿದ್ದರು; ಇಲ್ಲವೆ ಅಬಕಾರೀ ಖಾತೆಯ ಇನ್ಸಪೆಕ್ಟರ ಸಾಹೇಬರವರು ಅಂಗಡಿಯ ಹೊಸ ಜಾಗೆಯನ್ನು ನೋಡುವದಕ್ಕೆಂದು ಬಂದ ವೇಳೆಯಲ್ಲಿಯೂ ಅನೇಕ ಹಿಂದೂ - ಮುಸಲಮಾನ ನಾಗರಿಕರು, ಹೊಸಸ್ಥಳದಲ್ಲಿ ಅಂಗಡಿಗೆ ಪರವಾನಗೆ ಕೊಡಬಾರದೆಂದು ಬಾಯಿಂದ ಹೇಳಿಕೊಂಡರು. ಇಷ್ಟೆಲ್ಲ ಆಗಿದ್ದರೂ ಆ ಜಾಗೆಯಲ್ಲಿ ನಡೆದ ಕಟ್ಟಡದ ಸಿದ್ಧತೆಯನ್ನು ನೋಡಿದರೆ, ಅಂಗಡಿಗೆ ಪರವಾನಿಗೆಯು ಸಿಕ್ಕಂತೆ ಭಾಸವಾಗುತ್ತದೆ. ಆದರೂ ಕೆಳಗೆ ಕಾಣಿಸಿದ ಸಂಗತಿಗಳನ್ನು ಲಕ್ಷ್ಯಕ್ಕೆ ತಂದಲ್ಲಿ ಅಂಗಡಿಯನ್ನು ಹಾಕಲಿಕ್ಕೆ ಪರವಾನಗಿಯನ್ನು ಕೊಡುವದರಿಂದ ಜನರಿಗೆ ತಾಪವು ವಿಶೇಷವಾಗುವದೆಂದು ಬೇರೆ ಹೇಳುವ ಕಾರಣವಿಲ್ಲ. ಕಾರಣ ಜನ ಹಿತದ ಕಡೆಗೆ ದೃಷ್ಟಿ ಇಟ್ಟು ಈ ತರಹದ ಪರವಾನಿಗಿಯನ್ನು ಕೊಡಬಾರದಾಗಿ ನಮ್ಮ ವಿನಂತಿಯು.

(೧) ಹೊಸ "ಅಂಗಡಿಯು ಸ್ಥಳದ ಮುಂದೆಯೇ ಮ್ಯುನಿಸಿಪಾಲ್ಟಿಯ ರಸ್ತೆ ಇರುತ್ತದೆ. ಈ ರ ಯಲ್ಲಿ ಪಕ್ಕಾ ಗಟಾರವಿಲ್ಲದ್ದರಿಂದ ಅರ್ಧ ರಸ್ತೆ ರಸ್ತೆಯೇ ಗಟಾರವಾಗಿದೆ. ಉಳಿದರ್ಧ ಮಾ ದಿಂದಲೇ ಗಣೇಶ ಪೇಟೆಯ ರೇಲ್ವೆಚಾಳುಗಳಲ್ಲಿ ಜನರನೇಕರು ಪೇಟೆಗೆ ಹೋಗಿ ಬರುವ ಅನು ಲತೆಯನ್ನು ಮಾಡಿಕೊಂಡಿದ್ದಾರೆ. ಇದೇ ಮ ಗದಿಂದಲೇ ಗಣೇಶ ಪೇಟೆಯ ಸ್ತ್ರೀಪುರುಷ ಹತ್ತಾರಲ್ಲಿದ್ದ ಮ್ಯುನಿಸಿಪಾಲ್ಟಿಯ ಶೌಚಕೂಪ ಹೋಗುತ್ತಾರೆ. ಇಲ್ಲಿ ಶಿಂದೀ ಅಂಗಡಿಯಾಗುದರಿಂದ ಇವರಿಗೆ ಹೆಚ್ಚು ತ್ರಾಸವಾಗುತ್ತಿದೆಯೆಂ ಬೇರೆ ಹೇಳಬೇಕೇ?

(೨) ಇನ್ನು ಹೊಸದಾಗಿ ಅಂಗಡಿಯಾಗು ಸ್ಥಳದ ಮುಂಭಾಗದಲ್ಲಿಯೇ [illegible] ಇ ವದು. ಅಲ್ಲಿ ದಿನಾಲು ಸ್ತ್ರೀಪುರುಷರನೇಕ ಕಲೆಯುವರು. ಸಿಂದಿಯನ್ನು ಕುಡಿಯುವದರಿಂ ಈ ಜನರಿಗೆ ತಾಪವಾಗದಿದ್ದೀತೆ? ಇದರಿಂ ಅಶಾಂತತೆಯೂ ಸಂಭವನೀಯವೆಂದು ಬೇರೆ ಹೇಳಬೇಕಾಗಿಲ್ಲ.

(೩) ಯಾವ ಇಮಾರತಿಯ ಬೈಲಿನಲ್ಲಿ ಈ ಹೊಸ ಅಂಗಡಿಯು ಸ್ಥಾಪಿತವಾಗುವದೋ, ಆ ಇಮಾರತಿಯಲ್ಲಿ ಶ್ರೀ. ಸರಸ್ವತಿ ವಿದ್ಯಾರಣ್ಯ ಧರ್ಮಾರ್ಥ ವಾಚನಾಲಯವಿರುವದು ಇದೊಂದು ಜ್ಞಾನ ಪತ್ರದ ಸಂಸ್ಥೆಯೆಂದು ಎಲ್ಲರಿಗೂ ಮಾನ್ಯವಿದ್ದು ದಿನಾಲು ೧೦೦-೧೫೦ ಜನರು ಇದರ ಉಪಯೋಗವನ್ನು ಮಾಡಿಕೊಳ್ಳುತ್ತಾರೆ ಇಡಿ ಕರ್ನಾಟಕದಲ್ಲಿಯೇ ಇದೊಂದು ಮಾದರಿಯ ಸಂಸ್ಥೆಯಾಗಿದೆಯೆಂದು ನಿಃಶಂಕವಾಗಿ ಹೇಳಬಹುದು ಈಗಿನ ಪ್ರಗತಿಪರ ಕಾಲದಲ್ಲಿ ಇಂಥ ಸಂಸ್ಥೆಗಳೆಷ್ಟಾದರೂ ಬೇಕೇ [illegible] ವಿಶೇಷವಾಗಿ ಪೋಷಣವಾಗಿದ್ದ [illegible] ವಾಚನಾಲಯಗಳೂ ಅಗ್ರಭಾಗದಲ್ಲಿರುವವೆಂದು ವಿದ್ವಜ್ಜನರ ಅಭಿಪ್ರಾಯ. ಈ ಪರಿಸ್ಥಿತಿಯಲ್ಲಿ ಈ ಸಂಸ್ಥೆಯ ಹಿಂದಿಯಲ್ಲಿಯೇ ಸಿಂದಿ ಅಂಗಡಿಯಾಗುವದು ಶಿಕ್ಷಣ ಸಂಸ್ಥೆಗೆ ಘಾತುಕವಾಗುವದೆಂದು ಸಾರಿ ಹೇಳಬಹುದು ಈ ಅಂಗಡಿಯಿಂದ ಸಂಸ್ಥೆಯ ಉಪಯೋಗ ತಕ್ಕೊಳ್ಳುವ ಜನರೇ ಬರದಂತಾಗಿ ಸಂಸ್ಥೆಯ ಮೂಲೋದ್ದೇಶವೇ ನಾಶವಾಗುವದು ಇದಲ್ಲದೆ ಇದೇ ಇಮಾರತಿಯ ಉಳಿದ ಭಾಗಗಳಲ್ಲಿ ವ್ಯಾಯಾಮ ಶಾಲೆ ದೇಶೀ ದವಾಖಾನೆ, ಜ್ಯೋತಿಷ್ಯಶಾಸ್ತ್ರ, ಹಾಗು ಲಿಂಗಾಯತರ ಖಾನಾವಳಿ ವಗೈರೆ ಇರುವವು ಇವರೆಲ್ಲರಿಗೂ ಅತಿಯಾಗಿ ತಾಪವು ಆಗುವದು ತೀರ ಸಹಜವಾದ ಮಾತಾಗಿದೆ ಆದ್ದರಿಂದ ಪರವಾನಗಿಯನ್ನು ಕೊಡುವ ಪೂರ್ವದಲ್ಲಿ ಈ ಸಂಗತಿಗಳನ್ನು ಪೂರ್ಣ

ರ ಸರಕಾರದಲ್ಲಿ ನೌಕರಿ ಮಾಡುವವರಿಗೆ ನ ಗೆ ರೆಮಿಶನ್ ಸಿಗುವದೆಂಬುವದನ್ನು ಮರೆತು ರಿ. ನಮ್ಮ ಸಂಗಡ ಯುದ್ಧಕ್ಕೆ ತಯಾರಾ ನಾನು ಮನೆಯಿಂದ ಶ್ರೀ ಮಂಗಿನ್ನಿದ್ದು ಕ್ ಗೆ ಅಕಿಮಾಡಿಕೊಂಡು ಕುಳಿತಿಲ್ಲ. ನಿಮ್ಮನ್ನು ದೇ ಬಿಡುತ್ತೇನೆ. ಮಹಾರಾಜರವರಿಂದ ಆರ್ಡರ್ ಆದರೂ ಸಹ, ನಾನು ರೆಮಿಶನ್ ಎಂದೂ ಕೊಡವದಿಲ್ಲ. ನಿಮ್ಮ ಜೀವ ಉಳಿಸಿಕೊಳ್ಳುವದನ್ನು ಡಿಕೊಳ್ಳಿರಿ ನನಗೆ ನೀವು ಈಡಾಗಲಿಕ್ಕಿಲ್ಲ. ಗಳೂರ - ದಾವಣಗೆರೆಗಳ ದಂಗೆ ನೆನಪಿಗೆ ಂದುಕೊಳ್ಳಿರಿ. ಇದಲ್ಲದೇ ನು ಇದೇ ೨೨ ಕ್ಕೆ ಬೆಂಗಳೂರಿಗೆ ಹೋಗಿ ರ ನ್ಯೂ ಕಮೀಶನರರಿಗೆ ಭೆಟ್ಟಿಯಾಗಿ ರೆಮಿಶನ ಕೊಡಿರೆಂದು ಹೇಳಿ ಬಂದೀ ಸಹಿತ ಬರುತ್ತೇ ದು ವಗ್ಗೈರೆ, ವಗ್ಗೈರೆ ಬೆದರಿಕೆ ಹಾಕಿದರು. ಸಾ ಬರು ಬೆದರಿಸುವದನ್ನು ಕೇಳಿ ಸಂಗತ ಇದ್ದ ಲದಾರರು ಸಂತೋಷದಿಂದ ನಗುತ್ತಿದ್ದರು. ರೈತ ಬಾಂಧವರು ಇದೆಲ್ಲವನ್ನು ಶಾಂತರೀ ಯಿಂದ ಕೇಳಿಕೊಂಡು ಕಡೆಗೆ "ಸಾಹೇಬರೇ ದಲೇ ನಾವು ಹೊಟ್ಟೆಗೆ ಕೂಳಿಲ್ಲದೆ ಸಾಯು ದ್ದೇವೆ. ನಮ್ಮನ್ನಾಳುವ ನೀವೇ ನಮ್ಮನ್ನು ಫಗೆ ಕೊಟ್ಟಲ್ಲಿ ಬಹಳೇ ನೆಟ್ಟಗಾಗುತ್ತದೆ, ದು ಹೇಳಿದರು. ನಂತರ ಸಾಹೇಬರು ತಿಕಾಳ ಪ್ಪಕ್ಕೆ ಬಂದು ತಾಸೆರಡು ತಾಸು ಇದ್ದು ತಿಕಾ ರಕ್ಕೆ ದಯಮಾಡಿಸಿದರು.

ತಮ್ಮ
ರಾ. ಕೊ. ಕುಲಕರ್ಣಿ
ಸೆಕ್ರೆಟರಿ, ಹಿ. ತಾ. ಕಾ. ಕ. ಹಾಂವ್ಸಭಾವಿ

ಮಹಾತ್ಮರು ಲಂಡನಕ್ಕೆ ಹೋಗುವದು ನ್ನೂ ಖಾಯಂವಾಗಿಲ್ಲ. ಮುಂಬಯಿಯಲ್ಲಿ ಆಗ ತಿಂಗಳ ೬ನೆಯ ತಾರೀಖಿನ ಅಖಿಲ ಭಾರ ೀಯ ಕಾಂಗ್ರೆಸ ಸಭೆಯು ಕೂಡುವದು. ಅಲ್ಲಾ ವ ನಿರ್ಣಯ ಪ್ರಕಾರ, ಪ್ರಯಾಣದ ವಿಷಯ ತ್ತಾಗುವದು.

ಒಬ್ಬ ಇಂಗ್ಲಿಶ ಗೃಹಸ್ಥರು ಮಹಾತ್ಮರನ್ನು ಣಲಿಕ್ಕೆ ಹೋಗಿದ್ದರು. ಅವರ ಕೂಡ ಆಗುವ ಸಂಷಣೆಯು ಮುಂದೆ ಉಟ ಉಡಿಗೆಯು ೪೫ ಪದಾರ್ಥವೆಂದು ಸಾಹೇಬರು ಉದ್ಗಾರ ತೆಗೆದರು.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

“ಈ ಕೆಳಗೆ ಬರೆದ ೫೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯ ಕಡೆಯಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕವಾಗಿಯೂ ಮಂಜೂರಾಗಿವೆ.

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗಪೂರ್ಣ	೩	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,,
೬	ದುರ್ಗಸಿಂಹನ ಪಂಚತಂತ್ರ ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,,
೧೨	ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇಮಮಂದಿರ	೮	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹವೈದ್ಯಕ	೮	,,
೧೭	ಮೋಹಿನೀ ನಿಂದಕರ ನಡಾವಳಿ	೮	,,
೪೦	ಕನ್ನಡ ಮಾತು ತಲೆಯೆತ್ತುವ ಬಗೆ	೧	,,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರಾಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಲಿದಾಸ	೬	,,
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೬	,,
೨೪	ಬೇಗಮ್ ಸಮರು	೬	,,
೨೫	ಅಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಅಂತರ್ಗರ ಶಿಕ್ಷಣಪದ್ಧತಿ	೪	,,
೩೨	ಶೇರಷಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	ಮೊಹರಮ್	೩	,,
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	,,
೩೮	ಸುಭದ್ರಾಹರಣ	೨	,,
೩೯	ಯಾರೂ ಅರಿಯದ ರಾಧೆ	೨	,,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ.
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	,,
೪೮	ಪಾರ್ವತಿ	೮	,,
೪೯	ದಾಕ್ಷಾಯಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧, ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಒದರಿಕೆ ಜುರುತ್ತು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ. ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಷ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ. ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ ೧—೪—೦

೪. ಶ್ರೀಹರ್ಷನೂ ಆತನ ನಾಟಕಗಳೂ [ನಾ. ವಿ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು. ೦—೧೦—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಚ್ಚುಗಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ

R. N. B. 1443.

[illegible]

ವಿಜಯ

[illegible]

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೧೨) ಧಾರವಾಡ ಶನಿವಾರ ತಾರೀಖು ೨೫ ನೇ ಜುಲೈ ೧೯೩೧ (ಸಂಚಿಕೆ ೩೭

The Asian Life Assurnance Co. Ltd

Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೨೫,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟಿದ್ದು ೧೦,೦೦,೦೦೦

ಜಿಂದಿಗಿ ೨೫,೦೦,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ರಾಯಬಾಗಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬಳಿಯ ಏಜಂಟರು—

ಹಾವೇರಿಯ ಚೀಫ ಏಜಂಟರು. ಶ್ರೀ. ಎಸ್. ಎಮ್. ದೊಡ್ಡವಾಡ ಮತ್ತು

ಶ್ರೀ. ಬಿ. ಟಿ. ಶಿರೋಳಕರ.

ಆನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೦೦ ರೂ. ಗಳನು ಕೊಡುವಂಥ **ಗೋಲ್ಡನ್ (ಸುವರ್ಣ) ಪಾಲಿಸಿಯನ್ನು** ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಇಪ್ಪತ್ತೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂಥಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ್ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ,

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಚಳ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ		ರೂ. ೧೨/೮-೦
೬	"	೭-೦-೦
೩	"	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ		೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ ವಿಜಯ ಧಾರವಾಡ

ವಿಜಯ.

ತಾರೀಖು ೨೫-೭-೧೯೩೧ನೇ ಇಸ್ವಿ

ರಾಣೇಬಿನ್ನೂರಲ್ಲಿ ಪಿಕೆಟಿಂಗ

ರಾಣೇಬಿನ್ನೂರಲ್ಲಿ ೧೪ ನೇ ತಾರೀಖಿನಿಂದ ಪಿಕೆಟಿಂಗ ಪ್ರಾರಂಭವಾಗಿದೆ. ಈ ಕೆಲಸವನ್ನು ಶ್ರೀ. ಹಳ್ಳಿಕೇರಿ ಗುದ್ಲೆಪ್ಪನವರು ಸ್ವಯಂಸೇವಕರ ಸಹಾಯದೊಂದಿಗೆ ಒಳ್ಳೇ ದಕ್ಷತೆಯಿಂದ ಮಾಡುತ್ತಿದ್ದಾರೆ. ರಾಣೇಬೆನ್ನೂರು ತಾಲೂಕಿನ ಸ್ಥಳವೆಂದು ಉಪೇಕ್ಷೆ ಮಾಡುವಂತಿಲ್ಲ. ಅದು ಜವಳೀ ವ್ಯಾಪಾರದ ಪಟ್ಟಣವೂ ಆಯಿತು. ಹುಬ್ಬಳ್ಳಿಯಲ್ಲಿ ಕೂಡ ಇದರಂಥ ಅಂಗಡಿಗಳಿರುವವು. ರಾಣೇಬೆನ್ನೂರಲ್ಲಿ ನೋಡಿ, ಧಾರವಾಡ ಅಂಗಡಿಗಳನ್ನು ನೋಡಿದರೆ - ಧಾರವಾಡದ ಅಂಗಡಿಗಳು ಗುಡಿಸಲವಂತೆ ಕಾಣಿಸುವವು ಬ್ಯಾಡಿಗಿ ಮತ್ತು ರಾಣೇಬೆನ್ನೂರಿನ ಎರಡೂ ವ್ಯಾಪಾರಗಳು ಧಾರವಾಡ ಹುಬ್ಬಳ್ಳಿಯನ್ನು ಸರಿಗಟ್ಟುವಂತಿರುತ್ತವೆ

ಇಲ್ಲಿ ಮುಖ್ಯವಾಗಿ ವ್ಯಾಪಾರ ಮಾಡುವಂಥವರು ಮಾರವಾಡಿಗಳೇ; ಮಾರವಾಡಿ ಇಲ್ಲದ ಊರಿಲ್ಲ, ಅದು ಮುಟ್ಟದ ಗಿಡವಿಲ್ಲ. ಮಾರವಾಡಿಗಳು ಪರದೇಶಿ ಅರಿವೆ ಬಿಟ್ಟರೆ - ಪಿಕೆಟಿಂಗದ ಅಗತ್ಯವೇ ಉಳಿಯುವದಿಲ್ಲ. ಹಿಂದಕ್ಕೆ ಮಾರವಾಡಿಗಳು ಕಾಂಗ್ರೆಸದ ಪ್ರತಿಜ್ಞಾ ಪತ್ರಿಕೆಯ ಮೇಲೆ ಸಹೀ ಮಾಡಿದರೂ ಅದು ಈಗ ಹೀರಗುಳ್ಳಿ ಗಾಳೀ ಸೊಡರ್ ಆಗಿರುತ್ತದೆ. ಕಾಂಗ್ರೆಸದವರು ಅತ್ಯಂತ ಶಾಂತ ರೀತಿಯಿಂದ ಈಗ ಪಿಕೆಟಿಂಗ ಮಾಡುತ್ತಿರುವದು ಕೂಡ ಇವರಿಗೆ ಸಹನವಾಗುವದಿಲ್ಲ. ಅಲ್ಲಿ ನಡೆಯುವದು ರೋಖ ವ್ಯವಹಾರ ಹಗಲು ವ್ಯಾಪಾರವಾಗದಿದ್ದರೆ - ರಾತ್ರಿಯಲ್ಲಿ ಗಂಟು ಕಟ್ಟಿ ಕಳ್ಳರಂತೆ ಜನಗನ್ನು ಜೊತೆಗೆ ಕಳಿಸುವರು ಕಳವಿನ ಮಾಲು ಎಲ್ಲೆಲ್ಲಿ ಘುತ್ತದೆಂದು ಪೋಲೀಸರು ಊರೂರು ತಿರುಗುವಂತೆ ಕಾಂಗ್ರೆಸ ಸ್ವಯಂಸೇವಕರಿಗೂ ತಿರಗಬೇಕಾಗಿದೆ. ರಾತ್ರಿ ಕದ್ದು ಮಾಲು ಹೋಗುತ್ತಿರುವದರಿಂದ, ರಾತ್ರಿ ಗಸ್ತಿಯೂ ನಡೆದಿದೆ. ಸ್ತ್ರೀಕಸದ [illegible]

ಮಾರವಾಡಿಗಳು ಹಿಂದಿನ ಕರಾರು ಮುರಿದದ್ದರಿಂದ, ಇವರಿಗೆ ಈ ಸಾರೆ ಒಂದು ಬಿಗಿಹಾಕಬೇಕೆಂದಿದ್ದಾರೆ. ಇವರು ಈ ನಂತರ ಪರದೇಶೀಯರ ಮತ್ತು ಬಹಿಷ್ಕೃತ ಗಿರಣಿಗಳ ಮಾಲನ್ನು ತರಿಸುವದಿಲ್ಲೆಂದು ಕರಾರ ಬರೆಕೊಡಬೇಕು. ಮತ್ತು ಈ ಕರಾರಿನ ಪ್ರಕಾರ ನಡೆಯುತ್ತೇವೆಂಬ ನಂಬಿಗೆಗಾಗಿ ಐನೂರು ರೂಪಾಯಿಗಳನ್ನು ತಾಬಾ ಕೊಡಬೇಕೆಂದು ಅಂದಿದ್ದಾರೆ ಇದು ಬ್ರಹ್ಮಾಸ್ತ್ರ ಪ್ರಯೋಗ ಮಾಡಿದಂಥ ಉಪಾಯವೇ ಸರಿ

ಪಿಕೆಟಿಂಗದ ದೆಸೆಯಿಂದ ಊರವರ ಸಂಪೂರ್ಣ ಸಹಾನುಭೂತಿ ಇದ್ದು, ಧಾರವಾಡದವಂತೆ ಸ್ವಯಂಸೇವಕರಿಗೆ ಕಾಳುಕಡಿಯ ಸಹಾಯ ಮಾಡುವರು. ನಾವಲಿಗರು ಅರ್ಧ ಚಾರ್ಜು ತಕ್ಕೊಂಡು ಕ್ಷೌರ ಮಾಡುವರು. ಡಾಕ್ಟರರು ಉಚಿತ ಔಷಧ ಕೊಡುವರು. ಸಿಂಪಿಗರು ಇವರ ಸಮವಸ್ತ್ರಗಳನ್ನು ಹಾಗೇ ಹೊಲಿದು ಕೊಡುವರು. ಬಡವರು ಸಹ ಅಳಲಿ ಭಕ್ತಿ ಅಪಾರ ಶಕ್ತಿ ಎನ್ನುವಂತೆ ದೇಶ ಕಾರ್ಯದಲ್ಲಿ ಸಹಾನುಭೂತಿಯುಳ್ಳವರಾಗಿರುವಾಗ ಶ್ರೀಮಂತರಾಗಿ ಬಂಗಾರದ ಹೊಗೆ ಹಾಯಿಸುವ ಮಾರವಾಡಿಗಳು ಲೋಭಿಗೆ ಆತುಕೊಂಡು ಮೋಜು ನೋಡುವದೆಷ್ಟು ಭೂಷಣವಲ್ಲ.

ಲಾರ್ಡ ಆಯರ್ವಿನ್ನಸಾಹೇಬರ ಮಹತ್ವದ ಭಾಷಣ

—(೦)—

ಲಾರ್ಡ ಆಯರ್ವಿನ್ನಸಾಹೇಬರು ಈ ವಾರದಲ್ಲಿ ಲಂಡನದಲ್ಲಿ ಎರಡು ಭಾಷಣಗಳನ್ನು ಮಾಡಿದರು. ಎರಡನೆಯ ಭಾಷಣವು ಮೂರು ಸಾವಿರ ಪಾದ್ರಿಗಳ ಸಭೆಯಲ್ಲಾಯಿತು. ಪ್ರೊಟೆಸ್ಟಂಟ ಮತದ ಜಗದ್ಗುರುವೆನಿಸಿದ ಕ್ಯಾಂಟರಬರಿಯ ಆರ್ಚಬಿಶಪ್ಪರೇ ಅಧ್ಯಕ್ಷರಾಗಿದ್ದರು. ಲಾರ್ಡ ಆಯರ್ವಿನ್ನ ಸಾಹೇಬರು ಸ್ವಧರ್ಮದಲ್ಲಿ ಶ್ರದ್ಧೆಯುಳ್ಳವರಿದ್ದು, ಪಾದ್ರಿಗಳು ಇವರನ್ನು ಗುರುಭಕ್ತಿ ಪರಾಯಣನೆಂದು ಸಂಬೋಧಿಸುತ್ತಾರೆ.

ವಿಕ್ರಮರಾಜನು ಪಟ್ಟಕ್ಕೆ ಕೂತಾಗ ಒಂದು ತರಹ; ಪಟ್ಟದಿಂದಿಳಿದ ಬಳಿಕ ಬೇರೊಂದು ತರಹವೆಂದು ಲಾರ್ಡ ಆಯರ್ವಿನ್ನಸಾಹೇಬರ ಈ ಭಾಷಣದಲ್ಲಿ ಸ್ಪಷ್ಟವಾಗಿ ಕಂಡು ಬಂದಿತು. "ಹಿಂದುಸ್ಥಾನ ಮತ್ತು ಇಂಗ್ಲಂಡದ ಅನ್ಯೋನ್ಯ ಸಂಬಂಧವುಂಟಾಗಿದ್ದು, ಹಿಂದೂ ಜನರ ಪ್ರೀತಿಗಾಗಿ ಮತ್ತು ಹಿಂದೂ ದೇಶದ ಹಿತಕ್ಕಾಗಿಯೇ ಸಂರಕ್ಷಣೋಪಾ [illegible] ಸಾಮ್ರಾಜ್ಯಾಂತರ್ಗತವಾದ [illegible] ದು. ಒರೇ ದಬ್ಬಾಳಿಕೆಯಿಂದ ಶಾಸನ ಭಾಗವಾಗಲಾರದು. ಹಿಂದೀ ಜನತೆಯು ವಿಶ್ವಾಸ ಪಡೆಯಬೇಕು. ನಾವು ಹಿತವನ್ನೇ ನೋಡುತ್ತೇವೆ ನಮ್ಮ ಸ್ವಾರ್ಥ ನೋಡುವದಿಲ್ಲೆಂಬ ಭಾವನೆಯನ್ನು ಹಿಂದೀ ಜನತೆಯಲ್ಲಿ ಮಾಡಿಕೊಡಬೇಕು. ಅಂದರೆ ಪರಸ್ಪರ ಪ್ರೀತಿಯಿಂದಲೇ ಹಿಂದುಸ್ಥಾನದಲ್ಲಿ ಇಂಗ್ಲಂಡದ ವ್ಯಾಪಾರ ನಡೆಯುವದು ಬಂದೂಕಿನ ಬೆದರಿಕೆ ಹಾಕಿ, ನಿಮ್ಮ ಒಟ್ಟಿಯನ್ನು ಹಿಂದುಸ್ಥಾನದಲ್ಲಿ ಮಾರಲಾರಿರಿ ಹಿಂದುಸ್ಥಾನದ ಭಾವೀ ರಾಜ್ಯಕಾರಭಾರವು ಹಿಂದುಸ್ಥಾನ ಮತ್ತು ಇಂಗ್ಲಂಡದ ನಡುವಿನ ಪರಸ್ಪರ ತಿಳುವಳಿಕೆ ಮತ್ತು ಒಪ್ಪಿಗೆಯಿಂದಲೇ ನಡೆಯಬೇಕೆಂದು" ಸಾಹೇಬರು ಹೇಳುವದು ಪೂರಾ ಯೋಗ್ಯವಾಗಿ ಇತ್ತದೆ. ಇಂಗ್ಲಿಷ ಸಂಬಂಧದಿಂದ ಹಿಂದುಸ್ಥಾನಕ್ಕೆ ಅಭವೇ ಹೊತ್ತಿರ, ನಾವಿಲ್ಲೆಂದು ಕಂಡು ಬಂದರೆ ಸಂಪೂರ್ಣ ಸ್ವಾತಂತ್ರ್ಯದ ರಣಘೋಷವನ್ನು ಹೊಡೆಯುರು.

ಲಾರ್ಡಸಾಹೇಬರು ಮಹಾತ್ಮರನ್ನು ಬಹಳವಾಗಿ ಪ್ರಶಂಸಿದ್ದಾರೆ ಹೆಸರಾದ ಸಾಮಾಜಿಕ ಸುಧಾರಕರೂ ದೇಶಭಕ್ತ ಷಿಗಳೂ [illegible] ಹೇಳುವರು. ಪಾದ್ರಿಗಳು ಇವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಇವರು ಮಹಾತ್ಮರನ್ನು ದೇವಾಂಶ ಸಂಭೂತರೆಂದು ಭಾವಿಸಿ, ತಮ್ಮ ಪ್ರಾರ್ಥನೆಯಲ್ಲಿ ಇವರ ಹೆಸರು ಸಹ ತಕ್ಕೊಂಡರು. ಮಹಾತ್ಮರು ಲಂಡನಕ್ಕೆ ಹೋದ ಬಳಿಕ, ಇವರನ್ನು ಕ್ರಿಸ್ತನ ಅಂಶವೆಂಬ ದೃಷ್ಟಿಯಿಂದ ನೋಡಿದರೆ ಎಷ್ಟು ಮಾತ್ರಕ್ಕೂ ಆಶ್ಚರ್ಯವೆನಿಸಲಾರದು.

ಉಳಿಗೆಯಿಂದ ಮಗನನ್ನು ಹೆಚ್ಚಿ, ಕೊಂದ ತಾಯಿಯು

—(೦)—

ವಿಜಾಪೂರ ಜಿಲ್ಹೆಯಲ್ಲಿರುವ ಬೆನಕನಹಳ್ಳಿಯೆಂಬ ಗ್ರಾಮದಲ್ಲಿರುವ ಒಬ್ಬಳು ತನ್ನ ಮಗನನ್ನು ಉಳಿಗೆಯಿಂದ ಕೊಯ್ದು ಕೊಂದಳೆಂಬ ಆರೋಪದ ವಿಚಾರಣೆಯು ಅಲ್ಲಿಯ ಸೆಶನದಲ್ಲಿ ನಡೆಯಿತು. ಜಡ್ಜರೂ, ಅಸೇಸರರೂ ಇವಳು ಹುಚ್ಚಿಯೆಂದು ಅಭಿಪ್ರಾಯಪಟ್ಟರು. ಅಲ್ಲಿಯ ತನಕ ಇವಳ ಆತ್ಮಸಂತೋಷದಿಂದ ಮತ್ತು ಅತ್ಯಲ್ಪ [illegible]ಯಿಂದಲೇ ಹೊಟ್ಟೆಯ ಮಗನನ್ನು ಚಿಕ್ಕಾಳೆನಂತೆ ಕೊಯ್ದು ತೆಗೆದಳೆಂದು ಪೋಲಿಸರ ಗ್ರಹಿಕೆಯಾಗಿತ್ತೆಂದು ಯಾರಾದರೂ ಹೇಳುವಂತಾಗುತ್ತದೆ.

ಪುಣೆಯಲ್ಲಿ ಹಾರಿದ ಗುಂಡಿನ ವಿಶೇಷ ಸಂಗತಿಗಳು

—(೦)—

ಎಲ್ಲಾ ವಿದ್ಯಾರ್ಥಿಗಳು ಲಾಯಬ್ರರಿಯ ಹಾಲಿನಲ್ಲಿ ಕೂತಾಗ, ಗೋಗಟೆನು, ಥಕ್ಕನೆ ಎದ್ದು ಸಾಹೇಬರ ಮೇಲೆ ಒಂದರ ಹಿಂದೊಂದು ಗುಂಡು ಹಾಕಿದನು. ಮೊದಲನೆಯ ಗುಂಡು, ಸಾಹೇಬರ ಎದೆಯ ಮೇಲಿನ ಕಿಸೆಯ ನೋಟ ಪುಸ್ತಕದಲ್ಲಿ ಕೂತಿತು. ಎರಡನೆಯ ಗುಂಡು ಅಂಗಿಯ ತುದಿಯಲ್ಲಿ ತೂತು ಮಾಡಿ ಹೋಯಿತು ಆದರೆ ಗುಂಡು ಮಾತ್ರ ಸಿಕ್ಕಿಲ್ಲ.

ಗೋಗಟೆನನ್ನು ಹಿಡಿದ ಬಳಿಕ ಆತನ ಕಿಸೆಯಲ್ಲಿ ಮತ್ತೊಂದು ರಿವಾಲ್ವರ ಮತ್ತು ಐದು ಕಾಡತೂಸುಗಳು ಸಿಕ್ಕವು. ಸ್ವತಃ ಸಾಹೇಬರು ಈತನಿಗೆ ಇಂಥ ಮೂರ್ಖತನವೇಕೆ ಮಾಡಿದೆಂದು ಪ್ರಶ್ನೆ ಮಾಡಿದರು. ಆದರೆ ಆತನು ಆಗ ಉತ್ತರ ಕೊಡಲಿಲ್ಲ.

ಸಾಹೇಬರು ಮೋಟಾರದಲ್ಲಿ ಕೂತು ಹೋಗುವಾಗ ಕೆಲವರು ಶೇಮ, ಶೇಮ-ವೆಂದು ಕೂಗಿದರು. ಒಂದು ಕಲ್ಲು ಮೋಟಾರದ ಕನ್ನಡಿಗೆ ಒಡೆದು, ಕನ್ನಡಿಯು ಪುಡಿಯಾಯಿತು. ಹತ್ತರವೇ ಕೂತ ಲೇಡಿ ಹಾಟ್ಸನ್ನ ದೊರೆಸಾನಿಯವರಿಗೆ ಯಾವ ಅಪಾಯವಾಗಲಿಲ್ಲ. ವಂದೇ ಮಾತರಮ ವೆಂದು ಕೂಗಿದರು ನಂದೇ.

ಮರಾಟಿ ತರುಣರೇ ಏಳಿರಿ? ನನ್ನನ್ನು ಹಿಂಬಾಲಿಸಿರಿ. ಸೊಲ್ಲಾಪೂರದ ಸೇಡು ತೀರಿಸಿಕೊಳ್ಳುವ ಇದು ಮೊದಲನೇ ಎಚ್ಚರಿಕೆ ಎಂದು ಗೋಗಟೆನು ತನ್ನನ್ನು ಕಾಲೇಜದಿಂದ ಹಿಡಕೊಂಡು ಹೋಗುವಾಗ ಕೂಗುತ್ತಾ ನಡೆದನು.

ಸೋಲ್ಲಾಪುರದ ಲಷ್ಕರೀ ಕಾಯದೇ ಮತ್ತು ಸಾಹೇಬರ ಆಕ್ಟಿಂಗ ನೇಮಣೂಕೆಯ ನಿಷೇಧ ಮಾಡುವದಕ್ಕಾಗಿ ಗುಂಡು ಹಾರಿಸಿದೆನೆಂದು ಗೋಗಟೆನು ಹೇಳುತ್ತಾನೆ.

ಗೋಗಟೇನ ಕೋಣೆಯಲ್ಲಿ ಝಡತಿ ಮಾಡಿದಾಗ ಹಾರಿ ಬರೇಣಾದಂಥ ಐದು ಕಾಡತೂಸುಗಳು ಹೊರಟವು.

ಪಂಜಾಬ ಮೇಲಿನಲ್ಲಿ ಗೋಳೀಬಾರು

ಇಬ್ಬರು ಲಷ್ಕರೀ ಕಾಮದಾರರ ಅಂತ್ಯಾವಸ್ಥೆ

—(೦)—

ಮುಂಬಯಿಂದ ಪಂಜಾಬ ಮೇಲ ಬಂಡಿಯು ಖಾಂಡವಾ ಸ್ಟೇಶನದಿಂದ ರಾತ್ರಿ ೨|| ಗಂಟೆಯ ಸಮಯದಲ್ಲಿ ಹೊರಬೀಳುವಾಗ, ಇಬ್ಬರು ಬಂಡಿಹತ್ತಿ, ಒಂದನೇ ವರ್ಗದ ಡಬ್ಬಿಯಲ್ಲಿ ಮಲಗಿದ್ದ ದಂಡಿನ ಖಾತೆಯ ಇಬ್ಬರು ಕಾಮದಾರರ ಮೇಲೆ ಗುಂಡು ಹಾಕಿದರು ಗುಂಡುಗಳಿಂದ ಸಾಹೇಬರ ನಾಯಿಯು ಸತ್ತು ಬಿತ್ತು. ಒಬ್ಬ ಸಾಹೇಬರು ಮರಣೋನ್ಮುಖರಾಗಿದ್ದು ಇನ್ನೊಬ್ಬರು ಭಯಂಕರ ಘಾಯಹೊಂದಿದ್ದಾರೆ.

ಗುಂಡು ಹಾಕಿದವರು ಮುಂದಿನ ಸ್ಟೇಶನ ಬರುವದರೊಳಗಾಗಿ ಹಾರಿ, ಅಡವೀ ಬಿದ್ದು ಅದೃಶ್ಯರಾಗಿರಬೇಕೆಂದು ಪೋಲೀಸರ ತರ್ಕವುಂಟು,

ಸಿಮುಲಾದ ಸುದ್ದಿಗಳು

—(೦)—

ಮಹಾತ್ಮರು ಸಿಮುಲಾದಲ್ಲಿ ಲಾರ್ಡ ಆಯರ್ವಿನ್ನಸಾಹೇಬರ ಕೂಡ ಕೊನೆಯ ಭಾಷಣ ಮಾಡಿದರು, ಭಾಷಣ ನಡೆದಾಗ ಅವರ ಪ್ರಾರ್ಥನೆಯ ಹಾಗು ಭೋಜನದ ಸಮಯವಾಯಿತು. ಇವೆರಡನ್ನೂ ಇಲ್ಲೇ ತೀರಿಸಿಕೊಂಡರು. ಆದರೂ ಮಾತು ಮುಗಿಯಲಿಲ್ಲ. ಈ ನಂತರ ಪತ್ರ ವ್ಯವಹಾರದಿಂದಲೇ ಮಾತಿನ ನಿಷ್ಕರ್ಷೆ ಮಾಡಿಕೊಳ್ಳುವರು.

ಮಹಾತ್ಮರು ಇಂಗ್ಲಂಡಕ್ಕೆ ಹೋದದ್ದಾದರೆ ಲಂಡನದಲ್ಲಿರುವ ಕಿಂಗಸ್ಲೆ ಹಾಲಿನಲ್ಲಿಳಿಯುವರು. ಚಳಿಗಾಲದಲ್ಲಿ ಇಂಗ್ಲಂಡ ಮತ್ತು ಸ್ವಿಟ್ಝರ್ಲಂಡದ ಹವೆಯು ಹೇಗಿರುತ್ತದೆಂದು ಮಹಾತ್ಮರು ಪಂಡಿತ ಜವಾಹರಲಾಲರ ಪತ್ನಿಯವರಿಂದ ಅವಶ್ಯವಾದ ಸಂಗತಿಗಳನ್ನು ಕೇಳಿಕೊಂಡರು.

ಡಾಕ್ಟರ ಅನ್ಸಾರಿಯವರು ಮಹಾತ್ಮರು ಹೋಗುವ ಹಡಗದಿಂದಲೇ ವಿಲಾಯತಿಗೆ ಪ್ರಯಾಣ ಬೆಳೆಸುವರು.

ನಾಳಿನ ಟಪಿ.

ಇಂದು ಮುದ್ರಾಲಯಕ್ಕೆ ಪ್ರಥಮೈಕಾದಶಿಯ ರಜೆಯಿರುವದರಿಂದ ನಾಳಿನ ನಿಕ್ಕದ ವಿಜಯವು ಪ್ರಕಟಿಸಲ್ಪಡಲಾರದು.

ಶಿವಮೊಗ್ಗೆಯ ಡೆ- ಕಮೀಶನರರ ಉದ್ದಾಮತನ

ಡೆ- ಕಮೀಶನರರು ತೀರ್ಥಹಳ್ಳಿ ತಾಲೂಕಿನ ಅಮಲದಾರರಿಗೆ ತಾರೀಖು ೫-೭ ರ ಸುಮಾರಕ್ಕೆ ಒಂದು ಹುಕ್ಕುಂ ಕಳಿಸಿ ಅದರಲ್ಲಿ ಬಾಕಿ ಬಾಗಾಯಿತ ಪೂರಾ ಮತ್ತು ತರಿಯ ಅರ್ಧ ಕಂದಾಯ ವಸೂಲ ಮಾಡಿರಿ. ಇನ್ನುಳಿದ ಅರ್ಧ ಕಂದಾಯ ಸೂಟು ಬಿಡಲು ನಾನು ನಿಮ್ಮಲ್ಲಿಗೆ ೧೫ ನೇ ತಾರೀಖಿನೊಳಗಾಗಿ ಒಂದು ಯಾದಿ ತಿಳಿಸುವೆನೆಂದು ಬರೆದಿದ್ದರು. ಆ ಪ್ರಕಾರ ಅಮಲದಾರರು ಯಾವತ್ತು ಹಳ್ಳಿಗಳಿಗೆ ತಿಳಿಸಿದರು. ರೈತರೆಲ್ಲರು ತರಿ ಮಟ್ಟಿಗೆ ಅರ್ಧ ಕಂದಾಯ ಸೂಟು ಬಿಡುವರೆಂದು ತಿಳಿದಿದ್ದರು. ಅದರಂತೆ ಅಮಲ್ದಾರರು ಸಹ ತರಿ ಅರ್ಧ ರೆಮಿಶನ್ ಆಗುವದೆಂದು ರೈತರಿಗೆ ಸಾರಿಹೇಳುತ್ತಿದ್ದರು. ಈ ಕೃತ್ರಿಮತನದ ಹುಳುಕನ್ನು ಸಾಹೇಬರು ರೈತರ ಗೋಣು ಮುರಿಯಲಿಕ್ಕೆ ಕಟ್ಟಿದ್ದರೆಂದು ಹೇಳಲು ಏನೂ ಅಡ್ಡಿ ಇಲ್ಲ.

ಯಾಕಂದರೆ ಸಾಹೇಬರು ೧೩ ನೇ ತಾರೀಖಿಗೆ ರೈತರ ಸುಖದುಃಖ ವಿಚಾರಿಸಿ ರೆಮಿಶನ್ ಕೊಡುತ್ತೇನೆ ೩೩ ಹಳ್ಳಿಗಳ ಗ್ರಾಮಸ್ಥರೆಲ್ಲರೂ ಆ ದಿನ ತಪ್ಪದೇ ತೀರ್ಥಹಳ್ಳಿಗೆ ಹಾಜರ ಇರಬೇಕೆಂದು ಯಾವತ್ತು ಹಳ್ಳಿಗಳಿಗೆ ತಾಕೀದಿ ಕಳಿಸಿದರು. ಆ ಪ್ರಕಾರ ಸುಮಾರು ೪೦೦-೫೦೦ ಜನರು ಯಾವತ್ತು ಹಳ್ಳಿಗಳಿಂದ ೮-೧೦ ಮೈಲು ದೂರದಿಂದ ಸಾಹೇಬರು ರೈತರ ಸುಖದುಃಖ ವಿಚಾರಿಸಿ ರೆಮಿಶನ್ ಕೊಡಬಹುದೆಂದು ಮಳೆಯನ್ನು ಲೆಕ್ಕಿಸದೆ ಕಷ್ಟವನ್ನು ಸಹಿಸುತ್ತ ಆನಂದದಿಂದ ಬಂದರು. ಆದರೆ ಮಾಡುವದೇನು? ಒಂದರಿಗೆ ಸೂಚನೆಯಿಲ್ಲವೆನ್ನುವಂತೆ ಸಾಹೇಬರು ಆ ದಿನ ಬಾರದೇ ಇದ್ದ ಮೂಲಕ ರೈತ ಬಾಂಧವರೆಲ್ಲರೂ, ನಿರಾಶರಾಗಿ ಮರಳಿ ತಮ್ಮ ತಮ್ಮ ಊರುಗಳಿಗೆ ಹೊರಟು ಹೋದರು. ಸಾಹೇಬರು ೧೩ ನೇ ತಾರೀಖಿಗೆ ಬರದೆ ೧೫ ನೇ ತಾರೀಖಿಗೆ ಬಂದು ತೀರ್ಥಹಳ್ಳಿಯ ಸಮೀಪದಲ್ಲಿರುವ ಕೂಸುಗೂರ ಮತ್ತು ಹೀರೆಬೈಲೂರ ಗ್ರಾಮಗಳಿಗೆ ಹೋಗಿ ರೈತರ ಕಷ್ಟ ನಷ್ಟಗಳನ್ನು ವಿಚಾರಿಸದೆ" ನಾನು ನಿಮ್ಮ ಗ್ರಾಮಗಳಿಗೆ ಯಾತಕ್ಕೋಸ್ಕರ ಬಂದಿರುವೆನೆಂದು ತಿಳಿದಿರುವಿರಿ ನೀವು ಕಂದಾಯ ಕೊಡದಿದ್ದಲ್ಲಿ ನಿಮ್ಮ ಹೊಲಮನೆ ಹರಾಜ ಮಾಡಿ, ಜಂದಿಗಿ ಜಪ್ತಮಾಡಿ ನಿಮ್ಮ ದನಕರಗಳನ್ನು ಮಾರಿಸಿ ನಿಮ್ಮಿಂದ ಹಣಾ ತೆಗೆದುಕೊಂಡು ಹೋಗದೇ ಇದ್ದಲ್ಲಿ ನಾನು ಸಾಹೇಬನೇ ಅಲ್ಲ, ನಾನು ಮ್ಯೆ

ಸ್ಪೇನದಲ್ಲಿ ಪಾದ್ರಿಗಳಿಗೆ ಬಂದ ಸಂಕ್ರಾಂತಿಯು

—(೦)—

ಸ್ಪೇನ ದೇಶದಲ್ಲಿ ಪಾದ್ರಿಗಳಿಗೆ ಪೂರಾ ಸಂಕ್ರಾಂತಿ ಬಂತು. ಇವರಲ್ಲಿ ಹಳ್ಳಿಯ ಭಟ್ಟರಿಗೆ ಜೀವನದ ವಟ್ಟಿಗೆ ಸಂಬಳ ಕೊಟ್ಟು ದೊಡ್ಡಾಚಾರ್ಯರಾದ ಬಿಶಪ ಮೊದಲಾದವರ ಸಂಬಳ ಬಂದು ಮಾಡುವರು. ಮತ್ತು ಪಾದ್ರಿಸಾಹೇಬರು ಪರಲೋಕವಾಸಿಯಾದಂತೆ, ಅವರ ಸ್ಥಳಗಳನ್ನು ತುಂಬುವರನ್ನು ರಹಿತ ಪಡಿಸುವರು. ರಾಜನ ಕಾಲದಲ್ಲಿ ಪಾದ್ರಿ ಜಾತಿಗೆ ಮೂವತ್ತು ಲಕ್ಷದ ಗ್ರ್ಯಾಂಟು ಕೊಡುತ್ತಿದ್ದರು ಇದೆಲ್ಲ ಉಳಿಯುವದು. ಪ್ರತಿಯೊಂದು ದೇವಾಲಯದ ಭಟ್ಟರು ದೇವಾಲಯದ ಆಸ್ತಿಯ ಲೆಖ್ಖವನ್ನು ಸರಿಯಾಗಿ ಕೊಡಬೇಕು ಇಲ್ಲವಾದರೆ - ಅದನ್ನೆಲ್ಲ ಜಪ್ತ ಮಾಡುವಂತೆ ಪ್ರಜಾಸತ್ತಾತ್ಮಕ ರಾಜ್ಯದವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಪೋಲಂಡದಲ್ಲಿ ಹಿಂದುಸ್ಥಾನದ ಸತ್ಯಾಗ್ರಹ

—(೦)—

ಪೋಲಂಡದ ಮುಖ್ಯ ಪಟ್ಟಣವಾದ ವಾರಸಾದಲ್ಲಿರುವ ಹಂಚಿನ ಕಾರಖಾನೆಗಳ ಕೂಲಿಕಾರರು ಸಂಪು ಮಾಡಿದರು. ಸರಕಾರದವರು ತಮ್ಮ ಜನರಿಂದ ಇವರನ್ನು ಉಗೆಬಂಡಿಯಲ್ಲಿ ಹೇರಿಸಿದರು. ಇವು ಸ್ಟೇಶನ ಬಿಟ್ಟು ಹೋಗಬಾರದೆಂದು ಕೂಲಿಕಾರರು ಸತ್ಯಾಗ್ರಹ ಮಾಡಿ ಹಳಿಯ ಮೇಲೆ ಮಲಗಿದರು. ಪೋಲಿಸರು ಬಂದೂಕಿನ ಸಂಗೀನು ಚುಚ್ಚಿ ಇವರನ್ನು ಚದರಿಸಿ ಸ್ಥಳ ಬೈಲು ಮಾಡಿದರು ಕೊಲ್ಲರಿ ಏಳುವದಿಲ್ಲೆಂದು ಹೇಳುವಷ್ಟು ಆತ್ಮನಿಶ್ಚಯವಿದ್ದ ಹೊರತು ಸತ್ಯಾಗ್ರಹ ಮಾಡಲೇಬಾರದು.

ಗೋಗಟೆನನ್ನು ಹೈದರಾಬಾದಿಗೆ ಒಯ್ದರು.

—)((೦)—)(—

ಗೋಗಟೆನ ಒಬ್ಬ ಸಹೋದರನು ಸಿಂಧ ಹೈದರಾಬಾದಿನಲ್ಲಿ ವಕೀಲಿ ಮಾಡುತ್ತಿದ್ದಾನೆ. ಗೋಗಟೇನನ್ನು ಅಲ್ಲಿಗೆ ಒಯ್ದಿದ್ದಾರೆ, ಅಲ್ಲಿ ಆತನ ಅಣ್ಣನಿಂದ ಕೊಲೆಯ ಸಂಬಂಧವಾಗಿ ಹೆಚ್ಚು ಸಂಗತಿಗಳು ತಿಳಿಯುವವೆಂದು ಪೋಲಿಸರ ಊಹೆಯಾಗಿರುತ್ತದೆ.

ಗೋಗಟೆನು ಕಾಲೇಜದಲ್ಲಿ ಒಬ್ಬ ವಿದ್ಯಾರ್ಥಿಯ ಹತ್ತರ ಒಂದು ತೊಗಲಿನ ಪಾಕೀಟು ಕೊಟ್ಟಿದ್ದನು ಪೋಲಿಸರು ಅದನ್ನು ತೆರೆಯದೆ, ಕಾಲೇಜದ ಪ್ರಿನ್ಸಿಪಾಲರ ಎದುರಿಗೆ ಅದಕ್ಕೆ ಮೊಹರು ಮಾಡಿ ತಕ್ಕೊಂಡು ಹೋದರು.

ವಿಜಯ ಪುಸ್ತಕಾಲಯ ಧಾರವಾಡ

ವಿಜಯ ಪುಸ್ತಕಾಲಯದಲ್ಲಿ ಮಾರಲಿಕ್ಕೆ ದೊರೆಯುವ ಪುಸ್ತಕಗಳ ಪಟ್ಟಿಯು.

" ಈ ಕೆಳಗೆ ಬರೆದ ೪೦ ಪುಸ್ತಕಗಳು ಮುಂಬಯಿ ವಿದ್ಯಾಖಾತೆಯವರಿಂದ ವಾಚನಾಲಯಗಳನ್ನು ಕೆಲವು ಪಠ್ಯಪುಸ್ತಕಗಳಿಗಾಗಿಯೂ ಮಂಜೂರಾಗಿವೆ.

೧	ಶಬ್ದಾನುಶಾಸನ	೪	ರೂ.
೨	ರಘುವಂಶ ೧ ರಿಂದ ೧೯ ಸ್ವರ್ಗ ಪೂರ್ಣ	೨	,,
೩	ಶ್ರೀ ವಿದ್ಯಾರಣ್ಯಸ್ವಾಮಿಗಳ ಚರಿತ್ರೆ	೧	,,
೪	ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಚರಿತ್ರೆ	೧	,,
೫	ರಾಮಾಶ್ವಮೇಧಸಾರ ಸಂಗ್ರಹ	೧	,
೬	ದುರ್ಗಸಿಂಹನ ಪಂಚತಂತ್ರ ಸಾರ	೧	,,
೭	ಉತ್ತರರಾಮ ಚರಿತ್ರೆ	೧೨	ಆಣೆ
೮	ರಾಣಾರಾಜಸಿಂಹ	೧೨	,,
೯	ಶ್ರೇಯಃಸಾಧನ	೧೨	,,
೧೦	ಪಾರ್ವತೀ ಪರಿಣಯ ನಾಟಕ	೧೨	,,
೧೧	ಬಾಣಕಾದಂಬರಿ	೧೦	,,
೧೨	ಸತ್ಕಥಾ ಕುಸುಮ ಮಂಜರಿ (IV)	೧೦	,,
೧೩	ಪ್ರೇಮಮಂದಿರ	೮	,,
೧೪	ಯಯಾತಿ ನಾಟಕ	೮	,,
೧೫	ಮಾನಸಶಾಸ್ತ್ರ	೮	,,
೧೬	ಗೃಹವೈದ್ಯಕ	೮	,,
೧೭	ಮೋಹಿನೀ ನಿಂದಕರ ಸಟಾವಳಿ	೮	,,
೪೦	ಕನ್ನಡ ಮಾತು ತಲೆಯೆತ್ತುವ ಬಗೆ	೧	,
೪೧	ರಾಮಾಯಣ ಕಥಾಮೃತ ಸಾರ	೧	,,
೪೨	ಕರ್ನಾಟಕ ಕವಿಚರಿತ್ರೆ ,, ಭಾಗ ೧	೪	ರೂ.
೪೩	,, ಭಾಗ ೨	೫	,,
೪೪	,, ಭಾಗ ೩	೪	,,
೧೮	ಸತ್ಯರ ಜಾ ಪೂರ್ವದೇಶದ ಯಾತ್ರೆ ಭಾಗ ೨	೮	ಆಣೆ
೧೯	ಕಾಲಿದಾಸ	೬	.
೨೦	ಕರ್ನಾಟಕ ಸ್ವಪ್ನವಾಸವದತ್ತ	೬	,,
೨೧	ಅಭಿಷೇಕ ನಾಟಕ	೬	,,
೨೨	ಕಥಾಸರಿತ್ಸಾಗರ	೬	,,
೨೩	ಹಜರತ ಮಹಮದ ಪೈಗಂಬರರ ಚರಿತ್ರೆ	೬	,,
೨೪	ಬೇಗಮ್ ಸಮರು	೬	,,
೨೫	ಆಮೇರಿಕದೊಳಗಿನ ಬಡ ವಿದ್ಯಾರ್ಥಿಗಳು	೫	,,
೨೬	ಭೀಷ್ಮಾಚಾರ್ಯ	೫	,,
೨೭	ವೇಣೀಬಂಧನ	೪	,,
೨೮	ಪಂಡಿತ ರಾಜ	೪	,,
೨೯	ಹರೀಶನ ಪ್ರೇಮ	೪	,,
೩೦	ಸತಿಯೂ ಸುನೀತಿಯೂ	೪	,,
೩೧	ಆರ್ಯರ ಶಿಕ್ಷಣಪದ್ಧತಿ	೪	,
೩೨	ಶೇಷಹ	೪	,,
೩೩	ಸತ್ಕಥಾ ಕುಸುಮಮಂಜರಿ ಭಾಗ ೩	೪	,,
೩೪	[illegible]	೩	,,
೩೫	ಕವಿಕಾರ್ಯ ಪ್ರಶಂಸೆ	೩	,,
೩೬	ಕೌಸಲ್ಯಾಪರಿಣಯ	೩	,,
೩೭	ಇಸೋಪನ ಚರಿತ್ರೆ	೩	,,
೩೮	ಸುಭದ್ರಾಹರಣ	೨	,
೩೯	ಯಾರೂ ಅರಿಯದ ರಾಧೆ	೨	,,
೪೫	ಮಹಾರಾಣಿ ಲಕ್ಷ್ಮೀಬಾಯಿ	೧	ರೂ
೪೬	ಸಾವಿತ್ರೀ ಸತ್ಯವಾನ	೧೨	ಆಣೆ
೪೭	ಪದ್ಮಿನಿ	೧೨	
೪೮	ಪಾರ್ವತಿ	೮	,,
೪೯	ದಾಕ್ಷಾಯಿಣಿ	೮	,,
೫೦	ಕವಿತಾ ಕುಸುಮಮಂಜರಿ ಭಾಗ ೧. ೨	೧೦	,,

ಮಾರಾಟಕ್ಕೆ ಸಿದ್ಧವಾಗಿವೆ.

೧. ನರಗುಂದ ಬಂಡಾಯ [ಪಂಡಿತ ಭೀ. ಜಿ. ಹುಲಿಕವಿ, ಎಸ್. ಟೀ. ಸೀ.] ಜನರಿಗೆ ಓದಲಿಕ್ಕೆ ಹುರುಪು ಕೊಡುವ ವಿಷಯದಿಂದ ತುಂಬಿತುಳುಕುತ್ತಲಿದೆ. ಒಂದೇ ರೂಪಾಯಿ.

೨. ನಿಜವಾದ ವೀರ ಅಥವಾ ಜಗಮಲ್ಲ [ಶ್ರೀ. ಗು. ಘ. ಹಳಕಟ್ಟಿ,] ನಾಲ್ವತ್ತು ವರ್ಷಗಳಿಂದ ಸಾಹಿತ್ಯಸೇವೆಯನ್ನು ಮಾಡುತ್ತಲಿರುವ ಅನುಭವಿಕ ಲೇಖಕರು ಬರೆದ ಹೊಸ ಕಾದಂಬರಿ. ಒಂದೇ ರೂಪಾಯಿ

೩. ಜೈನಧರ್ಮ ಪರಿಭಾಷೆ. [ಪಂಡಿತ ಮ. ಪ್ರ. ಪೂಜಾರ,] ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಾಮಾನ್ಯ ವಾಚಕರಿಗೂ ಉಪಯುಕ್ತವಾಗಿರುವ ಪಂಡಿತ ಪೂಜಾರರು ಬರೆದ ಅಪ್ರತಿಮ ಗ್ರಂಥ ೧—೪—೦

೪. ಶ್ರೀಹರ್ಷನೂ ಆತನ ನಾಟಕಗಳೂ [ನಾ. ಪೆ. ಕುರಡಿ,] ಕುರಡಿಯವರ ಗ್ರಂಥಗಳು ಯಾವಾಗಲೂ ಉತ್ತಮ ವರ್ಗಕ್ಕೆ ಸೇರಿದುವು. ೦—೧೦—೦

ಇವಲ್ಲದೆ ನಮ್ಮಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ, ಕಥೆ ಕಾದಂಬರಿಗಳೂ ಮಾರಲಿಕ್ಕೆ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ ಕೊಡುವೆವು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443.

ವಿಜಯ

[illegible]

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೩೨) ಧಾರವಾಡ ಸೋಮವಾರ ತಾರೀಖು ೨೭ ನೇ ಜುಲೈ ೧೯೩೧ (ಸಂಚಿಕೆ ೧೭೦

The Asian Life Assurnance Co. Ltd Bombay. Branch office Hubli

ಏಶಿಯನ್ ಅಶ್ಯೂರನ್ಸ ಕಂಪನಿ ಮುಂಬಯಿ

(ಸ್ಥಾಪನೆ ೧೯೧೦; ಹೆಡ್‌ಆಫೀಸ ಮುಂಬಯಿ)

ಇದು ಶುದ್ಧ ಸ್ವದೇಶಿ ಕಂಪನಿಯು. ಪರದೇಶದ ಕಂಪನಿಗಳಿಗೆ ಮರುಳಾಗ ಬೇಡಿರಿ. ಈ ಕಂಪನಿಯ

ವಿಮೆಯ ರಕಮು ರೂ. ೧,೩೪,೦೦೦,೦೦ ಕಂತದ ಉತ್ಪನ್ನ ರೂ. ೭೦೦,೦೦೦

ವಿಮೆಯ ಹಣ ತಿರಿಗಿ ಕೊಟ್ಟದ್ದು ೧೦,೦೦,೦೦೦

ಜಿಂದಿಗಿ ೩೩,೦೮,೦೦೦

ಕರ್ನಾಟಕದಲ್ಲೆಲ್ಲ ಏಜಂಟರು ಬೇಕು. ಇಂದೇ ಪತ್ರಬರೆಯಿರಿ.

ಮೆಸರ್ಸ ಟೆಂಬೂಳಕರ ಮತ್ತು ಕುಲಕರ್ಣಿ. ಧಾರವಾಡದ ಏಜಂಟರು

ಕೆ. ವ್ಹಿ. ಹುಲಸೋಗಿ, ಬಿ. ಎ. ಕರ್ನಾಟಕದ ಬ್ರಾಂಚ ಮ್ಯಾನೇಜರ

ಬಿ. ಎಚ್. ಪಾಟೀಲ ಹುಬಳಿಯ ಏಜಂಟರು-

ಹಾವೇರಿಯ ಚೀಫ ಏಜಂಟರು. ಶ್ರೀ. ಎನ್. ಎಮ್. ದೊಡ್ಡವಾಡ ವ.ಶಾ.

ಶ್ರೀ. ಬಿ. ಟಿ. ಶಿರೋಳಕರ.

ಆನುವು ಆಪತ್ತು ಬಂದಾಗ, ನಿಮ್ಮ ಹೆಂಡರುಮಕ್ಕಳು
ಸೌಖ್ಯದಿಂದಿರುವಂತೆ ಮಾಡುವ

ಒಂದೇ ಒಂದು ಉಪಾಯ

ಒಂದೇ ಸಾವಿರ ರೂಪಾಯಿಯ ಜೀವವಿಮೆ ಇಳಿಸಿದರೆ ೫೭೮೦ ರೂ. ಗಳನು ಕೊಡುವಂಥ **ಗೋಲ್ಡನ್ (ಸುವರ್ಣ) ಪಾಲಿಸಿಯನ್ನು** ತೆಗೆದುಕೊಳ್ಳಿರಿ. ಕಂತುಗಳ ಹಣ ತೀರ ಸ್ವಲ್ಪ. ಕಂತುಗಳಾದರೂ ಅಷ್ಟಷ್ಟೇ ಮಾತ್ರ. ಈ ಪಾಲಿಸಿಯ ಬಗ್ಗೆ ಕೂಡಲೆ ಪತ್ರ ವ್ಯವಹಾರ ಮಾಡಿರಿ, ಅಥವಾ ಸ್ಥಾನಿಕ ಏಜಂಟರನ್ನು ಕೇಳಿಕೊಳ್ಳಿರಿ. ಇಂತಹ ಪಾಲಿಸಿಯನ್ನು ಕೊಡುವ ಕಂಪನಿಯೆಂದರೆ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ-ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಿಯು ಎಂಟು ಲಕ್ಷದಮೇಲುಂಟು. ಚಕ್ರ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಜಿ. ಬಶಾಕಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೭-೦-೦
೩ ,,	೪-೮-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಿರಿ.

ಮ್ಯಾ. ವಿಜಯ ಧಾರವಾಡ

ವಿಜಯ.

ತಾರೀಖು ೨೭-೭-೧೯೩೧ನೇ ಇಸ್ವಿ

ಮುಂಬಯಿ ಇಲಾಖೆಯ ವೆಚ್ಚ ಕಡಿಮೆ ಮಾಡುವ ಕಮೀಟಿಯ ವರದಿ

—(೦)—

ಮುಂಬಯಿ ಸರಕಾರದವರು ಯಾವ ಯಾವ ಖಾತೆಯಲ್ಲಿ ಎಷ್ಟೆಷ್ಟು ರಕಮು ಕಡಿಮೆ ಮಾಡಬಹುದೆಂಬುದನ್ನು ಕಂಡು ಹಿಡಿಯಲು, ಏಳು ಜನರದೊಂದು ಕಮೀಟಿಯನ್ನು ಹೋದ ಮಾರ್ಚ ತಿಂಗಳಲ್ಲಿ ನೇಮಿಸಿದ್ದರಷ್ಟೆ; ಸರಕಾರದ ವಾರ್ಷಿಕ ಉತ್ಪನ್ನ ೧೪ ಕೋಟಿ ಕೊರತೆ ಬಂದದ್ದು ೬೧ ಲಕ್ಷ, ಕಮೀಟಿಯವರು ಎಲ್ಲಾ ಖಾತೆಗಳ ಕಾಗದಪತ್ರಗಳನ್ನೂ ಹೇ ಪುಸ್ತಕಗಳನ್ನೂ ತಿರುವಿ ಹಾಕಿ, ಉಳಿತಾಯ ತೋರಿಸಿದ್ದು ಒಂದೇ ೨೮ ಲಕ್ಷ. ಅವುಗಳ ವಿವರಣವು ಮುಂದೆ ಕೊಟ್ಟಂತಿರುತ್ತದೆ.

ಖಾತೆ	ಸಾವಿರ
ಇರಿಗೇಶನ	೩೩೬೪
ಇಂಜಿನಿಯರ	೨೫೪
ಸಿವ್ಹಿಲ	೧೫೪
ಅಬಕಾರಿ	೫೩
ವನಗಾವಲು	೧೩೬
ಲೋಕಲಬೋರ್ಡಿಗೆ ಗ್ರ್ಯಾಂಟು	೧೫
ಸಾಕ್ಷಿದಾರರ ಫೀ	೧೫
ಪೇಶವೇ ದರಬಾರ	೫
ಸರಕಾರೀ ವಕೀಲರ ಫೀ	೧೨
ಸ್ಕಾಲರಶಿಪ್ಸ	೧೬
ಇಸ್ಲಾಮಿಯಾ ಕಾಲೇಜ	೧೯
ಹಾಯಸ್ಕೂಲುಗಳ ಗ್ರ್ಯಾಂಟು	೨೦೬
ರಿಫಾರ್ಮ್ಸ	೩೦
ಶಿಕ್ಷಣದ ಗ್ರ್ಯಾಂಟು	೧೦೯
ಇಮಾರತಿ ದುರಸ್ತಿ	೧೭೦

ದಿವಾನರ ಒಂದು ಸ್ಥಳ ಕಡಿಮೆ ಮಾಡಬೇಕೆಂಬ ವಿಚಾರದಲ್ಲಿ ಕಮೀಟಿ ಮೆಂಬರರಾದ ಶ್ರೀ. ಡೊಂಗರಸಿಂಗರು ವಿರುದ್ಧ ಮತ ಕೊಟ್ಟಿದ್ದಾರೆ. ಹೊಸ ಸುಧಾರಣೆಯ ಪ್ರಕಾರ ಗವರ್ನರರ ಎಲ್ಲ ಕೌನ್ಸಿಲರರು ದಿವಾನರೇ ಆಗುವದರಿಂದ, ಸದ್ಯ ಈ ಸ್ಥಳಗಳನ್ನು ಕಡಿಮೆ ಮಾಡಬಾರದೆಂದು ಶ್ರೀ. ಡೊಂಗರಸಿಂಗರ ಮತ. ಶಿಕ್ಷಣ ಖಾತೆಯಲ್ಲಿ ತೋರಿಸಿದ ಕಡತಕ್ಕೆ ಪ್ರೊ. ಹುಶೇನ ರಹಿಮತುಲ್ಲಾ ಇವರು ಮತ ಕೊಟ್ಟಿಲ್ಲ. ರಿಫಾರ್ಮ್ಸ ಖಾತೆಯಲ್ಲಿ ಮೂರು ಲಕ್ಷದ ಉಳಿತಾಯ ತೋರಿಸಿದ್ದಾರೆ. ಅದು ಹಾಗಿರುವದೇ ಇಲ್ಲ. ಹೊಸ ಸುಧಾರಣೆಯ ಪ್ರಕಾರ ಆಗಬೇಕಾಗುವ ಚುನಾವಣೆಯ ದೆಸೆಯಿಂದ ನಾಲ್ಕು ಲಕ್ಷ ಬೇಕಾದಾವೆಂದು ಅಂದಾಜು ಮಾಡಿದ್ದರು, ಆದರೆ ಈ ವರ್ಷ ಚುನಾವಣೆಯು ರದ್ದಾದ್ದರಿಂದ, ಒಂದು ಲಕ್ಷ ರೂಪಾಯಿಗಳು ಅತ್ತಿತ್ತ ವೆಚ್ಚವಾಗಿ, ಮೂರು ಲಕ್ಷ ಉಳಿದಿವೆ. ಇವನ್ನು ಉಳಿತಾಯದಲ್ಲಿ ತೋರಿಸಿದ್ದು, ಇದೊಂದೇ ವರ್ಷದ ಮಟ್ಟಿಗೆ ಇರುತ್ತದೆ. ಪಗಾರ ಕಡಿಮೆ ಮಾಡುವ ವಿಷಯದಲ್ಲಿ ಶ್ರೀ. ಜೋಗರ ಠರಾವಿಗಿಂತ ಬೇರೆ ರೀತಿಯಿಂದ ಮೂವರು ಮೂರು ಟೀಪ್ಪಣಿ ಹಾಕಿದ್ದು ಬೆಸಗ್ಲ ಕಾಮತ ಮತ್ತು ವಾಯಿಲ್ಸರಿಂದ ೨೫ ಲಕ್ಷ ಮತ್ತು ನಾಮದಾರ ವಕೀಲರಿಂದ ೨೬॥ ಲಕ್ಷದ ಉಳಿತಾಯವಾಗುವದು. ಆಲ ಇಂಡಿಯಾ ಮತ್ತು ಪ್ರಾಂತಿಕ ಸರ್ವೀಸದವರ ಸಂಬಳ ಕಡಿಮೆ ಮಾಡಬಾರದೆಂದು ಮಿ. ಹಂಫ್ರಿಸಾಹೇಬರ ಮತವು. ಹೀಗೆ ಮಾಡಿದರೆ-ಸರಕಾರದ ಮೇಲೆ ವಚನಭಂಗದ ಆರೋಪ ಬರುವದಲ್ಲದೆ, ನೈತಿಕ ದೃಷ್ಟಿಯಿಂದಲೂ ವಿಶ್ವಾಸಘಾತಕವಾಗುತ್ತದೆಂದು ಇವರೆನ್ನುವರು. ದೊಡ್ಡ ದೊಡ್ಡ ಕಾಮದಾರರ ಸಂಬಳ ಕಡಿಮೆ ಮಾಡುವದು ಮಾತ್ರ ವಚನಭಂಗ, ಬಡವರದು ವಚನಭಂಗವಲ್ಲೆಂಬ ನೀತಿಶಾಸ್ತ್ರವನ್ನು ಈ ಸಾಹೇಬರು ಎಲ್ಲಿಂದ ತಂದರು?

ಹಾವೇರಿ ಮ್ಯುನಿಸಿಪಾಲಿಟಿಯ ಚುನಾವಣೆಯು

—(೦)—

ಮೂವರ ಹೇಳಿಕೆ ಮಣ್ಣುಗೂಡಿತು,

—(೦)—

ಮೂವರೇ ಪಂಚರು ಬೇಡ; ಇನ್ನಿಬ್ಬರನ್ನು ನೇಮಿಸಬೇಕೆಂದು ವಿಜಯದಲ್ಲಿ ಬಂದ ಲೇಖದ ವಿರುದ್ಧ ಕೇವಲ ಹಟದಿಂದ ಮೂವರೇ ಕೂಡಿ, ಇಂಥಿಂಥವರೇ ಪಂಚರಾಗಬೇಕೆಂದು ಹೇಳಿದ ನಿರ್ಣಯವು ಬ್ರಾಹ್ಮಣ, ಲಿಂಗಾಯತ ಮೊದಲಾದ ಕೆಲ ಉಮೇದವಾರರಿಗೆ ಸಮ್ಮತವಾಗಲಿಲ್ಲ. ಆದ್ದರಿಂದ ಚುನಾವಣೆಯು ಯಥಾ ಪ್ರಕಾರವಾಗುವದು, ಇದರಿಂದ ಪಂಚರು ಹೇಳಿದ್ದ ಹೆಸರುಗಳನ್ನೂ ಪಂಚರ ನಿರ್ಣಯವನ್ನು ಒಪ್ಪದೆ, ಸ್ವತಂತ್ರವಾಗಿ ಉಮೇದವಾರರಾಗಿ ನಿಂತವರ ಹೆಸರುಗಳನ್ನೂ ಕೊಟ್ಟಿದ್ದೇವೆ. ತನ್ನ ಮತಕ್ಕೆ ವಿರುದ್ಧವಾಗಿದ್ದವರಿಗೆ ಹೋಟು ಕೊಡಬೇಡಿರೆಂದು ಪಂಚರು ಹೇಳುತ್ತಿದ್ದಾರೆ. ಚುನಾವಣೆಯ ದಿವಸ ಪಿಕೆಟಿಂಗ ಮಾಡುವರೆಂದು ಊಗಳೇ ವರ್ತಮಾನವಾಗಿದೆ.

ಪಂಚರ ನಿರ್ಣಯ ಹಿಂದೂ ಜನರ ಮಟ್ಟಿಗೇ ಇದೆ, ಮುಸಲಮಾನರ ಹೆಸರು ತಿಳಿದಿಲ್ಲ. ಅವರಲ್ಲಿ ಮೊದಲಿನಿಂದ ಇಬ್ಬಣವಿದ್ದು, ಹಿಂದೂ ಜನರ ಚುನಾವಣೆಯಾಗದಿದ್ದರೂ, ಮುಸಲಮಾನರಲ್ಲಿ ಪೋಲಿಂಗ ನಡೆಯುತ್ತಿತ್ತು. ಒಂದು ಕೆಲಸವನ್ನು ಅರಗಬ್ಬ ಮಾಡದೆ, ಪೂರಾ ಮಾಡುವಂಥ ಕರ್ತೃತ್ವವಿದ್ದರೇ ಪಂಚರಾಗಬೇಕು. ಪಂಚರನ್ನು ಮಾಡಬೇಕು. ಹಾವೇರಿಯಂಥ ಅಪಹಾಸ್ಯವು ಎಲ್ಲಿಯೂ ಆಗಿರಲಿಕ್ಕಿಲ್ಲ?

ಪಂಚರಿಂದ ನಿಯಮಿಸಲ್ಪಟ್ಟವರು

೧ನೆಯ ವಾರ್ಡ.

೧) ಸಿದ್ದಪ್ಪಾ ಕರಿಯಪ್ಪಾ ಹೊಸಮನಿ.
೨) ಉಜ್ಜನಗೌಡಾ ಶಂಕರಗೌಡಾ ಪಾಟೀಲ.
೩) ಹಣಮಂತ ಚಿಕೆರ್ಡ ಕುಲಕರ್ಣಿ ವಕೀಲ,
೪) ವೆಂಕಟೇಶ ಗುರುರಾಜ ಛವಡಿ,

೨ನೆಯ ವಾರ್ಡ

೧) ಮೋಡವಾಳಪ್ಪಾ ಮಾಸೂರ,
೨) ಮಡಿವಾಳಪ್ಪಾ ಹತ್ತಿ.
೩) ಚನ್ನಪ್ಪಾ ಪುಟ್ಟಪ್ಪಾ ಚವಸಟ್ಟಿ.

೩ನೆಯ ವಾರ್ಡ

೧) ಮಖನಲಾಲ ಬುಲಾಖಿ ದಾಸಗುಪ್ತ.
೨) ಪುಟ್ಟಪ್ಪಾ ಅಪ್ಪಾಜಿಪ್ಪಾ ಮಣಸಿನಕಾಯಿ,

ಪಂಚರ ಮಾತು ಮೀರಿ ನಿಂತವರು.

೧ನೆಯ ವಾರ್ಡ

೧) ಶ್ರೀಕಂಠ ಶಂಕರ ನಾಯಿಕ ವಕೀಲ.
೨) ರಾಘವೇಂದ್ರ ಗುರಾಚಾರ್ಯ ಕಾತಗಡೆ ಸರಾಫ
೩) ನಾರಾಯಣಾಚಾರ್ಯ ಸುಬ್ಬಾಚಾರ್ಯ ಕಟ್ಟಿ
೪) ಗೌಡಪ್ಪಾ ಈರಪ್ಪಾ ಪಂಪಣ್ಣವರ.
೫) ಶಂಕರೆಪ್ಪಾ ಪರಶುರಾಮಪ್ಪಾ ಸಿಡಳ್ಳಿ.

೨ನೆಯ ವಾರ್ಡ

೧) ಮುರಿಗೆಪ್ಪಾ ಗುರುಶಾಂತಪ್ಪಾ ಹೊರಡಿ,

೩ನೆಯ ವಾರ್ಡ

೧) ಮುರಿಗೆಪ್ಪಾ ಸಂಗನಬಸಪ್ಪಾ ಮಾಗನವಿ,
೨) ಲಚಮಪ್ಪಾ ಕಂಬಾಳಿ.

ಚಕ್ರಾಣಿ ಬೇರು

—(೧)—

ಮಾರಿಕಾದ ಮೇಲೆ ಚಕ್ರಾಣಿ ಎಂಬ ವನಸ್ಪತಿಯು ಬಹಳಷ್ಟು ಗುಣಕೊಡುವಂತಹದಾಗಿರುತ್ತದೆಂದು ಇಲ್ಲಿಯ ಕಾಂಗ್ರೆಸ ಕಮೀಟಿಯವರು ಕಂಡುಕೊಂಡಿದ್ದಾರೆ. ಇವರು ೪೦ ಜನರಿಗೆ ಇದರ ರಸ ಕೊಟ್ಟರು. ಇವರಲ್ಲಿ ೩೧ ಜನರು ಯಮದೂತರನ್ನು ಹಿಂದಕ್ಕೆ ಅಟ್ಟಿದರು.

ಈ ಬೇರಿನ ರಸವನ್ನು ನಾಲ್ಕು ಸಾರೆ ಕೊಡುವದರಿಂದ ರೋಗದ ವಿಕಾರಗಳೆಲ್ಲ ಹಿಂಗಿ ಹೋಗುತ್ತವೆ. ಬೇನೆ ನಿಂತ ಬಳಿಕ ಒಂದೆರಡು ದಿವಸ ನಿಂಬೀ ಹಣ್ಣಿನ ರಸ ಹಾಕಿದ ನೀರನ್ನು ರೋಗಿಯು ನೀರಡಿಸಿದಂತೆ ತುಸು ತುಸು ಕೊಡುತ್ತಾ ಹೋಗಬೇಕು. ಎರಡು ದಿವಸಗಳಾದ ನಂತರ ಕಾಫೀ ಕೊಡಬೇಕು. ಅನಂತರ ಅಕ್ಕೀ ಗಂಜಿ, ಮುಂದೆ ತಡಕೊಳ್ಳುವ ಸಾಮರ್ಥ್ಯ ಬಂದಂತೆ ಮೆತ್ತನ್ನ ಅನ್ನ ಕೊಡುತ್ತಾ ಹೋಗಬೇಕು.

ಚಕ್ರಾಣಿಯು ಸಿರ್ಸಿ, ಅಂಕೋಲಾ, ತೀರ್ಥಹಳ್ಳಿಯ ನಿಟ್ಟಿನಲ್ಲಿ ಸಿಗುತ್ತದೆ. ಅವಶ್ಯಕರು ಅಲ್ಲಿಯ ಕಾಂಗ್ರೆಸ ಕಮೀಟಿಗಳಿಗೆ ಬರೆದು ತರಿಸಿಕೊಳ್ಳಬೇಕು.

ಜೂನ ತಿಂಗಳ ೨೭ ನೆಯ ತಾರೀಖಿಗೆ ಈ ಯೂರಲ್ಲಿ ಮಾರಿಕಾ ಪ್ರಾರಂಭವಾಯಿತು. ಈ ಒಂದು ತಿಂಗಳಲ್ಲಿ ೫೦ ಜನರಿಗೆ ರೋಗಬಂದು ೩೪ ಜನರು ಸತ್ತಿದ್ದಾರೆ.

ಕಾಂಗ್ರೆಸ ಕಮೀಟಿಯಿಂದ ಚಕ್ರಾಣಿಬೇರು ತಕ್ಕೊಂಡವರ ಬಾಬವಾರು-

ಔಷಧ ತಕ್ಕೊಂಡವರು	೪೦
ಇವರಲ್ಲಿ ಗುಣವಾಗುತ್ತಿದ್ದವರು	೨೨
ಪೂರಾ ಗುಣವಾದವರು	೯
ಸಮಾಚಾರ ಗೊತ್ತಿಲ್ಲದವರು	೪
ಸತ್ತವರು	[illegible]

ಗದಗಿನಲ್ಲಿ ಕಾಲರಾದ ಭಯಕ್ಕಾಗಿ ಪೇಟೆಯಲ್ಲಿ ಒಂದೂ ಹಣ್ಣು ಮಾರದಂತೆ ಬಂದೋಬಸ್ತು ಮಾಡಿದ್ದಾರೆ.

ರೌಂಡಟೇಬಲಿನ ಡೆಲಿಗೇಟರು.

—(೧)—

ಈ ಮೊದಲು ಪ್ರಸಿದ್ಧವಾದವರ ಹೊರತು ಹೊಸದಾಗಿ ಇಂದು ನಾಳೆ ಇಷ್ಟರಲ್ಲಿ ಈ ಕೆಳಗಿನವರಿಗೆ ಆಮಂತ್ರಣ ಬರುವದು,

೧ ಮೌ. ಶೌಕತಅಲಿ, ೨ ಸರ ಅಲಿ ಇಮಾಮ ೩ ಶ್ರೀ. ಸರೋಜಿನಿನಾಯುಡು ೪ ಡಾಕ್ಟರ ಅನ್ಸಾರಿ.

ಅಗ್ಗಳತೆಯ ಕಾಲ
ಅಥವಾ
ಪಗಾರದಲ್ಲಿ ಕಾಟು ಕಸರು.

ಮಳೆ, ಮರಣ, ಮೋಂಬಟ ಇವು ಯಾರಿಗೂ ತಿಳಿದಿಲ್ಲೆಂಬದು, ಬಹು ದಿವಸದ ಅನುಭವ - ಈ ಐದಾರು ತಿಂಗಳಿಂದ ತುಸು ಧಾನ್ಯದ ಧಾರಣೆ ಮಾತ್ರ ಇಳಿದಿದ್ದು ಈಗಾಗಲೇ ಮೂರು ವರ್ಷದ ಮಗುವಿನಿಂದ ೧೦೦ ವರ್ಷದ ಮುದುಕರವರೆಗೆ ಅಗ್ಗಳತೆಯ ಕಾಲವೆಂದು ಬೊಬ್ಬಾಟ. ಈಗ ಇಪ್ಪತ್ತೈದೇ ವರ್ಷದ ಕೆಳಗೆ ಎಲ್ಲ ಜಿನಸುಗಳೂ ಅಗ್ಗವಾಗಿದ್ದವು (ಈಗಿನ ಮಾನಕ್ಕೆ ಸರಿ ಹಚ್ಚಿದರೆ) ಆಗ ಅಗ್ಗಳತೆಯ ಕಾಲವೆಂದು ಯಾರೂ ಅನ್ನುತ್ತಿದ್ದಿಲ್ಲ.

ಈಗ ಅಗ್ಗವಾದದ್ದಾದರೂ ಏನು ನೋಡೋಣ -

(೧) ಧಾನ್ಯ ಮತ್ತು ಅರವೆ ಇವು ಮಾತ್ರ ತುಸು ಅಗ್ಗವಾಗಿವೆಂಬ ಕನಸು ಮಾತ್ರ ಬಿದ್ದದೆ.

(೨) ಸಕ್ಕರಿ, ಚಿಮಣಿ ಎಣ್ಣೆ, ಸ್ಟೇಶನರಿ ಸಾಮಾನು, ಪರದೇಶದ ಅರಿವೆ ಇವೆಲ್ಲವುಗಳ ಧಾರಣೆಯು ಮೊದಲಿನಂತೇ ತುಟ್ಟಿ ಆವೆ.

(೩) ಟಪಾಲು, ರೇಲ್ವೆ, ನೋಂದಣಿ, ಸ್ಟ್ಯಾಂಪು ಕೋರ್ಟ ಕಚೇರಿ ಇವುಗಳಲ್ಲಿ ಸಾಗತಕ್ಕ ವ್ಯವಹಾರವು ಮೊದಲಿನಂತೇ.

(೪) ಶಿಂಪಿಗರ ಕೂಲಿ, ಛಾಪಿಸುವ ದರ, ಅಗಸರ ದರ, ಕಂಬಾರ, ಬಡಿಗ, ಹಜಾಮ ಮೊದಲಾದವರ ದರವು ಮೊದಲಿನಂತೇ ಇರುತ್ತದೆ. ಒಕ್ಕಲತನದ ಭೂಮಿ ಮಾತ್ರ ಜೋಳದ ಧಾರಣೆಗೆ ಸರಿಯಾಗಿ ಆಗಿರುತ್ತವೆ.

ಪ್ರಾಪಂಚಿಕರ ಖರ್ಚು ಮೊದಲು ೨೦ ರೂ ಹಿಡಿಯುತ್ತಿದ್ದವನಿಗೆ ಬಹಳಂದರೆ ಈಗ ೧೮ ರೂ ಹಿಡಿಯುತ್ತಿರಬಹುದು. ಅದು ಬಿಗಿಯಿಂದ ಖರ್ಚು ಮಾಡುವವನಿಗೆ, ಹೀಗಿದ್ದೂ ಅಗ್ಗಳತೆಯ ಕಾಲವೆನಿಸಿದೆ. - ಹೆಸರು ಮಾತ್ರ ಅಗ್ಗಳತೆಯ ಕಾಲ, ಕಿಸೆಯಲ್ಲಿ ಮಾತ್ರ ರೊಕ್ಕ ಉಳಿಯುವಂತಿಲ್ಲ.

